ಡಿಸೆಂಬರ್ 29, 2024
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1965
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## 2.42 ಕೋಟಿ ಚಿನ್ನ ಖರೀದಿಸಿ ವಂಚಿಸಿದ

# ಸಮಾಜ ಸೇವಕಿ ಶ್ವೇತಾ ಗೌಡ!



## ಡಿ.ಕೆ.ಸುರೇಶ್ ತಂಗಿ ಎಂದೇಳಿ 14 ಕೆಜಿ ಬಂಗಾರಕ್ಕೆ ಪಂಗನಾಮ ಹಾಕಿದ ಐಶ್ವರ್ಯಾ!





## ಗರಗಸದಿಂದ ರೈತನ ಪೀಸ್ ಪೀಸ್ ಮಾಡಿದ ಸೈಕೋ!

## ಬಿಲ್ ಕಲೆಕ್ಟರ್ ಲೋಕೇಶ ವಸೂಲಿ ಮಾಡಿದ ಮನೆ ಕಂದಾಯ ಗುಳುಂ ಸ್ವಾಹ!





## ಒಂದೂವರೆ ಸಾವಿರಕ್ಕೆ ಬಾಳೆಹಣ್ಣು ವ್ಯಾಪಾರಿ ಮರ್ಡರ್!

## ಹೊನ್ನಾವರ: ಅಣ್ಣನಿಂದಲೇ ತಮ್ಮನ ಕೊಲೆ!




# ನೀವು ಡಿಜಿಟಲ್ ಅರೆಸ್ಟ್ ಆಗಬಹುದು... ಹುಷಾರ್!



**ನೀವು ಸ್ವಲ್ಪ ಎಚ್ಚರ ತಪ್ಪಿದರೂ ನಿಮ್ಮ ಖಾತೆಗೆ ಕನ್ನ ಹಾಕಿ ಹಣ ಲಪಟಾಯಿಸುವ ಸೈಬರ್ ವಂಚಕರಿದ್ದು ಅವರು ಬೇರೆ ಬೇರೆ ವೇಷಗಳಲ್ಲಿ ನಿಮ್ಮನ್ನು ಫಾಲೋ ಮಾಡುತ್ತಲೇ ಇರುತ್ತಾರೆ. ಹೀಗಾಗಿ ಮೊಬೈಲ್ ಗಳಲ್ಲಿ ಬರುವ ಕರೆಗಳ ಸತ್ಯಾಸತ್ಯತೆಯನ್ನು ಅರಿಯದೆ ಹೋದರೆ ಅದರಿಂದ ವಂಚನೆಗೊಳಗಾಗುವ ಸಾಧ್ಯತೆಗಳನ್ನು ತಳ್ಳಿಹಾಕಲಾಗದು. ಇದೀಗ ದೇಶದಲ್ಲಿ ಡಿಜಿಟಲ್ ಅರೆಸ್ಟ್ ಶುರುವಾಗಿದೆ. ಇದರಲ್ಲಿ ಸಿಲುಕಿ ಹಣ ಕಳೆದುಕೊಂಡವರ ದೊಡ್ಡ ಪಟ್ಟಿಯೇ ಇದೆ. ಹೀಗಾಗಿ ನೀವು ಡಿಜಿಟಲ್ ಅರೆಸ್ಟ್ ಆಗುವ ಮುನ್ನ ಎಚ್ಚರಿಕೆ ವಹಿಸುವುದು ಒಳಿತು.**

ಸೈಬರ್ ವಂಚಕರು ಹೊಸ, ಹೊಸ ವಿಧಾನಗಳನ್ನು ಹುಡುಕುತ್ತಲೇ ಇರುತ್ತಿರುತ್ತಾರೆ. ಹೀಗಾಗಿ ಅವರು ಹೊಸ ಖೆಡ್ಡಾಗಳನ್ನು ತೋಡುತ್ತಾ ಅದರಲ್ಲಿ ಜನರನ್ನು ಕೆಡವುತ್ತಾ ಮುಂದೆ ಸಾಗುತ್ತಲೇ ಇರುತ್ತಾರೆ. ಇದರಲ್ಲಿ ಇತ್ತೀಚೆಗೆ ಭಾರೀ ಸುದ್ದಿ ಮಾಡುತ್ತಿರುವುದು ಡಿಜಿಟಲ್ ಅರೆಸ್ಟ್. ಈ ಡಿಜಿಟಲ್ ಅರೆಸ್ಟ್ ಎಂದರೇನು? ಇದರಲ್ಲಿ ಸೈಬರ್ ಕಳ್ಳರು ಹೇಗೆ ಸಾರ್ವಜನಿಕರನ್ನು ವಂಚಿಸುತ್ತಾರೆ? ಎಂಬಿತ್ಯಾದಿ



ವಿಚಾರಗಳನ್ನು ನಾವು ಅರಿತು ಕೊಂಡರೆ ಆಗಲಿರುವ ಅನಾಹುತಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ.

ಹಾಗೆನೋಡಿದರೆ ಡಿಜಿಟಲ್ ಅರೆಸ್ಟ್ ಆದವರ ಪೈಕಿ ಹೆಚ್ಚಿನವರು ವಿದ್ಯಾವಂತರು, ಸಾಫ್ಟ್‌ವೇರ್, ಸರ್ಕಾರಿ ಉದ್ಯೋಗಿಗಳು, ನಿವೃತ್ತ ಅಧಿಕಾರಿಗಳು ಹೀಗೆ ತರಾವರಿಯ ಜನರಿದ್ದಾರೆ. ಆದ್ದರಿಂದ ಒಂದು ಫೋನ್, ವಿಡಿಯೊ ಕರೆ ಬಂದಾಗ ಅದನ್ನು ನಿಭಾಯಿಸುವ ಜಾಣ್ಮೆ ನಮ್ಮಲ್ಲಿ ಇಲ್ಲದೆ ಹೋದರೆ ಅದೇ ಕರೆ, ವೀಡಿಯೋ ಕಾಲ್ ಮೂಲಕ ನಮ್ಮನ್ನು ನಮ್ಮ ಮನೆಗಳಲ್ಲೇ ಬಂಧನದಲ್ಲಿರಿಸಿ, ಅವರು ಲಕ್ಷ, ಕೋಟಿಗಳ ಲೆಕ್ಕದಲ್ಲಿ ಸುಲಿಗೆ ಮಾಡಿ ಬಿಡುತ್ತಾರೆ. ಇದು ಮೇಲ್ನೋಟಕ್ಕೆ ಅಚ್ಚರಿಯಂತೆ ಕಾಣಬಹುದು ಆದರೆ ಇದರ ಹಿಂದಿನದು ಭಯಾನಕವಾಗಿರುತ್ತದೆ.

ಡಿಜಿಟಲ್ ಅರೆಸ್ಟ್ ಒಂದು ಬಗೆಯ ಸೈಬರ್ ವಂಚನೆಯಾಗಿದ್ದು ಪೊಲೀಸ್, ಜಾರಿ ನಿರ್ದೇಶನಾಲಯ (ಇ.ಡಿ), ಸಿಬಿಐ ಮುಂತಾದ ತನಿಖಾ ಸಂಸ್ಥೆಗಳ ಅಧಿಕಾರಿಗಳ ಹೆಸರಿನಲ್ಲಿ ಜನರಿಗೆ ಕರೆ ಮಾಡಿ, ಅವರ ಮೇಲೆ ಸುಳ್ಳು ಆರೋಪ ಹೊರಿಸಿ, ಹೆದರಿಸಿ ಬೆದರಿಸಿ, ನಂತರ ಹಣಕ್ಕೆ ಬೇಡಿಕೆ ಇಡುವುದು, ಆನ್‌ಲೈನ್ ಬ್ಯಾಂಕಿಂಗ್ ಸೇರಿದಂತೆ ಹಲವು ಮಾರ್ಗಗಳ ಮುಖಾಂತರ ಅವರಿಂದ ಹಣ ಸುಲಿಗೆ ಮಾಡುವುದು ಡಿಜಿಟಲ್ ಅರೆಸ್ಟ್‌ನ ಮುಖಗಳಾಗಿವೆ.

ಹಾಗಾದರೆ ಡಿಜಿಟಲ್ ಅರೆಸ್ಟ್‌ನ್ನು ವಂಚಕರು ಹೇಗೆ ಮಾಡುತ್ತಾರೆ ಎಂಬುದನ್ನು ನೋಡುತ್ತಾ ಹೋದರೆ, ಮೊದಲು ಸಂತ್ರಸ್ತರನ್ನು ಫೋನ್ ಮೂಲಕ ಸಂಪರ್ಕಿಸುತ್ತಾರೆ. ತಾವು ಸಿಬಿಐ, ಆರ್‌ಬಿಐ, ತೆರಿಗೆ, ನಾರ್ಕೋಟಿಕ್ಸ್ ಅಧಿಕಾರಿಗಳು ಎಂದು ಪರಿಚಯಿಸಿ ಕೊಳ್ಳುತ್ತಾರೆ. ನಿಮಗೆ ನಿಷೇಧಿತ ಅಥವಾ ಅಕ್ರಮ ವಸ್ತು/, ಸರಕು ಕೊರಿಯರ್ ನಲ್ಲಿ ಬಂದಿದೆ ಅಥವಾ ನೀವು ಅಂಥ ವಸ್ತುಗಳನ್ನು ಕೊರಿಯರ್ ಮೂಲಕ ಕಳಿಸಿದ್ದೀರಿ ಎಂದೋ ವಾದಿಸುತ್ತಾರೆ. ಇಲ್ಲವೇ ಹಣ ಅಕ್ರಮ ವರ್ಗಾವಣೆ, ಸೈಬರ್ ಅಪರಾಧದ ಆರೋಪ ಹೊರಿಸುತ್ತಾರೆ. ಆ ನಂತರ ಸ್ಕೈಪ್, ವ್ಯಾಟ್ಸ್ ಆ್ಯಪ್ ಮತ್ತು ಇತರ ವಿಡಿಯೊ ತಂತ್ರಜ್ಞಾನದ ಮೂಲಕ ಸಂತ್ರಸ್ತರೊಂದಿಗೆ ಸಂಪರ್ಕ ಸಾಧಿಸುತ್ತಾರೆ.

ಅಕ್ರಮದ ಸಂಬಂಧ ವಿಚಾರಣೆಗಾಗಿ ನಿಮ್ಮನ್ನು ಬಂಧಿಸಲಾಗಿದೆ (ಕಂಪ್ಯೂಟರ್, ಮೊಬೈಲ್ ಪರದೆಯಲ್ಲಿ ಕಾಣುವಂತೆ ಒಂದೇ ಜಾಗದಲ್ಲಿ, ಮನೆ, ಕೊಠಡಿಗಳಲ್ಲಿ ಕೂರುವುದು) ಎಂದು ಬೆದರಿಕೆ ಒಡ್ಡುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ

✍ಬಿ.ಎಂ. ಲವಕುಮಾರ್

ಸಂತ್ರಸ್ತರ ಮನೆಗಳಲ್ಲಿಯೇ ಅವರನ್ನು ಬಂಧನಕ್ಕೊಳಪಡಿಸಲಾಗಿರುತ್ತದೆ. ಸಂತ್ರಸ್ತರನ್ನು ನಂಬಿಸುವ ಸಲುವಾಗಿ ತಾವು ಯಾವ ತನಿಖಾ ಸಂಸ್ಥೆಯ ಅಧಿಕಾರಿಗಳೆಂದು ಹೇಳಿರುತ್ತಾರೋ, ಅಂಥ ಕಚೇರಿಯ ವಾತಾವರಣವನ್ನು ಸೃಷ್ಟಿಸಿರುತ್ತಾರೆ. ಅಧಿಕಾರಿಗಳು ಎನ್ನುವುದನ್ನು ಸಾಬೀತುಪಡಿಸುವ ಸಲುವಾಗಿ ನಕಲಿ ಗುರುತಿನ ಚೀಟಿಗಳನ್ನು ಕೂಡ ತೋರಿಸುತ್ತಾರೆ. ಕೆಲವೊಮ್ಮೆ ನಕಲಿ ಅರೆಸ್ಟ್ ವಾರಂಟ್ ಗಳನ್ನೂ ಪ್ರಸ್ತುತ ಪಡಿಸುತ್ತಾರೆ. ಕೂತಲ್ಲಿಂದಲೇ ಅವುಗಳನ್ನು ವಿಡಿಯೊ ಮೂಲಕ ನೋಡುವವರು ಭಯಭೀತರಾಗಿ ಅನಿವಾರ್ಯವಾಗಿ ಒಪ್ಪಿಕೊಂಡು ಬಿಡುತ್ತಾರೆ.

ನಿಮ್ಮಿಂದ ಕಾನೂನು ಉಲ್ಲಂಘನೆಯಾಗಿದೆ. ನಿಮ್ಮ ಫೋನ್ ಅನ್ನು ಅಕ್ರಮಕ್ಕೆ ಬಳಸಲಾಗಿದೆ ಎಂದೆಲ್ಲ ಹೇಳಿ, ವಿಚಾರಣೆ, ಜೈಲು, ಶಿಕ್ಷೆ ಬಗ್ಗೆ ಪ್ರಸ್ತಾಪಿಸಿ, ಸಂತ್ರಸ್ತರಲ್ಲಿ ಭಯ ಹುಟ್ಟಿಸಲಾಗುತ್ತದೆ. ನಂತರ ಹಣಕ್ಕೆ ಬೇಡಿಕೆ ಇಡುತ್ತಾರೆ. ಇಂತಿಷ್ಟು ಹಣ ಕೊಟ್ಟರೆ ಈ ಪ್ರಕರಣದಿಂದ ಮುಕ್ತಗೊಳಿಸುವುದಾಗಿ ಹೇಳುತ್ತಾರೆ. ಈ ಸಮಯದಲ್ಲಿ ಬೇರೆ ಯಾರನ್ನೂ ಸಂಪರ್ಕಿಸದಂತೆ ಮಾಡುತ್ತಾರೆ. ಆನ್‌ಲೈನ್ ಬ್ಯಾಂಕಿಂಗ್ ಮತ್ತಿತರ ಮಾರ್ಗಗಳ ಮೂಲಕ ಹಣ ವನ್ನು ಮೂರನೇ ವ್ಯಕ್ತಿಯ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ

ಸಾಮಾನ್ಯವಾಗಿ ಸಂತ್ರಸ್ತರಿಗೆ ಮನೆಗಳಲ್ಲೇ ದಿಗ್ಬಂಧನ ವಿಧಿಸಲಾಗುತ್ತದೆಯಾದರೂ ಕೆಲವೊಮ್ಮೆ ಅವರನ್ನು ಹೊರಗೆ ಬರುವಂತೆ ಮಾಡಿ, ಬೇರೊಂದು ಸ್ಥಳದಲ್ಲಿ ಕೂಡಿಹಾಕುವುದುಂಟು. ಸಂತ್ರಸ್ತರಿಂದ ಹಣ ವರ್ಗಾವಣೆ ಆಗುವವರೆಗೆ ವಂಚಕರು ಸಂತ್ರಸ್ತರನ್ನು ಡಿಜಿಟಲ್ ಬಂಧನದಲ್ಲಿ ಇರಿಸುತ್ತಾರೆ. ಹಣ ಕೊಟ್ಟು ಹೊರ ಬಂದ ಬಳಿಕ ಇದು ಮೋಸ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಅಪರಿಚಿತ, ಅಂತರರಾಷ್ಟ್ರೀಯ ಫೋನ್‌ಕರೆಗಳ ಬಗ್ಗೆ ಎಚ್ಚರ ವಹಿಸಬೇಕು. ಅಂಥ ಸಂದರ್ಭ ಸೃಷ್ಟಿಯಾದರೆ, ಆತಂಕಕ್ಕೊಳಗಾಗದೇ ಧೈರ್ಯದಿಂದ ಮಾತಾಡಬೇಕು. ತನಿಖಾ ಸಂಸ್ಥೆಗಳ ಅಧಿಕಾರಿಗಳು ಎಂದು ಹೇಳಿಕೊಂಡು ಯಾರಾದರೂ ಕರೆ ಮಾಡಿದರೆ, ಅದನ್ನು ವಿವರವಾಗಿ ಪರಿಶೀಲಿಸಬೇಕು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಮುಖ್ಯ ವಿಚಾರ ಏನೆಂದರೆ, ತನಿಖಾ ಸಂಸ್ಥೆಗಳ ಅಧಿಕಾರಿಗಳು ಎಂದೂ ಫೋನ್ ಕರೆ ಮಾಡಿ ಹಣಕ್ಕೆ ಬೇಡಿಕೆ ಇಡುವುದಿಲ್ಲ. ಸರ್ಕಾರಿ ಸಂಸ್ಥೆಗಳು ತಮ್ಮ ಅಧಿಕೃತ ಸಂವಹನಕ್ಕೆ ಸ್ಕೈಪ್, ಝೂಮ್ ಅಥವಾ ವಾಟ್ಸ್ ಆ್ಯಪ್‌ನಂಥ ವಿಡಿಯೊ ತಂತ್ರಾಂಶಗಳನ್ನು ಬಳಸುವುದಿಲ್ಲ. ಡಿಜಿಟಲ್ ಅರೆಸ್ಟ್ ಎಂಬ ಕಾನೂನು, ನಿಯಮ ದೇಶದಲ್ಲಿ ಇಲ್ಲ ಎಂಬುದೂ ಗಮನದಲ್ಲಿರಬೇಕು. ಮತ್ತೊಂದು ಮುಖ್ಯ ವಿಚಾರ,




ಈಗಲೇ ಕೆಲಸ ಆಗಬೇಕು, ಪ್ರಕರಣ ಇವತ್ತೇ ಮುಗಿಯಬೇಕು ಎನ್ನುವಂತೆ ಒತ್ತಡ ಹೇರಿ, ತುರ್ತು ಸ್ಥಿತಿ ಸೃಷ್ಟಿಸುವವರನ್ನು ನಂಬಬಾರದು. ಯಾವುದೇ ಕಾರಣಕ್ಕೂ ಅಪರಿಚಿತರೊಂದಿಗೆ ಖಾಸಗಿ ವಿಷಯಗಳನ್ನು, ಗೌಪ್ಯ ಮಾಹಿತಿಯನ್ನು ಹಂಚಿಕೊಳ್ಳಬಾರದು. ವಂಚನೆಯ ಬಗ್ಗೆ ಅನುಮಾನ ಬಂದರೆ, ಕೂಡಲೇ ಸೈಬರ್ ಸಹಾಯವಾಣಿ, ಪೊಲೀಸರನ್ನು ಸಂಪರ್ಕಿಸಬೇಕು.

ಸೈಬರ್ ವಂಚನೆಯಿಂದ ಪಾರಾಗಬೇಕು ಎಂದರೆ, ಮೊದಲು ವಂಚಕರ ಕಾರ್ಯವಿಧಾನವನ್ನು ಅರಿಯಬೇಕು. ವಂಚಕರು ಹೇಗೆ ಸೈಬರ್ ಅಪರಾಧಗಳನ್ನು ಎಸಗುತ್ತಾರೆ ಎಂಬ ಬಗ್ಗೆ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ (ಸಿಇಆರ್ ಟಿಐಎನ್) ಮಾಹಿತಿ ಪ್ರಕಟಿಸಿದ್ದು, ಅದರಲ್ಲಿ ಡಿಜಿಟಲ್ ಅರೆಸ್ಟ್ ಬಗ್ಗೆಯೂ ವಿವರಗಳನ್ನು ನೀಡಲಾಗಿದೆ. ಒಂದು ವೇಳೆ ನೀವು ಡಿಜಿಟಲ್ ಅರೆಸ್ಟ್‌ಗೆ ಒಳಗಾಗಿದ್ದ ಪಕ್ಷದಲ್ಲಿ ಮೊದಲು ಮಾಡಬೇಕಾದ ಕೆಲಸ ಬ್ಯಾಂಕ್ ಅನ್ನು ಸಂಪರ್ಕಿಸಿ ಖಾತೆಯನ್ನು ಸ್ಥಗಿತಗೊಳಿಸುವುದು. ನಂತರ ಸೈಬರ್ ಸಹಾಯವಾಣಿ (1930) ಸಂಪರ್ಕಿಸಬೇಕು. ನ್ಯಾಷನಲ್ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್‌ನಲ್ಲಿ ದೂರು ದಾಖಲಿಸಬಹುದು. ತನಿಖೆಯ ಅನುಕೂಲಕ್ಕಾಗಿ, ನಿಮ್ಮ ಕರೆ, ಹಣ ವರ್ಗಾವಣೆಗೆ ಸಂಬಂಧಿಸಿದ ದಾಖಲೆಗಳನ್ನು ಜೋಪಾನವಾಗಿ ಇಟ್ಟುಕೊಳ್ಳಬೇಕು.

ಸೈಬರ್‌ವಂಚನೆ ಯತ್ನ ಮತ್ತು ವಂಚನೆಗೆ ಒಳಗಾದ ಸಂದರ್ಭದಲ್ಲಿ ಅದರ ಬಗ್ಗೆ ದೂರು ನೀಡಲು ರಾಷ್ಟ್ರೀಯ ಮಟ್ಟದಲ್ಲಿ ಸಿಟಿಜನ್ ಫೈನಾನ್ಷಿಯಲ್ ಸೈಬರ್ ಫ್ರಾಡ್ ರಿಪೋರ್ಟಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಅನ್ನು ರೂಪಿಸಲಾಗಿದೆ. 2021ರಲ್ಲಿ ಇದು ಅಸ್ತಿತ್ವಕ್ಕೆ ಬಂದಿದ್ದು ಇದರ ಅಡಿಯಲ್ಲಿ ರಾಷ್ಟ್ರೀಯ ಸೈಬರ್‌ಅಪರಾಧ ದೂರು ನೀಡುವ ಪೋರ್ಟಲ್ www.cybercrime.gov.in ಕಾರ್ಯನಿರ್ವಹಿಸುತ್ತದೆ. ಇದರ ಜೊತೆಗೆ ಸೈಬರ್ ಪ್ರಕರಣಗಳ ಬಗ್ಗೆ ದೂರು ನೀಡುವುದಕ್ಕೆ 1930 ಸಹಾಯವಾಣಿಯನ್ನೂ ಆರಂಭಿಸಲಾಗಿದೆ. ಈ ವ್ಯವಸ್ಥೆ ಜಾರಿಗೆ ಬಂದ ನಂತರ 7.6 ಲಕ್ಷಕ್ಕೂ ಹೆಚ್ಚು ಸೈಬರ್‌ವಂಚನೆ ದೂರು ದಾಖಲಾಗಿದ್ದು, 2,400 ಕೋಟಿಗೂ ಹೆಚ್ಚು ಹಣ ವಂಚಕರ ಕೈ ಸೇರದಂತೆ ತಡೆಯಲಾಗಿದೆ ಎಂದು ಗೃಹ ಸಚಿವಾಲಯವು ಈ ವರ್ಷದ ಆಗಸ್ಟ್‌ನಲ್ಲಿ ಸಂಸತ್ತಿಗೆ ತಿಳಿಸಿದ್ದನ್ನು ಸ್ಮರಿಸಬಹುದು.

ನಕಲಿ ಷೇರು ಮಾರುಕಟ್ಟೆ ಹೂಡಿಕೆಗಳು ಮತ್ತು ಡಿಜಿಟಲ್‌ಅರೆಸ್ಟ್‌ನಂತಹ ಸೈಬರ್ ಹಗರಣಗಳನ್ನು ನಡೆಸುವ ದೊಡ್ಡ ಜಾಲವೇ ದೇಶದಲ್ಲಿ ಕಾರ್ಯಾಚರಿಸುತ್ತಿದೆ. ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್ ಆ್ಯಪ್ ಮತ್ತು ಟೆಲಿಗ್ರಾಂನಂತಹ ಸಾಮಾಜಿಕ ಜಾಲತಾಣಗಳನ್ನು ಬಳಸಿ ಈ ಕೃತ್ಯಗಳನ್ನು ಎಸಗಲಾಗುತ್ತಿದೆ ಎಂಬ ಸಂಗತಿ ಜಾರಿ ನಿರ್ದೇಶನಾಲಯ (ಇ.ಡಿ) ನಡೆಸಿರುವ ತನಿಖೆಯಿಂದ ತಿಳಿದು ಬಂದಿದೆ. ನಕಲಿ ವೆಬ್‌ಸೈಟ್‌ಗಳು ಮತ್ತು ದಾರಿ ತಪ್ಪಿಸುವ ವಾಟ್ಸ್ ಆ್ಯಪ್‌ಗ್ರೂಪ್‌ಗಳನ್ನು ಬಳಸಲಾಗುತ್ತಿದ್ದು, ಇವುಗಳು ಪ್ರತಿಷ್ಠಿತ ಹಣಕಾಸು ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿವೆ ಎಂಬ ರೀತಿಯಲ್ಲಿ ಬಿಂಬಿಸಲಾಗುತ್ತಿದೆ. ನಕಲಿ ಜಾಹೀರಾತು ಮತ್ತು ಸುಳ್ಳು ಯಶಸ್ಸಿನ ಕಥೆಗಳನ್ನು ಸೃಷ್ಟಿಸಿ ಸಂತ್ರಸ್ತರು ಹೆಚ್ಚು ಹಣವನ್ನು ಹೂಡುವಂತೆ ಮಾಡಲಾಗುತ್ತಿದೆ.

ಡಿಜಿಟಲ್ ಅರೆಸ್ಟ್‌ವಂಚಕರಲ್ಲಿ ಬಹುತೇಕರು ದೇಶದ ಹೊರಗಡೆಯಿಂದ ಕಾರ್ಯಾಚರಿಸುತ್ತಾರೆ. ಮ್ಯಾನ್ಮಾರ್, ಲಾವೋಸ್, ತೈವಾನ್, ಕಾಂಬೋಡಿಯಾ ದಂತಹ ದೇಶಗಳಲ್ಲಿ ಕುಳಿತು ಕರೆ ಮಾಡಿ ವಂಚನೆ ಎಸಗುತ್ತಾರೆ. ವಿದೇಶಿಯರು ಇದರಲ್ಲಿ ಭಾಗಿಯಾಗುತ್ತಿದ್ದಾರೆ. ವಂಚನೆಗೆ ಒಳಗಾಗುತ್ತಿರುವವರಲ್ಲಿ ನಗರ ಪ್ರದೇಶದವರು, ವಿದ್ಯಾವಂತರು, ಸೇವೆಯಿಂದ ನಿವೃತ್ತಿ ಹೊಂದಿದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇನ್ನು ಮುಂದೆಯಾದರೂ ಇಂತಹ ಕರೆಗಳು ಬಂದಲ್ಲಿ ಎಚ್ಚರಿಕೆ ವಹಿಸುವುದು ಒಳ್ಳೆಯದು.



## 2.42 ಕೋಟಿ ಚಿನ್ನ ಖರೀದಿಸಿ ನವರತ್ನ ಜ್ಯುವೆಲರ್ಸ್‌ಗೆ ವಂಚನೆ

# ಸಮಾಜ ಸೇವಕಿ ಶ್ವೇತಾ ಗೌಡ ಬಂಧನ!

## ಚಿನ್ನದ ಕಳ್ಳಿ ನನ್ನ ಸ್ನೇಹಿತೆ ಅಲ್ಲ, ಯಾವುದೇ ಸಂಬಂಧವಿಲ್ಲ, ಎಂಗೇಜ್‌ಮೆಂಟ್ ಮಾಡಿಕೊಂಡಿಲ್ಲ : ವರ್ತೂರ್ ಸ್ಪಷ್ಟನೆ



ಶ್ವೇತಾಗೌಡ


ವರ್ತೂರ್ ಪ್ರಕಾಶ್

**ಸಮಾಜ ಸೇವಕಿಯ ಮುಖವಾಡ ತೊಟ್ಟಿದ್ದ ಶ್ವೇತಾ ಗೌಡ ಎಂಬ ಮಹಿಳೆ ನಾನು ಮಾಜಿ ಸಚಿವ ವರ್ತೂರ್ ಪ್ರಕಾಶ್ ಆಪ್ತೆಯಾಗಿದ್ದು, ಸಾಮಾಜಿಕ ಸೇವೆಯ ಜೊತೆಗೆ ಚಿನ್ನಾಭರಣದ ವ್ಯಾಪಾರ ಮಾಡುತ್ತಿದ್ದೇನೆ. ನಿಮ್ಮ ಜ್ಯೂವೆಲರ್ಸ್‌ನಿಂದ ಆಭರಣ ಖರೀದಿಸುತ್ತೇನೆಂದು ಹೇಳಿ ಎರಡ್ಮೂರು ಬಾರಿ ಖರೀದಿಸಿ ಹಣ ಕೊಟ್ಟು ನಂಬಿಕೆ ಉಳಿಸಿಕೊಂಡಿದ್ದ ಶ್ವೇತಾಗೌಡ 2.42 ಕೋಟಿ ಮೌಲ್ಯದ 2.945 ಕೆಜಿ ಚಿನ್ನ ಖರೀದಿಸಿ ಹಣ ಕೊಡುತ್ತೇನೆಂದು ವರ್ತೂರ್ ಪ್ರಕಾಶ್ ಮನೆ ಅಡ್ರಸ್‌ಗೆ ಚಿನ್ನ ತರಿಸಿಕೊಂಡು, ನಾಲ್ಕು ತಿಂಗಳಾದರೂ ಹಣವನ್ನು ಕೊಡದೆ, ಚಿನ್ನವನ್ನು ಮರಳಿಸದೆ ನಾಪತ್ತೆಯಾಗಿದ್ದವಳ ವಿರುದ್ಧ ಜ್ಯೂವೆಲರಿ ಮಾಲೀಕರು ಬೆಂಗಳೂರು ಕಮರ್ಷಿಯಲ್ ಸ್ಟ್ರೀಟ್ ಠಾಣೆಯಲ್ಲಿ ದೂರು ನೀಡಿದ ಹಿನ್ನೆಲೆಯಲ್ಲಿ, ಶ್ವೇತಾಗೌಡಳನ್ನು ಮೈಸೂರಿನಲ್ಲಿ ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ವರ್ತೂರ್ ಪ್ರಕಾಶ್ ಪರಿಚಯದ ಮೇಲೆ ಚಿನ್ನ ಖರೀದಿಸಿರುವುದಾಗಿ ಹೇಳಿದರಿಂದ ವರ್ತೂರ್ ಪ್ರಕಾಶ್‌ರವರಿಗೆ ನೋಟಿಸ್ ನೀಡಿ ವಿಚಾರಣೆಗೆ ಕರೆದಿದ್ದು, ಚಿನ್ನದ ಕಳ್ಳಿ ನನ್ನ ಸ್ನೇಹಿತೆ ಅಲ್ಲ, ಅವಳೊಂದಿಗೆ ಯಾವುದೇ ಸಂಬಂಧವಿಲ್ಲ. ಅವಳ ಜೊತೆ ಎಂಗೇಜ್‌ಮೆಂಟ್ ಮಾಡಿಕೊಂಡಿಲ್ಲವೆಂದು ವರ್ತೂರ್ ಪ್ರಕಾಶ್ ಸ್ಪಷ್ಟನೆ ನೀಡಿದ್ದಾರೆ.**



**ಬೆಂ**ಗಳೂರು ನಗರದ ಬಾಗಲಗುಂಟೆ ವಾಸಿಯಾದ ಶ್ವೇತಾಗೌಡ ಎಂಬ ಮಹಿಳೆಯೊಬ್ಬರು ನಾನು ಸಾಮಾಜಿಕ ಸೇವೆಯನ್ನು ಮಾಡುತ್ತಿದ್ದೇನೆಂದು ಹೇಳಿಕೊಂಡು ರಾಜಕಾರಣಿಗಳ ಮತ್ತು ಗಣ್ಯ ವ್ಯಕ್ತಿಗಳ ಬಳಿಗೆ ಹೋಗಿ ಅವರಿಗೆ ಶಾಲು, ಹಾರ ತೂರಾಯಿ ಹಾಕಿ, ಗಿಫ್ಟ್‌ಗಳನ್ನು ನೀಡಿ, ಫೋಟೋಗಳನ್ನು ತೆಗೆಸಿಕೊಂಡು ಅದನ್ನು ತನ್ನ ಸ್ವಂತ ಕೆಲಸಗಳಿಗೆ ಬಳಸುತ್ತಾ ನನಗೆ ರಾಜಕಾರಣಿಗಳು, ಗಣ್ಯ ವ್ಯಕ್ತಿಗಳ ಜೊತೆ ಸ್ನೇಹವಿದೆ, ಸಂಬಂಧವಿದೆ ಎಂದು ಹೇಳಿ ತನ್ನ ಕಾರ್ಯ ಸಾಧಿಸಿಕೊಳ್ಳುವ ಚಾಲಾಕಿಯಾಗಿದ್ದ ಶ್ವೇತಾಗೌಡ ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್ ಮುಖ್ಯರಸ್ತೆಯ ನವರತ್ನ ಜ್ಯೂವೆಲ್ಸ್‌ಗೆ ಹೋಗಿ ಮಾಜಿ ಸಚಿವ ವರ್ತೂರ್ ಪ್ರಕಾಶ್‌ರವರ ಆಪ್ತೆ ಎಂದು ಫೋಟೋಗಳನ್ನು ತೋರಿಸಿ ಚಿನ್ನಾಭರಣ ವ್ಯಾಪಾರ ಮಾಡುತ್ತಿದ್ದೇನೆ. ಇನ್ನು ನಿಮ್ಮ ಅಂಗಡಿಯಿಂದಲೇ ಆಭರಣಗಳನ್ನು ಖರೀದಿಸುವುದಾಗಿ ಹೇಳಿದಳು. ದೊಡ್ಡ ರಾಜಕಾರಣಿಗಳು ಮತ್ತು ಗಣ್ಯ ವ್ಯಕ್ತಿಗಳ ಜೊತೆ ಸಂಪರ್ಕವಿರುವ ಶ್ವೇತಾಗೌಡಳಿಗೆ ಆಭರಣಗಳನ್ನು ಕೊಡಲು ನವರತ್ನ ಜ್ಯೂವೆಲ್ಸ್‌ನ ಮಾಲೀಕ ಸಂಜಯ್ ಭಾಫ್ನಾ ಸಮ್ಮತಿಸಿ ಎರಡ್ಮೂರು ಬಾರಿ ಹೇಳಿದ ವಿಳಾಸಕ್ಕೆ ಚಿನ್ನಾಭರಣಗಳನ್ನು ಕಳುಹಿಸಿ ಕೊಟ್ಟರು. ಅದೇ ರೀತಿ ಶ್ವೇತಾಗೌಡ ಸಹ ಹಣವನ್ನು ಕೊಟ್ಟು ಮಾಲೀಕರ ಬಳಿ ನಂಬಿಕೆ ಮತ್ತು ವಿಶ್ವಾಸ ಗಳಿಸಿದ್ದಳು. ರಾಜಕಾರಣಿಯೊಬ್ಬರ ಮನೆಯಲ್ಲಿ ನಡೆಯುವ ಮದುವೆಗೆ ಚಿನ್ನ ಮತ್ತು ವಜ್ರದ ಆಭರಣಗಳು ಬೇಕಾಗಿದೆ ಎಂದು ಹೇಳಿ 2.42 ಕೋಟಿ ರೂ. ಮೌಲ್ಯದ 2.945 ಕೆಜಿ ಚಿನ್ನ ಹಾಗೂ ವಜ್ರಾಭರಣಗಳನ್ನು ಖರೀದಿಸಿ ವರ್ತೂರ್ ಪ್ರಕಾಶ್‌ರವರ ಬಳಿ ಕೆಲಸ ಇರುವುದರಿಂದ ಸಂಜಯ್ ನಗರದ ಡಾಲರ್ಸ್ ಕಾಲೋನಿಯಲ್ಲಿರುವ ಮನೆ ಮತ್ತು ಕಚೇರಿಯಲ್ಲಿರುತ್ತೇನೆ ಅಲ್ಲಿಗೆ ಆಭರಣಗಳನ್ನು ಕಳುಹಿಸಿ ಕೊಡಿ ಎಂದು ಹೇಳಿ ವರ್ತೂರ್ ಪ್ರಕಾಶ್‌ರವರ ಮನೆ ಅಡ್ರಸ್‌ಗೆ ಚಿನ್ನವನ್ನು ತರಿಸಿಕೊಂಡು ನಾಲ್ಕು ತಿಂಗಳಾದರೂ ಹಣವನ್ನು ಕೊಡದೆ, ಆಭರಣಗಳನ್ನು ಮರಳಿಸದೆ ಇರುವುದರಿಂದ ಮಾಲೀಕ ಸಂಜಯ್ ಭಾಫ್ನಾರವರು ಶ್ವೇತಾಗೌಡಗೆ ಫೋನ್ ಮಾಡಿ ಇಷ್ಟು ದಿನಗಳಾದರೂ ಇನ್ನು ಹಣವನ್ನು ತಂದುಕೊಟ್ಟಿಲ್ಲ. ಹಣ ಪಾವತಿಸಲು ಸಾಧ್ಯವಾಗದಿದ್ದರೆ ಆಭರಣಗಳನ್ನು ವಾಪಸ್ಸು ತಂದುಕೊಟ್ಟುಬಿಡಿ ಎಂದು ಕೇಳಿದಕ್ಕೆ ಶ್ವೇತಾಗೌಡ ನಮ್ಮ ಮೇಲೆ ನಿಮಗೆ ನಂಬಿಕೆ ಇಲ್ಲವಾದ ಮೇಲೆ ಆಭರಣಗಳನ್ನು ತಂದು ಕೊಡುವುದಾಗಿ ಧಮ್ಕಿ ಹಾಕಿ ಫೋನ್ ಸ್ವಿಚ್ ಆಫ್ ಮಾಡಿಕೊಂಡಳು. ಮತ್ತೆ ಮೊಬೈಲ್ ಆನ್ ಮಾಡಲೇ ಇಲ್ಲ.



ನವರತನ್ ಜ್ಯೂವೆಲರ್ಸ್


ಓಂ ಶಕ್ತಿ ಚಲಪತಿ

ನಾಲ್ಕು ತಿಂಗಳಾದರೂ ಹಣವನ್ನು ಕೊಡದೆ ಆಭರಣಗಳನ್ನು ಮರಳಿಸದೆ ನಾಪತ್ತೆಯಾಗಿದ್ದ ಶ್ವೇತಾಗೌಡ ವಿರುದ್ಧ ನವರತ್ನ ಜ್ಯೂವೆಲರಿ ಮಾಲೀಕ ಸಂಜಯ್ ಭಾಫ್ನಾರವರು ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದರು. ದೂರು ದಾಖಲಿಸಿಕೊಂಡ ಪುಲಿಕೇಶಿನಗರದ ಉಪವಿಭಾಗದ ಎಸಿಪಿ ಇಈತಾ ಅವರು ತನಿಖೆ ಕೈಗೊಂಡರು. ಜ್ಯೂವೆಲರಿ ಮಾಲೀಕರು ದೂರು ನೀಡಿರುವ ವಿಚಾರವನ್ನು ತಿಳಿದುಕೊಂಡ ಶ್ವೇತಾಗೌಡ ಬೆಂಗಳೂರು ಬಿಟ್ಟು ತಲೆಮರೆಸಿಕೊಂಡಿದ್ದು, ಎಸಿಪಿ ಗೀತಾ ಮತ್ತು ತಂಡವು ತಾಂತ್ರಿಕ ಮಾಹಿತಿ ಆಧರಿಸಿ ಹಾಗೂ ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ರಾಜಕೀಯ ಮುಖಂಡರೊಬ್ಬರಿಗೆ ಸೇರಿದ ಕಾರಿನಲ್ಲಿ ಮೈಸೂರಿಗೆ ಹೋಗಿದ್ದ ಶ್ವೇತಾಗೌಡರವರನ್ನು ಬಂಧಿಸಿ, ಕಾರು ಮತ್ತು ಚಿನ್ನಾಭರಣಗಳು ಸೇರಿದಂತೆ ಆಕೆಗೆ ಸೇರಿದ ವಸ್ತುಗಳನ್ನು ವಶಕ್ಕೆ ಪಡೆದ ನಂತರ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಮಾಜಿ ಸಚಿವರಾದ ವರ್ತೂರ್ ಪ್ರಕಾಶ್‌ರವರು ನನ್ನ ಆಪ್ತರಾಗಿದ್ದಾರೆ. ಅವರು ನನ್ನನ್ನು ನವರತ್ನ ಜ್ಯೂವೆಲರ್ಸ್‌ಗೆ ಕರೆದುಕೊಂಡು ಹೋಗಿ ಮಾಲೀಕರಾದ ಸಂಜಯ್

✍ ಕೋ.ನಾ. ಪ್ರಭಾಕರ್

ಭಾಫ್ನಾರವರಿಗೆ ನನ್ನನ್ನು ಪರಿಚಯಿಸಿ ಚಿನ್ನಾಭರಣ ವ್ಯಾಪಾರ ಮಾಡುತ್ತಿದ್ದಾರೆ. ಇವರಿಗೆ ಆಭರಣಗಳನ್ನು ಕೊಡುವಂತೆ ಹೇಳಿದ್ದರು. ಅದರಂತೆ ಅವರು ಆಭರಣಗಳನ್ನು ಕೊಡುತ್ತಿದ್ದರು. ನಾನು ಅಷ್ಟೇ ಚಿನ್ನಕ್ಕೆ ತಕ್ಕ ಬೆಲೆಯನ್ನು ಕೊಟ್ಟು ಖರೀದಿಸುತ್ತಿದ್ದೆನು. ನಾನು ಚಿನ್ನಾಭರಣ ಮಾರಾಟ ಮಾಡಿದವರಿಂದ ಹಣ ಬರುವುದು ನಿಧಾನವಾಗಿದ್ದು, ನವರತ್ನ ಜ್ಯೂವೆಲರ್ಸ್‌ನವರಿಗೆ ಹಣ ಕೊಡಲು ಸಾಧ್ಯವಾಗಿಲ್ಲವೆಂದು ತಿಳಿಸಿದಳು. ಬಂಧಿತ ಮಹಿಳೆ ಶ್ವೇತಾಗೌಡ ಮಾಜಿ ಸಚಿವ ವರ್ತೂರ್ ಪ್ರಕಾಶ್ ಮನೆ ವಿಳಾಸ ನೀಡಿ ಆಭರಣಗಳನ್ನು ತರಿಸಿಕೊಂಡಿರುವ ಆರೋಪದ ಆಧಾರದ ಮೇಲೆ ವರ್ತೂರ್ ಪ್ರಕಾಶ್‌ರವರ ವಿಚಾರಣೆಗೆ ನೋಟಿಸ್ ಜಾರಿ ಮಾಡಿದರು. ಶ್ವೇತಾಗೌಡ ವಿಚಾರಣೆ ಸಂದರ್ಭದಲ್ಲಿ ಕೆಲವು ವಿಚಾರಗಳು ಹೊರ ಬಂದಿದ್ದು, ಸಾಮಾಜಿಕ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿದ್ದವಳು ಸುಲಭವಾಗಿ ಹಣ ಸಂಪಾದಿಸಲು ಅಡ್ಡದಾರಿ ಹಿಡಿದಿದ್ದರು. ಈ ಹಿಂದೆ ಇದೇ ರೀತಿ ಚಿನ್ನದ ವ್ಯಾಪಾರಿಯಿಂದ ಸಗಟು ದರದಲ್ಲಿ ಚಿನ್ನವನ್ನು ಖರೀದಿಸಿ ಮೋಡಿದ್ದ ಆರೋಪದಡಿ ಯಲಹಂಕ ಠಾಣೆ ಪೊಲೀಸರು ಶ್ವೇತಾಗೌಡಳನ್ನು ಬಂಧಿಸಿದ್ದರು. ಜಾಮೀನು ಪಡೆದು ಹೊರಬಂದು ಮತ್ತೆ ತನ್ನ ಚಾಳಿಯನ್ನು ಮುಂದುವರಿಸಿರುವುದಾಗಿ ತಿಳಿದು ಬಂದಿದೆ.

### ಚಿನ್ನ ಕಳ್ಳಿ ನನ್ನ ಆಪ್ತೆಯಲ್ಲ

ಶ್ವೇತಾಗೌಡ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. 3-4 ತಿಂಗಳ ಹಿಂದೆ ನಮ್ಮ ಮನೆಗೆ ಬಂದಿದ್ದ ಅವರು ಸಮಾಜ ಸೇವಕಿ ಅಂತ ಪರಿಚಯ ಮಾಡಿಕೊಂಡಿದ್ದರು. ಆಕೆ ನನಗೆ ತಿಳಿಸಿ ಒಡವೆ ಖರೀದಿಸಿಲ್ಲ. ಮನೆ ಹತ್ರ ಜನ ಹಾಗೂ ಅಭಿಮಾನಿಗಳು ಬಂದ ಹಾಗೇ ಆಕೆಯೂ ಸಹ ಬಂದು ಹೋಗಿರಬೇಕೆಂದು ಹೇಳಿದರಲ್ಲದೆ ಡಿಸೆಂಬರ್ 23ಕ್ಕೆ ವಿಚಾರಣೆಗೆ ಕರೆದಿದ್ದಾರೆ. ಅದರಂತೆ ಠಾಣೆಗೆ ಹೋಗಿ ಮಾಹಿತಿ ಕೊಡ್ತೀನಿ ಎಂದು ಹೇಳಿದ ವರ್ತೂರ್ ಪ್ರಕಾಶ್‌ರವರು ಹೇಳಿಕೆ ನೀಡಲು ಹೋಗದೆ ಇದ್ದಾಗ ಎರಡನೇ ನೋಟಿಸನ್ನು ನೀಡಿದ ಹಿನ್ನೆಲೆಯಲ್ಲಿ ಡಿಸೆಂಬರ್ 24ರಂದು ಮಂಗಳವಾರ ಭಾರತಿನಗರ ಪೊಲೀಸ್ ಠಾಣೆಗೆ ಹಾಜರಾಗಿ ಎಸಿಪಿ ಗೀತಾ ಎದುರು ಹೇಳಿಕೆ ನೀಡಿದ್ದಾರೆ. ಇದೇ ವೇಳೆ ಆರೋಪಿ ಶ್ವೇತಾಗೌಡ ಕೊಟ್ಟಿದ್ದ ಗಿಫ್ಟ್ ರೂಪದಲ್ಲಿ 12.50 ಲಕ್ಷ ನಗದು, ಮೂರು ಬ್ರಾಸ್‌ಲೆಟ್, ಒಂದು ಚಿನ್ನದ ಉಂಗುರವನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಶ್ವೇತೌಗಾಡ ನನ್ನ ಆಪ್ತೆಯಲ್ಲ, ನಮ್ಮಿಬ್ಬರ ನಡುವೆ ಯಾವುದೇ ಸಂಬಂಧವಿಲ್ಲ. ನಾವಿಬ್ಬರು ಎಂಗೇಜ್‌ಮೆಂಟ್ ಮಾಡಿಕೊಂಡಿಲ್ಲ. ಇದು ನೂರಕ್ಕೆ ನೂರರಷ್ಟು ಸತ್ಯ. ನನ್ನ ಹೆಸರನ್ನು ಬಳಸಿಕೊಂಡು ಚಿನ್ನಾಭರಣ ಖರೀದಿಸಿ ಮಾರಾಟ ಮಾಡಿದ್ದಾಳೆ. ಇದರಲ್ಲಿ ನನ್ನದು ಎಳ್ಳಷ್ಟು ಪಾತ್ರವಿಲ್ಲ. ಯಾರಾದೂ ಮಿನಿಸ್ಟರ್, ಎಂಎಲ್‌ಎ, ಎಂಪಿ ಹೇಳಿದರೂ ಕೂಡಾ ಮಾರ್ವಾಡಿ ಅಂಗಡಿಗಳಲ್ಲಿ 10 ಗ್ರಾಂ ಚಿನ್ನ ಕೊಡಲ್ಲ. ಅಂಥದ್ದರಲ್ಲಿ ಆಕೆಗೆ ಎರಡು ಕೋಟಿ ರೂ. ಮೌಲ್ಯದ ಚಿನ್ನ ಕೊಟ್ಟಿದ್ದಾರೆ ಅಂದರೆ ನನಗೆ ನಂಬಲಾಗುತ್ತಿಲ್ಲ. ಅಂಗಡಿ ಮಾಲೀಕರನ್ನು ನಂಬಿಸಿ ಚಿನ್ನ ಖರೀದಿಸಿದ್ದಾರೆ. ಆಕೆಯನ್ನು ನನ್ನ ಸ್ನೇಹಿತೆ, ಆಪ್ತೆ ಎಂದು ಬಿಂಬಿಸುತ್ತಿರುವುದು ನನ್ನ ಮನಸ್ಸಿಗೂ ನೋವಾಗಿದೆ. ನನಗೂ ಈ ವಂಚನೆ ಪ್ರಕರಣಕ್ಕೂ ಸಂಬಂಧವಿಲ್ಲ. ಈಗಾಗಲೇ ವಿವಿಧ ಪೊಲೀಸ್ ಠಾಣೆಗಳಲ್ಲಿ ಆಕೆ ಮೇಲೆ 20 ಕೇಸುಗಳಿವೆ. ನನ್ನ ಹೆಸರನ್ನು ಬಳಸಿಕೊಂಡಿರುವುದಲ್ಲದೆ ನನ್ನ ಮತ್ತು ನನ್ನ ಮಗನ ಹೆಸರನ್ನು ಅನಗತ್ಯವಾಗಿ ಪ್ರಸ್ತಾಪಿಸಲಾಗಿದೆ. ನನ್ನ ವಿರುದ್ಧದ ಎಲ್ಲಾ ಆರೋಪಗಳು ನಿರಾಧಾರ, ಅಂಗಡಿ ಮಾಲೀಕರಾದ ಸಂಜಯ್ ಭಾಫ್ನಾ ಹಳೆಯ ಸ್ನೇಹಿತರು. ವರ್ತೂರ್ ಪ್ರಕಾಶ್ ನನಗೆ ಶ್ವೇತಾಗೌಡರನ್ನು ಪರಿಚಯ ಮಾಡಿಸಿದರು ಎಂದು ಹೇಳಿರುವುದು ಬಿಟ್ಟರೆ ಬೇರೆ ಯಾವುದೇ ಆರೋಪ ಮಾಡಿಲ್ಲ. ಶ್ವೇತಾಗೌಡ ಎಲ್ಲ ಕಡೆ ವಂಚನೆ ಮಾಡುವುದೇ ಆಕೆಯ ವೃತ್ತಿ. ಅಂತಹ


ವರ್ತೂರ್ ಪ್ರಕಾಶ್ ಮನೆ

☞ 11

# ಪತ್ನಿಯೊಂದಿಗೆ ಅಸಭ್ಯವಾಗಿ ನಡೆದುಕೊಂಡಿದ್ದ ಸ್ನೇಹಿತನನ್ನು ಕೊಲೆ ಮಾಡಿದ ಆರೋಪಿಗಳಿಗೆ ಜೀವಾವಧಿ ಶಿಕ್ಷೆ


ಅಣ್ಣಯ್ಯಪ್ಪನ ಡೆಡ್‌ಬಾಡಿ

**ಕನಕಪುರ**


✍ ಶಾಂತರಾಜು ಜಿ. ಕಲ್ಲಹಳ್ಳಿ

ಜೀವನ ಸಾಗಿಸಲು ಹಲವಾರು ದಾರಿಗಳಿವೆ. ಹಾಗೆಯೇ ಹುಟ್ಟಿಸಿದ ದೇವರು ಹುಲ್ಲು ಹಾಕದೇ ಇರುವನೇ ಎಂಬ ಗಾದೆಮಾತಿನಂತೆ, ಇಂದು ಒಬ್ಬ ಮನುಷ್ಯ ಭೂಮಿ ಮೇಲೆ ಜೀವನ ಸಾಗಿಸುವುದು ಬಲು ಸುಲಭ. ಆ ಮನುಷ್ಯ ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ ಎಲ್ಲರನ್ನೂ ನನ್ನ ಕುಟುಂಬ ಎಂದು ತಿಳಿದು ಆ ಕುಟುಂಬದ ಹೊರೆ ಹೊತ್ತು ಜೀವನ ಸಾಗಿಸುವುದು ಅಷ್ಟು ಸುಲಭವಲ್ಲ. ಅದನ್ನೇ ಕಷ್ಟ ಎಂದು ತಿಳಿದು ಆ ಕುಟುಂಬದಿಂದ ಹೊರ ಬಂದು ಒಬ್ಬಂಟಿಯಾಗಿ ಕೂಲಿನಾಲಿ ಮಾಡಿಕೊಂಡು ಕಂಡ ಕಂಡವರನ್ನೆಲ್ಲ ಸ್ನೇಹಿತರನ್ನಾಗಿ ಮಾಡಿಕೊಂಡು, ಕುಡಿತದ ಚಟಕ್ಕೆ ಬಲಿಯಾಗಿ, ನಿದ್ದೆ ಬಂದ ಕಡೆಯಲ್ಲೇ ಮಲಗಿ ಜೀವನ ಕಳೆಯುವ ವ್ಯಕ್ತಿಗೆ, ಆತನ ತಂದೆತಾಯಿಯ ಹಿಡಿ ಶಾಪದಿಂದ ಕೊನೆಗೆ ಯಾವುದೋ ರೂಪದಲ್ಲಿ ಆತ ಕೊಲೆಯಾಗಿ ಬೀದಿ ಶವವಾಗಿ ಬೀಳುತ್ತಾನೆ. ಇಂತಹದೊಂದು ಘಟನೆ ರಾಮನಗರ ಜಿಲ್ಲೆಯ ಹಾರೋಹಳ್ಳಿ ಹೋಬಳಿಯಲ್ಲಿ ನಡೆದಿದೆ.

### ಏನಿದು ಘಟನೆ?

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕು, ಹಾಲಿ ಹಾರೋಹಳ್ಳಿ ತಾಲ್ಲೂಕಿನ, ಹಾರೋಹಳ್ಳಿ ಹೋಬಳಿಯ, ಪಿಚ್ಚನಕೆರೆ ವಾಸಿ 36 ವರ್ಷದ ಅಣ್ಣಯ್ಯಪ್ಪ ಎಂಬಾತ ಸುಂದರವಾದ ಕುಟುಂಬ ತ್ಯಜಿಸಿ ಏಕಾಂತವಾಗಿ ಎಂಜಾಯ್ ಲೈಫ್ ಮಾಡುವ ಸಲುವಾಗಿ ಮನೆ ಬಿಟ್ಟು ಹೊರಗಡೆ ಬಂದ ಮೇಲೆ ಈತನ ಸಂಬಂಧಿ ಹಾಗೂ ಸ್ನೇಹಿತನಾದ ಇದೇ ಪಿಚ್ಚನಕೆರೆ ಗ್ರಾಮದ ವಾಸಿ ಒಕ್ಕಲಿಗರ ಕುಟುಂಬದ ಲೇಟ್ ಕೆಂಚಪ್ಪರವರ ಮಗ 38 ವರ್ಷದ ಚಿಕ್ಕೇಗೌಡ ಎಂಬಾತನೊಂದಿಗೆ, ಮೊದಲೇ ಸಂಬಂಧಿಕ ಬೇರೆ. ಈ ಸಲುಗೆಯಿಂದ ಅಣ್ಣಯ್ಯಪ್ಪನಿಗೂ, ಚಿಕ್ಕೇಗೌಡನಿಗೂ ಸ್ನೇಹ ಬೆಳೆದು ಕುಡಿತದ ಚಟಕ್ಕೆ ಬಿದ್ದು, ದಿನನಿತ್ಯ ಚಿಕ್ಕೇಗೌಡ ತಮ್ಮ ಜಮೀನಿನಲ್ಲಿ ವ್ಯವಸಾಯಕ್ಕೆ ಅಣ್ಣಯ್ಯಪ್ಪನನ್ನು ಬಳಸಿಕೊಳ್ಳುತ್ತಿದ್ದ. ಜಮೀನಿನಲ್ಲಿ ಕೆಲಸ ಇಲ್ಲದ ಸಮಯದಲ್ಲಿ ಕೂಲಿನಾಲಿಗೆ ಬೇರೆಯವರ ಜಮೀನಿಗೆ ಹೋಗಿ ಬರುತ್ತಿದ್ದ ಅಣ್ಣಯ್ಯಪ್ಪ ಇತ್ತ ಚಿಕ್ಕೇಗೌಡನಿಗೆ ಮದುವೆಯಾಗಿ ಗಂಡ-ಹೆಂಡತಿ ಸುಂದರ ಸಂಸಾರ ಕಟ್ಟಿಕೊಂಡು ಜೀವನ ಮಾಡುತ್ತಿದ್ದರು. ದುರಾದೃಷ್ಟ ಏನೆಂದರೆ ಚಿಕ್ಕೇಗೌಡನ ಸಂಬಂಧಿ ಹಾಗೂ ಸ್ನೇಹಿತನಾಗಿದ್ದ ಅಣ್ಣಯ್ಯಪ್ಪ ಏನೇ ಕೆಲಸ ಮಾಡಿಕೊಂಡು ಬಂದರೂ ಇವರಿಬ್ಬರು ಸಂಜೆಯಾಗುತ್ತಿದ್ದಂತೆ ಕುಡಿತದ ಚಟಕ್ಕೆ ಬಿದ್ದಿದ್ದರಿಂದ, ಕಂಠ ಪೂರ್ತಿ ಕುಡಿದು ಇಬ್ಬರೂ ಚಿಕ್ಕೇಗೌಡನ ಮನೆಯಲ್ಲೇ ಊಟ ಮಾಡಿ ಮಲಗುತ್ತಿದ್ದರು. ಚಿಕ್ಕೇಗೌಡನಿಗೆ ಹೆಂಡತಿಯಿದ್ದರೂ ಯಾವುದೇ ಅನುಮಾನ ಪಡದೇ ಅಣ್ಣಯ್ಯಪ್ಪನಿಗೆ ದಿನಾಲೂ ಊಟೋಪಚಾರ ಮಾಡಿಸುತ್ತಿದ್ದ. ಜೊತೆಗೆ ಅವನ ಮನೆಯಲ್ಲೇ ಮಲಗಲು ಜಾಗ ಮಾಡಿಕೊಟ್ಟಿದ್ದ. ಇದೇ ರೀತಿ ಇವರ ಜೀವನ ಸುಮಾರು ದಿನಗಳು ನೆಮ್ಮದಿಯಾಗಿಯೇ ಕಳೆದಿದೆ. ಏನೇ ಆದರೂ ಅವರಿದ್ದದ್ದು ಪಿಚ್ಚನಕೆರೆ ಎಂಬ ಹಳ್ಳಿ. ಆ ಹಳ್ಳಿಯಲ್ಲಿ ಇವರಿದ್ದದ್ದು ನೋಡಿದ ಜನರು ಅವರಿಬ್ಬರು ಸಂಬಂಧಿಕರು, ಇತ್ತೀಚೆಗೆ ತುಂಬಾ ಸಲುಗೆಯಿಂದ ಮತ್ತು ಚಿಕ್ಕೇಗೌಡನ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಬೇರೆ ಬೇರೆ ವ್ಯವಹಾರಗಳನ್ನು ಅಣ್ಣಯ್ಯಪ್ಪನ ಜೊತೆಗೆ ಹೊಂದಾಣಿಕೆಯಿಂದ ಇದ್ದಾರೆಂದು ತಿಳಿದು ಯಾವುದೇ ಅನುಮಾನ ಪಡುತ್ತಿರಲಿಲ್ಲ.


ಎಸ್ಪಿ ಕಾರ್ತಿಕ್ ರೆಡ್ಡಿ


ಡಿವೈಎಸ್ಪಿ ಗಿರಿ


ಆಗಿನ ಕನಕಪುರ ಸಿಪಿಐ ಕೆ. ಮಲ್ಲೇಶ್

ಹೀಗಿದ್ದ ಸಮಯದಲ್ಲಿ ಚಿಕ್ಕೇಗೌಡನ ಪತ್ನಿಯೊಂದಿಗೆ ಸ್ನೇಹಿತ ಅಣ್ಣಯ್ಯಪ್ಪ ಅಸಭ್ಯವಾಗಿ ವರ್ತಿಸಿದ್ದಾನೆ ಎಂಬುದು ಚಿಕ್ಕೇಗೌಡನಿಗೆ ತಿಳಿದಾಗ ಸಂಬಂಧಿಕ, ಸ್ನೇಹಿತ ಎನ್ನುವುದನ್ನೇ ಮರೆತು ಅಣ್ಣಯ್ಯಪ್ಪನ ಮೇಲೆ ಜಗಳ ಮಾಡಿದ್ದ. ಈಗ್ಗೆ ಹೀಗೆ ಇವರಿಬ್ಬರಿಗೂ ಜಗಳವಾಗಿ ದೂರವಾಗಿದ್ದರು. ಅಂದಿನಿಂದ ಚಿಕ್ಕೇಗೌಡನ ಮನೆ ಬಿಟ್ಟು ಹೊರ ಬಂದ ಮೇಲೆ ಅಣ್ಣಯ್ಯಪ್ಪ ಕುಪಿತಗೊಂಡು ದಿನಾಂಕ 05-11-2018ರಂದು ಸಂಜೆ ಸಮಯದಲ್ಲಿ ಸುಮಾರು 6 ಗಂಟೆಯಲ್ಲಿ ತನ್ನ ಬೈಕ್ (ಕೆಎ-40 ವಿ-8113)ನಲ್ಲಿ ಮಚ್ಚನ್ನು ಇಟ್ಟುಕೊಂಡು ಚಿಕ್ಕೇಗೌಡನನ್ನು ಹೊಡೆಯಲೇಬೇಕು ಎಂದು ನಿರ್ಧರಿಸಿ, ಚಿಕ್ಕೇಗೌಡನ ಚಿಕ್ಕಪ್ಪ ವೆಂಕಟಗಿರಿಯಪ್ಪನ ಮನೆಯ ಮುಂದೆ ಹೋಗಿ ಕೂಗಾಡುತ್ತಿದ್ದಾಗ ಅಣ್ಣಯ್ಯಪ್ಪನನ್ನು ಸಮಾಧಾನ ಪಡಿಸಲು ಬಂದ ವೆಂಕಟಗಿರಿಯಪ್ಪನ ಮೇಲೆ ಏಕಾಏಕಿ ಅಣ್ಣಯ್ಯಪ್ಪ ಕೈಯಿಂದ ಹೊಡೆಯುತ್ತಿದ್ದ ದೃಶ್ಯವನ್ನು ಕಣ್ಣಲ್ಲಿ ಕಂಡ ವೆಂಕಟಗಿರಿಯಪ್ಪನ ಮಗ ಕುಮಾರ ಮತ್ತು ಪಕ್ಕದ ಮನೆಯಲ್ಲಿ ವಾಸವಾಗಿದ್ದ ಚಿಕ್ಕೇಗೌಡ ಇಬ್ಬರೂ ಬಂದು ಅಣ್ಣಯ್ಯಪ್ಪನ ಮೇಲೆ ಜಗಳ ತೆಗೆದು ಅಲ್ಲೇ ಬಿದ್ದಿದ್ದ ಬೇವಿನ ಮರದ ದೊಣ್ಣೆಯಿಂದ ಕುಮಾರ ಅಣ್ಣಯ್ಯಪ್ಪನಿಗೆ ಹೊಡೆದಾಗ ಬೈಕ್ ಸಮೇತ ಆಯತಪ್ಪಿ ಅಣ್ಣಯ್ಯಪ್ಪನ ಕೆಳಗೆ ಬಿದ್ದಾಗ ಚಿಕ್ಕೇಗೌಡ ಅಣ್ಣಯ್ಯಪ್ಪ ಬೈಕ್‌ನಲ್ಲಿ ತಂದಿದ್ದ ಮಚ್ಚನ್ನು ತೆಗೆದುಕೊಂಡು ಮನಸೋ ಇಚ್ಛೆಯಂತೆ ಮುಖ, ಕತ್ತು, ದೇಹದ ಸಿಕ್ಕ ಸಿಕ್ಕ ಕಡೆಯೆಲ್ಲಾ ಕೊಚ್ಚಿದಾಗ, ಅಣ್ಣಯ್ಯಪ್ಪ ಸ್ಥಳದಲ್ಲೇ ರಕ್ತದ ಮಡುವಿನಲ್ಲಿ ಒದ್ದಾಡಿ ಕೊನೆಯುಸಿರು ಬಿಟ್ಟಿದ್ದಾನೆ. ಈ ಪ್ರಕರಣದ ಸಂಬಂಧ ಅಣ್ಣಯ್ಯಪ್ಪನ ಸಹೋದರ ರಾಜೇಶ್ ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿ, ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಕೆ. ಮಲ್ಲೇಶ್ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಿ, ಈ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಸಂಗ್ರಹ ಮಾಡಿ ಕನಕಪುರ ಕ್ಟಟಿ ಇಒ - ಒಖಲೂಇ ನ್ಯಾಯಾಲಯಕ್ಕೆ ಆರೋಪಿಗಳ ಮೇಲೆ ಯು/ಎಸ್ 114, 302, 34, ಐಪಿಸಿ ರಿತ್ಯಾ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದರು.

ಈ ಪ್ರಕರಣವನ್ನು 2ನೇ ಅಪರ ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ವರ್ಗಾವಣೆ ಆಗಿದ್ದು, ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ವಕೀಲರಾದ ಶ್ರೀ ದೇವರಾಜುರವರು ವಾದವನ್ನು ಮಂಡಿಸಿದ್ದರು. ವಾದವನ್ನು ಆಲಿಸಿದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕನಕಪುರ ನ್ಯಾಯಾಧೀಶರಾದ ಶ್ರೀಕುಮಾರ್ ಹೆಚ್.ಎನ್.ರವರು ಪ್ರಕರಣವನ್ನು ವಿಚಾರಣೆ ಮಾಡಿ ಆರೋಪಿಗಳ ವಿರುದ್ಧ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗಳಿಗೆ 302 ಐಪಿಸಿ ಅಪರಾಧಕ್ಕೆ ಶಿಕ್ಷೆ ತಲಾ 50 ಸಾವಿರ ದಂಡ ಹಾಗೂ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ.



ಪ್ರಮುಖ ಆರೋಪಿ ಚಿಕ್ಕೇಗೌಡ


ಆರೋಪಿ ಕುಮಾರ

ರಾಮನಗರ ಜಿಲ್ಲಾ ಎಸ್ಪಿ ಕಾರ್ತಿಕ್ ರೆಡ್ಡಿ, ಅಪರ ಪೊಲೀಸ್ ಅಧೀಕ್ಷಕರಾದ ಸುರೇಶ್, ಅಪರ ಪೊಲೀಸ್ ಅಧೀಕ್ಷಕರಾದ ರಾಮಚಂದ್ರಯ್ಯ ಮತ್ತು ಪೊಲೀಸ್ ಉಪಾಧೀಕ್ಷಕರು ಚನ್ನಪಟ್ಟಣ ಉಪವಿಭಾಗ ಗಿರಿರವರು ಈ ಪ್ರಕರಣದ ತನಿಖಾಧಿಕಾರಿಯಾದ ಸಿಪಿಐ ಮಲ್ಲೇಶ್ ಕೆ., ಪಿಎಸ್‌ಐ ರವಿ ಹಾಗೂ ಈಗನ ಸಿಪಿಐ ಕೃಷ್ಣ ಕೆ.ಎಲ್., ತನಿಖಾ ಸಹಾಯಕ ಮೋಹನ್ ಹೆಚ್.ಎಸ್. ಮತ್ತು ಪದ್ಮಶಂಕರ್, ಧನಂಜಯ, ಪ್ರದೀಪ್‌ಕುಮಾರ್, ಶಂಕರ ನಾಯ್ಕ, ಗುಲಷನ್, ಕೋರ್ಟ್ ಸಿಬ್ಬಂದಿಗಳಿಗೆ ಪ್ರಶಂಸೆ ವ್ಯಕ್ತಪಡಿಸಿ ಸೂಕ್ತ ಬಹುಮಾನವನ್ನು ಘೋಷಣೆ ಮಾಡಿದ್ದಾರೆ. ☯


ಕೊಲೆ ಮಾಡಲು ಬಳಸಿದ್ದ ಮಚ್ಚು


ಕೃತ್ಯಕ್ಕೆ ಬಳಸಿದ್ದ ದೊಣ್ಣೆ




ರಕ್ತದ ಮಡುವಿನಲ್ಲಿ ಅಣ್ಣಯ್ಯಪ್ಪನ ಮೃತದೇಹ


ಪೊಲೀಸರು ಸ್ಥಳ ಮಹಜರ್ ಮಾಡುತ್ತಿರುವುದು



# ಗರಗಸದಿಂದ ರೈತನ ಪೀಸ್ ಪೀಸ್ ಮಾಡಿದ ಸೈಕೋ!


ಹತ್ಯೆಯಾದ ರಮೇಶ್

**ಆನ್‌ಲೈನ್‌ನಲ್ಲಿ ಗೇಮ್ ಆಡಿ ಸಾಲ ಮಾಡಿಕೊಂಡು ಸೈಕೋ ಆಗಿದ್ದ ಯುವಕ ಹಣ, ವಸ್ತು ದರೋಡೆ ಮಾಡುವ ಸಲುವಾಗಿ ವೃದ್ಧ ರೈತ ದಂಪತಿ ಮನೆಗೆ ನುಗ್ಗಿ ವೃದ್ಧೆಯನ್ನು ಮರಕೊಯ್ಯುವ ಮಿಷನ್‌ನಿಂದ ಕತ್ತರಿಸಿ ಆಕೆ ಪ್ರಜ್ಞೆತಪ್ಪಿ ಬೀಳುತ್ತಿದ್ದಂತೆಯೇ ಮನೆಯೊಳಗೆ ನುಗ್ಗಿ ಒಳಗೆ ಮಲಗಿದ್ದ ಪಾರ್ಶ್ವವಾಯು ಪೀಡಿತ ವೃದ್ಧನನ್ನು ಭೀಕರವಾಗಿ ಕತ್ತರಿಸಿ ಕೊಲೆ ಮಾಡಿದ ಘಟನೆ ಮಂಡ್ಯ ಜಿಲ್ಲೆಯಲ್ಲಿ ನಡೆದಿದ್ದು ಜನರನ್ನು ಬೆಚ್ಚಿ ಬೀಳಿಸಿದೆ.**


ಆರೋಪಿ ಮೊಹಮ್ಮದ್ ಇಬ್ರಾಹಿಂ

**ಮಂಡ್ಯ**

ಬಿ.ಎಂ. ಲವಕುಮಾರ್

ಇಂತಹದೊಂದು ಘಟನೆಯಿಂದ ಕೇವಲ ಮಂಡ್ಯ ಮಾತ್ರವಲ್ಲದೆ, ಇಡೀ ಕರ್ನಾಟಕವೇ ಬೆಚ್ಚುವಂತಾಗಿದೆ. ಹಣಕ್ಕಾಗಿ ಇಂತಹ ಕೃತ್ಯಕ್ಕೂ ಜನ ಇಳಿಯುವಂತಾದರೆ ಜೀವನ ಹೇಗೆ ಎಂದು ಪ್ರಶ್ನೆ ಮಾಡಿಕೊಳ್ಳುವಂತಾಗಿದೆ. ಅದರಲ್ಲೂ ಒಂಟಿ ಮನೆಗಳಲ್ಲಿ ವಾಸಿಸುವುದಾದರೂ ಹೇಗೆ? ಎಂದು ಜನ ಪ್ರಶ್ನೆ ಕೇಳಿಕೊಳ್ಳುತ್ತಿದ್ದಾರೆ. ಇವತ್ತು ಆನ್‌ಲೈನ್ ಗೇಮ್, ಕ್ರಿಕೆಟ್ ಬೆಟ್ಟಿಂಗ್ ಹೀಗೆ ಒಮ್ಮೆಲೆ ದುಡ್ಡು ಮಾಡುವ ಸಲುವಾಗಿ ಏನೇನೋ ಮಾಡುತ್ತಾ ಹಣ ಕಳೆದುಕೊಂಡಾಗ ಮತ್ತೆ ಸಾಲ ಮಾಡಿ ತಂದು ಕಳೆದುಕೊಳ್ಳುವವರು ಕ್ರಮೇಣ ಸೈಕೋಗಳಾಗುತ್ತಾರೆ. ಸಾಲಗಾರರಿಂದ ತಪ್ಪಿಸಿಕೊಳ್ಳುವ ಮತ್ತು ಕೂಡಲೇ ಹಣ ಬೇಕೆನ್ನುವ ಕಾರಣಕ್ಕೆ ಸರಗಳ್ಳತನ, ವಾಹನ ಕಳ್ಳತನ, ಕೊಲೆ, ಸುಲಿಗೆ ಮುಂತಾದ ಅಪರಾಧ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.

ಎಲ್ಲರಿಗೂ ಕಷ್ಟಪಡದೆ ಹಣ ಸಿಗಬೇಕು, ಅದರಿಂದ ಜಾಲಿಯಾಗಿ ಬದುಕಬೇಕು ಎಂಬುದೇ ಉದ್ದೇಶವಾಗಿದ್ದು, ಆನ್‌ಲೈನ್ ಗೇಮ್‌ನಲ್ಲಿ ಲಕ್ಷಾಂತರ ಹಣ ಸಂಪಾದಿಸಬಹುದು ಎನ್ನುವ ಬಣ್ಣದ ಜಾಹೀರಾತುಗಳಿಗೆ ಮಾರು ಹೋಗಿ ಆಟ ಶುರು ಮಾಡುತ್ತಾರೆ. ಒಂದಷ್ಟು ಹಣ ಬಂದ ತಕ್ಷಣ ಅದರ ಮೇಲೆ ಆಸಕ್ತಿ ಹೆಚ್ಚಾಗುತ್ತದೆ. ಬಳಿಕ ಇನ್ನಷ್ಟು ಹಣವನ್ನು ಸಾಲ ಮಾಡಿಯೋ, ಒಡವೆ ಗಿರವಿಯಿಟ್ಟೋ ತಂದು ಹಾಕುತ್ತಾರೆ. ಅದು ಕೈ ತಪ್ಪಿಹೋದರೆ ಅದನ್ನು ಮರಳಿ ಸಂಪಾದಿಸುವ ಹಟಕ್ಕೆ ಬಿದ್ದು ಇನ್ನಷ್ಟು ಸಾಲ ಮಾಡಿ ಆಡುತ್ತಾರೆ. ಹೀಗೆ ಅದು ಅವರ ಬದುಕನ್ನೇ ಹಾಳು ಮಾಡಿ ಬಿಡುತ್ತದೆ. ಇದರಿಂದ ಸೈಕೋಗಳಾಗಿ ಕೊಲೆ. ಸುಲಿಗೆಗಳಿಗೆ ಇಳಿದು ಬಿಡುತ್ತಾರೆ.

ಇವತ್ತು ಮಂಡ್ಯದಲ್ಲಿ ನಡೆದ ಭೀಕರ ಹತ್ಯೆ ಹಿಂದೆ ಇಂತಹದ್ದೇ ಹಿನ್ನಲೆಯಿದೆ. ಆನ್‌ಲೈನ್ ಗೇಮ್‌ನಿಂದ ಮನೆ ಹಾಳು ಮಾಡಿಕೊಂಡ ಲಫಂಗನೊಬ್ಬ ತನ್ನ ಸಾಲ ತೀರಿಸುವ ಸಲುವಾಗಿ ಕೊಲೆ ಮಾಡಿ ಮತ್ಯಾರದೋ ಅಮಾಯಕ ಕುಟುಂಬದ ದೀಪ ಆರಿಸಿದ್ದಾನೆ. ಅವನೇನೋ ಕೊಲೆ ಮಾಡಿ ಜೈಲ್ ಸೇರಿ ಮುದ್ದೆ ಮುರಿದುಕೊಂಡು ನೆಮ್ಮದಿಯಾಗಿರುತ್ತಾನೆ. ಆದರೆ ಅವನಿಂದಾಗಿ ಒಂದು ಕುಟುಂಬ ಕಣ್ಣೀರಲ್ಲಿ ಕೈತೊಳೆಯುವಂತಾಗಿದೆ. ಜತೆಗೆ ಆತನಿಗೆ ಸಾಲ ಕೊಟ್ಟವರು ನಾಮತಿಕ್ಕಿಕೊಂಡಿದ್ದಾರೆ. ಅವನ ಹೆತ್ತವರು ಬದುಕು ಕೂಡ ಮೂರಾಬಟ್ಟೆಯಾಗಿರುತ್ತದೆ.

ಅಮಾಯಕನ ಜೀವ ತೆಗೆದ ಪಾಪಿಯನ್ನು ಗಲ್ಲಿಗೇರಿಸಿ ಎಂದು ಜನ ಆಕ್ರೋಶ ಹೊರ ಹಾಕುತ್ತಿದ್ದಾರೆ. ಇವತ್ತು ಅವರ ಮನೆಯಲ್ಲಿ ಆಗಿದೆ ನಾಳೆ ನಮ್ಮ ಮನೆಯಲ್ಲಿ ಆಗಬಹುದು ನಮಗೆ ಯಾರು ಭದ್ರತೆ ಕೊಡುತ್ತಾರೆ? ಈ ಕಾಲದಲ್ಲಿ ಯಾರನ್ನು ನಂಬುವುದು? ದೂರದ ಊರಿನಿಂದ ಬಂದು ಒಂಟಿ ಮನೆಯನ್ನೇ ಟಾರ್ಗೆಟ್ ಮಾಡಿ ಮರ ಕತ್ತರಿಸುವ ಮಿಷನ್‌ನಿಂದ ಕತ್ತರಿಸಿ ಹಾಕಿದ್ದಾನೆ ಎಂದರೆ ಅವನ ಕ್ರೌರ್ಯತೆ ಹೇಗಿರಬೇಕು? ಈ ಘಟನೆ ಬಳಿಕ ಹಳ್ಳಿಗಳಲ್ಲಿ ಜನ ಭಯಭೀತರಾಗಿದ್ದಾರೆ. ಇಷ್ಟೆಲ್ಲ ಪೀಠಿಕೆಗಳು ಏಕೆ ಎಂದರೆ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಶ್ರೀ ಶಂಭುಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಸಮೀಪದ ತೋಟದ ಮನೆಯಲ್ಲಿ ನಡೆದ ಆ ಹತ್ಯೆಯ ಭೀಕರತೆ ಮತ್ತು ಹತ್ಯೆಗೈದ ಹಂತಕನ ಹಿನ್ನಲೆಯೇ ಹಾಗಿದೆ.


ಕೃತ್ಯ ನಡೆದ ಮನೆಯನ್ನು ಪರಿಶೀಲಿಸುತ್ತಿರುವ ಪೊಲೀಸರು

ಕ್ಯಾತನಹಳ್ಳಿ ಗ್ರಾಮದ ಹೊರವಲಯದಲ್ಲಿರುವ ತೋಟದ ಮನೆಯಲ್ಲಿ ವೃದ್ಧ ರಮೇಶ್ ಮತ್ತು ಯಶೋಧಮ್ಮ ದಂಪತಿ ವಾಸ ಮಾಡುತ್ತಿದ್ದರು. ವೃದ್ಧ ರಮೇಶ್ ಪಾರ್ಶ್ವವಾಯು(ಸ್ಟ್ರೋಕ್) ಪೀಡಿತರಾಗಿ ಹಾಸಿಗೆ ಸೇರಿದ್ದರು. ಯಶೋಧಮ್ಮನೇ ಎಲ್ಲವನ್ನು ನಿಭಾಯಿಸುತ್ತಿದ್ದರು ಇಳಿವಯಸ್ಸಿನಲ್ಲಿಯೂ ಕೆಲಸ ಮಾಡಿಕೊಂಡು ತಮ್ಮ ಪಾಡಿಗೆ ಜೀವನ ನಡೆಸುತ್ತಿದ್ದರು. ಹೀಗಿರುವಾಗಲೇ ಅವರ ಇಳಿವಯಸ್ಸಿನಲ್ಲಿ ನಡೆಯಬಾರದ ಘಟನೆ ನಡೆದು ಹೋಗಿದೆ. ಆನ್‌ಲೈನ್ ಗೇಮ್ ಅವರ ಪ್ರಾಣ ತೆಗೆದಿದೆ.


ಕೊಲೆಯಾಗಿ ಬಿದ್ದಿರುವ ರಮೇಶ್

ಇಲ್ಲಿ ಆನ್‌ಲೈನ್ ಗೇಮ್‌ಗೂ ವೃದ್ಧ ರೈತನ ಜೀವ ಹೋಗುವುದಕ್ಕೂ ಏನಿದು ಸಂಬಂಧ ಎಂಬ ಜಿಜ್ಞಾಸೆ ಹುಟ್ಟಿಕೊಳ್ಳುತ್ತದೆ. ಆದರೆ ಘಟನೆ ಹಿಂದೆ ಇವತ್ತು ವೃದ್ಧ ಜೀವ ಕಳೆದುಕೊಳ್ಳುವುದಕ್ಕೆ ಮತ್ತು ವೃದ್ಧೆ ತೀವ್ರ ಹಲ್ಲೆಗೀಡಾಗಿ ಆಸ್ಪತ್ರೆ ಸೇರುವುದಕ್ಕೆ ಹಂತಕ ಆಡುತ್ತಿದ್ದ ಆನ್‌ಲೈನ್ ಗೇಮ್ ಕಾರಣವಾಗಿದೆ. ಕೊಲೆಗಡುಕನ ಹಿನ್ನಲೆ ನೋಡುತ್ತಾ ಹೋದರೆ ಆತನ ಹೆಸರು ಮೊಹಮ್ಮದ್ ಇಬ್ರಾಹಿಂ ಇಪ್ಪತ್ತೇಳು ವರ್ಷದ ಈತ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದವನು. 27 ವರ್ಷಕ್ಕೆ ದುಡಿಮೆಯಲ್ಲಿ ತೊಡಗಿಸಿಕೊಂಡಿದ್ದರೆ ನೆಮ್ಮದಿಯಾಗಿ ಬದುಕುವುದಕ್ಕೆ ಯಾವುದೇ ತೊಂದರೆಯಿರಲಿಲ್ಲ, ಆದರೆ ಈತ ಕೈತುಂಬಾ ಹಣವನ್ನು ತಕ್ಷಣವೇ ಸಂಪಾದಿಸಿ ಬಿಡಬೇಕೆಂಬ ಹಟಕ್ಕೆ ಬಿದ್ದಿದ್ದನು.


ಕೃತ್ಯಕ್ಕೆ ಬಳಸಿದ ಮರ ಕೊಯ್ಯುವ ಯಂತ್ರ

ಟಿವಿಗಳಲ್ಲಿ ಬರುವ ಬಣ್ಣದ ಜಾಹೀರಾತುಗಳು ಅವನ ತಲೆಕೆಡಿಸಿತ್ತು. ಹೀಗಾಗಿ ಆನ್‌ಲೈನ್ ಗೇಮ್ ಆಡಲು ಆರಂಭಿಸಿದ್ದನು. ಒಮ್ಮೆ ಇದರ ರುಚಿ ಹತ್ತಿದರೆ ಮತ್ತೆ ಮತ್ತೆ ಆಡಬೇಕೆನಿಸುತ್ತದೆ. ಅದು ಮೊಹಮ್ಮದ್ ಇಬ್ರಾಹಿಂ ಬದುಕಿನಲ್ಲಿ ಆಗಿ ಹೋಯಿತು. ಆತ ಆನ್‌ಲೈನ್ ಗೇಮ್‌ಗೆ ದಾಸನಾಗಿ ಬಿಟ್ಟನು. ಇವತ್ತಲ್ಲ ನಾಳೆ ಹಣ ಬಂದೇ ಬರುತ್ತದೆ ಎನ್ನುತ್ತಲೇ ಸಾಲ ಮಾಡಿ ಆಟ ಶುರು ಮಾಡಿದ್ದನು. ಈತನಿಗೆ ಚಿಪ್ಪು ಸಿಗುತ್ತಾ ಹೋದರೂ ಗೇಮ್ ನಿಲ್ಲಿಸದೆ ಮುಂದುವರೆಸಿದ. ಹೀಗಾಗಿ ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡನು. ಸಾಲ ತೀರಿಸಲು ಯಾವುದೇ ಮಾರ್ಗಗಳು ಇರಲಿಲ್ಲ, ಹೀಗಾಗಿ ಯಾವುದಾದರೂ ಮನೆಗೆ ನುಗ್ಗಿ ದರೋಡೆ ಮಾಡುವ ಮಟ್ಟಕ್ಕೆ ಇಳಿದು ಬಿಟ್ಟನು.

ಕೊಲೆಯೋ ಸುಲಿಗೆಯೋ ಮೊದಲಿಗೆ ದುಡ್ಡು ಬೇಕಷ್ಟೆ, ದುಡ್ಡು ಸಿಕ್ಕರೆ ಸಾಲ ಮುಗಿಸಬಹುದು ಎಂದು ಆಲೋಚಿಸಿದ ಆತ ದರೋಡೆ ಹೇಗೆ ಮಾಡಬೇಕು? ಎಂಬುದರ ಬಗ್ಗೆ ಸ್ಕೆಚ್ ತಯಾರು ಮಾಡಿಕೊಂಡಿದ್ದನು. ಅವನು ಪ್ಲಾನ್ನನ್ನು ಕೂಡ ತುಂಬಾ ಆಲೋಚಿಸಿ ಮಾಡಿದ್ದನು. ಅದು ಏನೆಂದರೆ ಮರವನ್ನು ಕತ್ತರಿಸುವ ಹೊಸ ಮಿಷನ್ (ಗರಗಸ) ಬೆನ್ನಿಗೆ ಹಾಕಿಕೊಂಡು ಸಂಜೆ ಹೊತ್ತು ಒಂಟಿ ಮನೆಗಳನ್ನು ಟಾರ್ಗೆಟ್ ಮಾಡಿಕೊಂಡು ಗಂಡಸರು ಇಲ್ಲದ ಮನೆಗೆ ಹೋಗುವುದು. ಮನೆಯೊಳಗೆ ನೀವು ಆನ್‌ಲೈನ್‌ನಲ್ಲಿ ಬುಕ್ ಮಾಡಿದ ಗರಗಸ ಬಂದಿದೆ ಎಂದು ಹೆಂಗಸರಿಗೆ ಹೇಳುವುದು ಅವರು ಹೊರಗೆ ಬರುತ್ತಿದ್ದಂತೆಯೇ ಹೆದರಿಸುವುದು, ಒಂದು ವೇಳೆ ಅವರು ವಿರೋಧ ಮಾಡಿದರೆ ಅದೇ ಗರಗಸದಿಂದ ಕೊಯ್ದು ಹಾಕಿ ಮನೆಯೊಳಗೆ ನುಗ್ಗಿ ಚಿನ್ನ ಹಣ ದೋಚಿಕೊಂಡು ಹೋಗುವುದು ಅವನ ಪ್ಲಾನ್ ಆಗಿತ್ತು.

ಈ ಪ್ಲಾನ್‌ಗೆ ತಯಾರಾಗಿ ಶನಿವಾರ ಮನೆಯಿಂದ ಆತ ಹೊರಟಿದ್ದನು ಎಲ್ಲೆಡೆ ಗಾಡಿಯಲ್ಲಿ ಓಡಾಡಿ ಎಲ್ಲ ಮನೆಗಳನ್ನು ನೋಡಿದ್ದಾನೆ. ಯಾವ ಮನೆಗೆ ನುಗ್ಗಿದರೆ ಹಣ ಒಡವೆ ಸಿಗಬಹುದು? ಅಲ್ಲಿಂದ ತಪ್ಪಿಸಿಕೊಂಡು ಬರಲು ಅವಕಾಶವಿದೆಯಾ? ಹೀಗೆ ಎಲ್ಲವನ್ನು ನೋಡಿಕೊಂಡು ಅವತ್ತು ಸಂಜೆ ವೇಳೆ ಸ್ಕೆಚ್ ಹಾಕುವ ಬಗ್ಗೆ ಯೋಚಿಸಿದ್ದಾನೆ. ಈಗ ಐದಾರು ಗಂಟೆಗೆ ಬೇಗ ಕತ್ತಲಾಗುತ್ತದೆ. ಆ ಹೊತ್ತಿಗೆ ಗಂಡಸರು ಮನೆಗೆ ಬರುವುದಿಲ್ಲ ಹೆಂಗಸರೇ ಇರುತ್ತಾರೆ. ಅವರನ್ನು ಯಾಮಾರಿಸಿ

☞12


ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯಶೋಧಮ್ಮ

ಕ್ರೈಂ ಪ್ರಪಂಚ

# ಡೈನಾಮಿಕ್ ಕಿಲ್ಲರ್

ಸಂಜೆ ಆರು ಗಂಟೆ!

ಹೆಂಡತಿಯನ್ನು ಊರಿಗೆ ಕಳಿಸಿದ ಈಶ್ವರ ಟೂ ವೀಲರ್‌ನಲ್ಲಿ ಮನೆಗೆ ಬಂದನು. ಹಗುರವಾಗಿ ಉಸಿರಾಡಿದನು. ಅಬ್ಬ... ಇನ್ನು ಒಂದು ವಾರ ಚಿಂತೆ ಇಲ್ಲ. ನಾನು ಫ್ರೀ ಬರ್ಡ್. ಅವಳ ಕಾಟ ಇಲ್ಲದೆ ನನಗೆ ಹೇಗೆ ಬೇಕೋ ಹಾಗಿ ಇರಬಹುದು ಎಂದುಕೊಳ್ಳುತ್ತಿರುವಾಗಲೇ ಫೋನ್ ಕಾಲ್ ಬಂದಿತು.

ಹೆಂಡತಿ ಫೋನ್ ಮಾಡಿದ್ದಾಳೆ. ತವರೂರಿಗೆ ಹೊರಟು ಕೇವಲ ಅರ್ಧ ಗಂಟೆ ಸಹ ಆಗಿಲ್ಲ. ಬಸ್ಸು ಕೆಲವೇ ಮೈಲಿಗಳ ದೂರ ಹೋಗಿರಬಹುದು. ಅಷ್ಟರಲ್ಲಿ ಫೋನ್ ಮಾಡಿದ್ದಾಳೆ. ತುಂಬಾ ಕಿರಿಕ್ ಪಾರ್ಟಿ!

ಬಹುಶಃ, ಗಂಡ ಎಂಬ ಪ್ರಾಣಿಯನ್ನು ಬಹಳಷ್ಟು ಕಾಡಿಸಿದವರು ಯಾರೂ ಇಲ್ಲ. ಅವಳ ಫೋನ್ ಮಾಡಿ ಮಾತಾಡುತ್ತಾ ''ರೀ... ನಾನು ಹೇಳಿದ್ದೆಲ್ಲಾ ನೆನಪಿದೆ ತಾನೆ? ನಾನಿಲ್ಲ ಅಂತ ನೀವು ನಿಮ್ಮ ಚಪಲಗಳ ಆಟ ಆಡ್ಬೇಡಿ. ಆಫೀಸ್ ಮುಗಿದ ಮೇಲೆ ಮನೆಗೆ ಬನ್ನಿ. ಆಮೇಲೆ ನಮ್ಮ ಬೀದಿಯಲ್ಲಿರೋ ದೇವಸ್ಥಾನಕ್ಕೆ ಹೋಗಿ. ರಾತ್ರಿ ಅಲ್ಲಿಂದ ಬಂದ ಮೇಲೆ ಅಡುಗೆ ಮಾಡಿಕೊಂಡು ಊಟ ಮಾಡಿ ಬೇಗ ಮಲಗಿ.''

ಈಶ್ವರ ಬೇಸರದಿಂದ ''ಚಂದ್ರಿಕ... ಈ ನೀತಿ ಪಾಠವನ್ನು ಬಸ್ಸು ಹೊರಡುವ ತನಕ ಹೇಳಿದ್ದೀಯ. ನೀನು ಹೇಳಿದ್ದನ್ನು ನಾನು ತಪ್ಪದೆ ಫಾಲೋ ಮಾಡ್ತೀನಿ. ನೆಮ್ಮದಿಯಾಗಿ ಪ್ರಯಾಣ ಮಾಡು'' ಎಂದನು.

''ನಾನು ಯಾವಾಗ ಫೋನ್ ಮಾಡ್ತೀನೋ ಗೊತ್ತಿಲ್ಲ. ನೀವು ಕೂಡಲೇ ಫೋನ್ ಅಟೆಂಡ್ ಮಾಡ್ಬೇಕು.''

ಅವನು ಬೇಸರ, ಕೋಪದಿಂದ ''ಟಾಯ್ಲೆಟ್‌ಗೆ ಹೋಗಬೇಕಾದರೂ ಫೋನ್ ತಗೊಂಡು ಹೋಗಿರ್ತೀನಿ. ಅಷ್ಟೊಂದು ಅನುಮಾನ ಇದ್ದರೆ ನೀನು ಈಗಲೇ ವಾಪಸ್ ಬಂದು ಬಿಡು'' ಎಂದು ಹೇಳಿ ಅವಳ ಪ್ರತಿಕ್ರಿಯೆಗೆ ಕಾಯದೆ ಫೋನ್ ಲಿಂಕ್ ಕಟ್ ಮಾಡಿದನು.

ಅವನಿಗೆ ಸತ್ಯ ಗೊತ್ತಿದೆ. ಅವಳು ಯಾವ ಕಾರಣದಿಂದಲೂ ವಾಪಸ್ ಬರೋಲ್ಲ. ತಿಂಗಳಲ್ಲಿ ಎರಡು ಸಲ ತವರು ಊರಿಗೆ ಹೋಗುತ್ತಾಳೆ. ಪ್ರತಿ ಸಲ ಹೋದಾಗಲೂ ಕಡಿಮೆ ಅಂದರೂ ಒಂದು ವಾರ ಇರುತ್ತಾಳೆ. ತಿಂಗಳಲ್ಲಿ ಹದಿನೈದು ದಿವಸ ಮಾತ್ರ ಗಂಡನ ಜೊತೆ ಇರುತ್ತಾಳೆ.

ಮದುವೆ ಆಗಿರೋದು ಯಾಕೆ?

ಚಂದ್ರಿಕ ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದಿರುವ ಅತ್ಯಾಕರ್ಷಕ ರೂಪಿನ ಚೆಲುವೆ. ಹೆಂಡತಿಯ ಸೌಂದರ್ಯ ನೆನಪಾಗಿ ಅವನು ನಿಟ್ಟುಸಿರುಬಿಟ್ಟನು. ಇವನ ಪಾಲಿಗೆ ಅವಳ ದೇಹ ಸೌಂದರ್ಯ ಕನ್ನಡಿಯಲ್ಲಿ ಕಾಣುತ್ತಿರುವ ಪ್ರತಿಬಿಂಬದಂತೆ ಆಗಿರೋದು ಸತ್ಯ.

ಕನ್ನಡಿಯೊಳಗಿನ ಗಂಟು!

ಹಣ ಅಥವಾ ಚಿನ್ನದ ಗಟ್ಟಿಗಳ ಗಂಟೇ ಆಗಿರಲಿ ಅದು ಕನ್ನಡಿಯಲ್ಲಿ ಕಾಣುತ್ತದೆ. ಆದರೆ ಅದು ಕೈಗೆ ಸಿಗೋಲ್ಲ.

ಚಂದ್ರಿಕ ಹೆಂಡತಿ ನಿಜ. ಆದರೆ ಅವಳು ಹೆಂಡತಿಯಾಗಿ ತನ್ನ ಕರ್ತವ್ಯ ಮಾಡುತ್ತಿಲ್ಲ. ಪ್ರತಿ ಹಂತದಲ್ಲಿ ಕಿರಿಕ್ ಮಡುತ್ತಾಳೆ. ಮದುವೆಯಾಗಿ ಆರು ತಿಂಗಳಾಗಿದೆ.

ದಾಂಪತ್ಯ ಸುಖ ಕನಸಾಗಿದೆ. ಯಾವಾಗಲಾದರೂ ಒಂದು ಸಲ ಅವಳು ಗಂಡನಿಗೆ ಅವಕಾಶ ಕೊಡುತ್ತಾಳೆ. ಅದು ಕಾಟಾಚಾರದ ಸಹಕಾರ. ರಸಿಕ, ಶೃಂಗಾರತೆಗೆ ಅವಕಾಶ ಇಲ್ಲ. ಅವನು ಉನ್ಮಾದದಿಂದ ಆವರಿಸಿಕೊಂಡರೆ ರೇಗಿ ದೂರ ತಳ್ಳುತ್ತಾಳೆ. ವಿವಾಹವಾದಾಗಲಿಂದ ಇಲ್ಲಿಯತನಕ ಆರು ಸಲ ಮಾತ್ರ ಮೈ ಟಚ್ ಮಾಡಲು ಅವಕಾಶ ಕೊಟ್ಟಿದ್ದಾಳೆ.

ಅವಳೇನು ಶ್ರೀಮಂತ ಕುಟುಂಬದವಳಲ್ಲ. ಈಶ್ವರನ ತಾಯಿಯ ಕಡೆಯ ಹತ್ತಿರದ ಸಂಬಂಧಿ. ಬಡತನದ ಕಾರಣದಿಂದ, ಇವನೇ ಮದುವೆಯ ಎಲ್ಲಾ ಖರ್ಚುಗಳನ್ನು ಹಾಕಿಕೊಂಡು ಶುಭಕಾರ್ಯ ಮುಗಿಸಿದ್ದರು ಮತ್ತು ಚಂದ್ರಿಕಾಳ ತಂದೆಗೆ ಒಂದು ಲಕ್ಷ ರೂಪಾಯಿ ಇತರೆ ಖರ್ಚುಗಳಿಗೆ ಅಂತ ಕೊಟ್ಟಿದ್ದನು.

ಚಂದ್ರಿಕ ಗಂಡನನ್ನು ಪೀಡಿಸಿ ಆಗಾಗ ಹಣ ವಸೂಲಿ ಮಾಡಿ ತವರಿನವರಿಗೆ ಕೊಡುತ್ತಾಳೆ. ಆದರೂ ಸಹ ದರ್ಪ, ಧಿಮಾಕು ಕಡಿಮೆ ಆಗಿಲ್ಲ.

ಅವನು ಕಾರಣ ಕೇಳಿದ್ದನು.

''ನೀನ್ಯಾಕೆ ಇಷ್ಟ ಇಲ್ಲದಿದ್ದರೂ ನನ್ನ ಮದುವೆಯಾದೆ. ಹೆಂಡತಿಯಾಗಿ ಯಾವತ್ತೂ ನೀನು ಮನಃಪೂರ್ವಕವಾಗಿ ಸಹಕರಿಸಿಲ್ಲ.''

ಅವಳು ಗಂಡನ ಕಡೆ ತಾತ್ಸಾರದಿಂದ ನೋಡುತ್ತಾ ''ಮೊದಲ ಕಾರಣ ನನಗೆ ನಿಮ್ಮನ್ನು ಮದುವೆ ಆಗಲು ಇಷ್ಟ ಇರಲಿಲ್ಲ. ನಮ್ಮ ಜಾತಿಯಲ್ಲಿ, ತುಂಬಾ ಸಂಬಳ ಮತ್ತು ಮೇಲು ಸಂಪಾದನೆ ಇರುವ ಸರ್ಕಾರ ಪ್ರಮುಖ ಇಲಾಖೆಯ ಕೆಲಸಗಾರ ನೀವು. ನನ್ನ ಅಮ್ಮನ ಹತ್ತಿರದ ಸಂಬಂಧಿ ನೀವು. ಅವರು ಯಾವಾಗಲೋ ಪ್ರಮಾಣ ಮಾಡಿ ಮಾತು ಕೊಟ್ಟಿದ್ದರಂತೆ. ನನ್ನನ್ನು ನಿಮಗೆ ಮದುವೆ ಮಾಡಿಸುತ್ತೇನೆ ಅಂತ. ಕೊಟ್ಟಿರುವ ಮಾತಿಗೆ ತಪ್ಪಲಾರೆ ಅಂತ ಅಮ್ಮ ಹಠ ಮಾಡಿದ್ರು. ಆತ್ಮಹತ್ಯೆ ಮಾಡಿಕೊಳ್ತೀನಿ ಅಂತ ಹೆದರಿಸಿದ್ರು. ಅಪ್ಪ ಮತ್ತು ಸಂಬಂಧಿಕರು ಅಳುತ್ತಾ ಗೋಗರೆದು ಈ ಮದುವೆಗೆ ಒಪ್ಪಿಸಿದ್ದರು. ನಿಮ್ಮ ಎರಡನೆ ಪ್ರಶ್ನೆ ನಮ್ಮ ದಾಂಪತ್ಯಕ್ಕೆ ಸಂಬಂಧಪಟ್ಟಿದೆ.''

ಅವನು ಚಡಪಡಿಸುತ್ತಿದ್ದಾನೆ.

''ನನಗೆ ಮೊದಲಿನಿಂದಲೂ ಸಹ ಸೆಕ್ಸ್ ಬಗ್ಗೆ ಆಸಕ್ತಿ ಇಲ್ಲ. ಅಂದ ಮೇಲೆ ನಾನು ಹೇಗೆ ಉತ್ಸಾಹದಿಂದ ಸಹಕರಿಸಲಿ?''

ಎಲ್ಲವೂ ಸಹ ನೆನಪಾಗುತ್ತಿದೆ. ಅವನು ತುಂಬಾ ತಲೆಕೆಡಿಸಿಕೊಂಡಿದ್ದಾನೆ. ಪ್ರಶ್ನೆ ಎದುರಾಯಿತು. ನಾನ್ಯಾಕೆ ಅವಳಿಗೆ ನಿಷ್ಠೆಯಿಂದ ಇರಬೇಕು ಎಂದುಕೊಂಡು ಎದ್ದು ಹೊರಗೆ ಬಂದು ಫ್ರಂಟ್ ಡೋರ್ ಲಾಕ್ ಮಾಡಿಕೊಂಡು ಬಾರ್ ಅಂಡ್ ರೆಸ್ಟೋರೆಂಟ್‌ಗೆ ಕಡೆ ಹೊರಟನು.

ಟೂ ವೀಲರ್‌ನಲ್ಲಿ ಹೋಗುತ್ತಿರುವಾಗ ಅವನಿಗೆ ಬೇರೊಂದು ಆಲೋಚನೆ ಬಂದಿತು. ಟೂ ವೀಲರ್ ಅನ್ನು ಪಾರ್ಕ್ ಮಾಡಿ, ಆಫೀಸ್ ಸಹದ್ಯೋಗಿಗೆ ಫೋನ್ ಮಾಡಿ ಬ್ರೋಕರ್ ಜೊತೆ ಮಾತಾಡಿ ತುಂಬಾ ಆಕರ್ಷಕವಾಗಿರುವ ಕಾಲೇಜಿನ ಬೆಡಗಿನ ನನ್ನ ಮನೆಗೆ ಕಳಿಸಲು ಹೇಳು. ಹಣ ಎಷ್ಟಾದರೂ ಪರವಾಗಿಲ್ಲ. ಆ ಹೆಣ್ಣು ಚೆನ್ನಾಗಿರಬೇಕು ಎಂದು ಹೇಳಿದನು. ಸಹದ್ಯೋಗಿ ಗೆಳೆಯ ಹಾಸ್ಯ ಮಾಡಿ ರೇಗಿಸಿದ್ದನು.

ಬಾರ್ ಅಂಡ್ ರೆಸ್ಟೋರೆಂಟ್‌ಗೆ ಬಂದು ಹಾಟ್ ಡ್ರಿಂಕ್ಸ್, ಬಿಯರ್ ಮತ್ತು ನಾನ್‌ವೆಜ್ ಐಟಂಗಳನ್ನು ಪಾರ್ಸಲ್ ಮಾಡಿಸಿಕೊಂಡು ಮನೆಗೆ ಬಂದು ಬಂದನು.

ಒಳಗೆ ಬಂದಾಗ ಅವನಿಗೆ ಆಶ್ಚರ್ಯದ ಜೊತೆ ಗೊಂದಲ-ಗಾಬರಿ ಉಂಟಾಗಿದೆ.

ಬ್ಯಾಕ್‌ಡೋರ್ ಓಪನ್ ಆಗಿದೆ! ಅವನು ನೆನಪುಗಳನ್ನು ಕೆದಕುತ್ತಿದ್ದಾನೆ. ಹೊರಗೆ ಹೋಗುವಾಗ ಬ್ಯಾಕ್ ಡೋರ್ ಲಾಕ್ ಮಾಡಿದ್ದು ಅವನಿಗೆ ಚೆನ್ನಾಗಿ ನೆನಪಿದೆ.

ಕಳ್ಳನುಗ್ಗಿರಬಹುದೆ? ಬಾಗಿಲನ್ನು ಒಡೆದಿಲ್ಲ. ಡೋರ್ ಲಾಕ್ ಕೀ ಉಪಯೋಗಿಸಿ ಓಪನ್ ಮಾಡಿದ್ದಾರೆ.

ಇದು ಹೇಗೆ ಸಾಧ್ಯ ? ನಗರದಲ್ಲಿ ಇಂಟೆಲಿಜೆಂಟ್ ಕ್ರಿಮಿನಲ್‌ಗಳು ಕಳ್ಳತನ ಮಾಡಲು, ಮಾಸ್ಟರ್ ಕೀ ಬಂಚ್ ಅನ್ನು ಇಟ್ಟುಕೊಂಡಿರುತ್ತಾರೆ.

ಆ ರೀತಿ ಆಗಿರಬಹುದೆ? ಬೆಡ್‌ರೂಮಿಗೆ ಬಂದು ಪರಿಶೀಲನೆ ಮಾಡಿದನು. ಎರಡು ಬೀರುಗಳ ಲಾಕ್ ಓಪನ್ ಮಾಡಿರಲಿಲ್ಲ. ಮುಖ್ಯವಾಗಿ ಯಾವ ಬೆಲೆಬಾಳುವ ವಸ್ತುವೂ ಕಳ್ಳತನ ಆಗಿರಲಿಲ್ಲ. ಹೇಗಾದರೂ ಆಗಲಿ ಎಂದು ಎಲ್ಲಾ ಕಡೆ ತಲಾಶ್ ಮಾಡಿದನು. ಅನುಮಾನ ಬರುವಂತಾದ್ದು ಏನೂ ನಡೆದಿರಲಿಲ್ಲ.

ಡೈನಿಂಗ್ ಟೇಬಲ್ ಮೇಲೆ ಹಾಟ್ ಬಾಕ್ಸ್‌ಗಳಿವೆ. ಹೆಂಡತಿ ತವರೂರಿಗೆ ಹೋಗುವ ಮೊದಲು ರಾತ್ರಿಯ ಊಟಕ್ಕೆ ಅಂತ ಎಲ್ಲಾ ಮಾಡಿಸಿದ್ದಾಳೆ.

ಅನ್ನ-ಸಾಂಬಾರ್. ಪಲ್ಯ-ಗೊಜ್ಜು. ಚಪಾತಿ-ಚಟ್ನಿ. ಜೊತೆಗೆ ಬಾದಾಮಿ ಹಲ್ವ!

ಅವಳೇನು ಮನೆ ಕೆಲಸ ಮಾಡುತ್ತಿರಲಿಲ್ಲ. ಇಬ್ಬರು ಕೆಲಸದ ಹೆಂಗಸರು ಬಂದು ಮನೆ ಕೆಲಸ ಮತ್ತು ಅಡುಗೆ ಮಾಡುತ್ತಾರೆ. ಇವತ್ತು ವಿಶೇಷವಾಗಿ ಈ ಗಂಡನಿಗೆ ಇಷ್ಟವಾಗಿರುವ ಐಟಂಗಳನ್ನು ಮಾಡಿಸಿದ್ದಾಳೆ. ಆದರೆ ಈಶ್ವರ್ ಡ್ರಿಂಕ್ಸ್ ಮತ್ತು ನಾನ್‌ವೆಜ್ ತಂದಿದ್ದಾನೆ.

ಅವನು ಗಮನಿಸಿರಲಿಲ್ಲ. ಹಾಟ್ ಬಾಕ್ಸ್‌ಗಳ ಮೇಲಿನ ಕ್ಯಾಪ್ ಅನ್ನು ಸರಿಯಾಗಿ ಹಾಕಿರಲಿಲ್ಲ! ಆದರೆ ಅವಳು ಎಲ್ಲಾ ರೆಡಿ ಮಾಡಿಸುವಾಗ, ಕೆಲಸದ ಹೆಂಗಸಿಗೆ ಹೇಳಿದ್ದಳು. ತಿಂಡಿ, ಊಟ ಎಲ್ಲಾ ರಾತ್ರಿಯತನಕ ಬಿಸಿಯಾಗಿರಬೇಕು. ಹಾಟ್ ಬಾಕ್ಸ್ ಕ್ಯಾಪ್ ಅನ್ನು ಸರಿಯಾಗಿ ಹಾಕು ಎಂದಿದ್ದಳು.

●●●

ರಾತ್ರಿ ಎಂಟೂವರೆ!

ಮನೆಯ ಮುಂದೆ ಆಟೋ ಬಂದಿತು. ಬ್ರೋಕರ್ ಕಾಲ್‌ಗರ್ಲ್‌ನ ಕರೆದುಕೊಂಡು ಬಂದಿರಬೇಕು ಎಂದುಕೊಂಡು, ಕುತೂಹಲ, ಆತುರದಿಂದ ಹೊರಗೆ ಬಂದನು.

ಅವನಿಗೆ ಗಾಬರಿ ಆಯಿತು.

ಹೆಂಡತಿಯ ಕಸಿನ್ ಸಿಸ್ಟರ್ ಪದ್ಮಿನಿ, ವ್ಯಾನಿಟಿ ಬ್ಯಾಗು ಮತ್ತು ಲಗೇಜ್ ಬ್ಯಾಗನ್ನು ಹಿಡಿದು ಆಟೋದಿಂದ ಇಳಿಯುತ್ತಾ ಇವನ ಕಡೆ ನೋಡಿ ''ಭಾವ... ನೂರು ರೂಪಾಯಿ ಆಟೋ ಚಾರ್ಜ್ ಕೊಟ್ಟು ಕಳಿಸಿ'' ಎಂದು ಹೇಳುತ್ತಾ ಮನೆ ಕಡೆ ಹೊರಟಳು.

ಹೆಂಡತಿಯ ತಂಗಿ ದಿಢೀರ್ ಅಂತ ಬಂದಿರೋದ್ರಿಂದ ಗಾಬರಿಯಾಗಿದ್ದಾನೆ.

ಅವಳು ಲಗೇಜ್ ಬ್ಯಾಗನ್ನು ಟೇಬಲ್ ಮೇಲೆ ಇಡುತ್ತಾ ತುಂಬಾ ಸೂಕ್ಷ್ಮವಾಗಿ ಎಲ್ಲಾ ಕಡೆ ನೋಡಿದಳು. ಅವಳ ದೃಷ್ಟಿ ಈಗ ಡೈನಿಂಗ್ ಟೇಬಲ್ ಮೇಲೆ ಹೊರಳಿತು.

ರಾತ್ರಿ ಊಟದ ಹಾಟ್ ಬಾಕ್ಸ್‌ಗಳಿವೆ.

ಮತ್ತೊಂದು ಕಡೆ ಏನಿದೆ?

ಡ್ರಿಂಕ್ಸ್ ಮತ್ತು ನಾನ್‌ವೆಜ್‌ಗಳಿವೆ.

ಅವಳು ನಗಾಡಿದಳು.

''ಭಾವ... ಅಕ್ಕ ಊರಲ್ಲಿ ಇಲ್ಲ ಅಂತ ಕಾಣುತ್ತೆ.''

ಅವನು ತಲೆಯಾಡಿಸಿದನು.

''ಅದಕ್ಕೆ ಇಷ್ಟೊಂದು ಧೈರ್ಯ ಬಂದಿದೆ. ನನಗೆ ನಾನ್‌ವೆಜ್ ಅಭ್ಯಾಸ ಇಲ್ಲ. ಹಾಟ್ ಡ್ರಿಂಕ್ಸ್ ನನ್ನ ಫೇವರೇಟ್.''

ಅವನು ಹಗುರವಾಗಿ ಉಸಿರಾಡಿದನು.

''ಭಾವ... ಬನ್ನಿ... ನಾನು ಅಕ್ಕನಿಗೆ ಹೇಳಲ್ಲ. ಪಾರ್ಟಿ ಮಾಡೋಣ'' ಎಂದು ಮುಖ ತೊಳೆದು ಫ್ರೆಶ್ ಆಗಿ ಬಂದಳು.

ಪದ್ಮಿನಿ ಚೆಲುವೆ ಅಲ್ಲ. ಅವಳ ಅಕ್ಕ ಚಂದ್ರಿಕಾಳ ಸೌಂದರ್ಯದಲ್ಲಿ ಒಂದು ಅಂಶ ಸಹ ಅವಳಲ್ಲಿ ಇಲ್ಲ. ಪ್ರಾಯದ ಯುವತಿ. ಅವಳು ಡೈನಿಂಗ್ ಟೇಬಲ್ ಹತ್ತಿರ ಹೋಗಿ ಈ ಕಡೆ ತಿರುಗುತ್ತಾ ''ಭಾವ... ಕಮಾನ್... ಪಾರ್ಟಿ ಮಾಡೋಣ'' ಎಂದಳು.

ಅವನು ಚಡಪಡಿಸುತ್ತಿದ್ದಾನೆ. ಅವಳು ಕುರ್ಚಿಯಲ್ಲಿ ಕುಳಿತು ವಿಸ್ಕಿ ಬಾಟಲ್ ಮತ್ತು ಸೋಡಾ ಸೀಸೆ ಎತ್ತಿಕೊಂಡು ಎರಡನ್ನೂ ಗ್ಲಾಸಿಗೆ ಸುರಿದುಕೊಂಡಳು ಮತ್ತು ಅಕ್ಕ ಮಾಡಿಸಿರುವ ಸಸ್ಯಾಹಾರಿ ಊಟದಲ್ಲಿ ತನಗೆ ಇಷ್ಟವಾಗಿರೋದನ್ನ ಬಡಿಸಿಕೊಂಡಳು. ಕುಡಿಯುತ್ತಾ ತಿನ್ನುತ್ತಿದ್ದಾಳೆ.

ಆಟೋ ಬಂದ ಶಬ್ದ ಕೇಳಿ ಈಶ್ವರ್ ಮತ್ತಷ್ಟು ಗಾಬರಿಯಾದನು. ಕಾಲಿಂಗ್ ಬೆಲ್ ಶಬ್ದ ಮಾಡಿತು. ಅವನು ಚಡಪಡಿಸುತ್ತಲೇ ಈಗ ಅವಳ ಕಡೆ ನೋಡಿದನು.

''ಭಾವ ಯಾಕೆ ಗಾಬರಿಯಾಗಿದ್ದೀರ?''

''ಅದು... ಅದು...''

''ಓ... ಅಕ್ಕ ಊರಲ್ಲಿ ಇಲ್ಲ ಅಂತ ಸ್ಪೆಷಲ್ ಪ್ರೋಗ್ರಾಂ ಹಾಕಿಕೊಂಡಿದ್ದೀರ?''

ಅವನು ಉತ್ತರಿಸಲಾಗದೆ ಚಡಪಡಿಸಿದನು. ಅವಳು ನಗುತ್ತಿದ್ದಾಳೆ.

ಪುನಹ ಬೆಲ್ ಶಬ್ದ ಮಾಡಿತು.

''ಭಾವ... ಹೋಗಿ ಪರವಾಗಿಲ್ಲ. ನಾನು ಅಕ್ಕನಿಗೆ ಹೇಳಲ್ಲ'' ಎಂದಾಗ ಅಳುಕುತ್ತಲೇ ಹೋಗಿ ಡೋರ್ ಓಪನ್ ಮಾಡಿದನು.

ಆಕರ್ಷಕ ರೂಪಿನ, ಸೌಂದರ್ಯದಲ್ಲಿ ಮಾದಕತೆ ತುಂಬಿರುವ ಪ್ರಾಯದ ಯುವತಿಯೊಬ್ಬಳು ಬ್ರೋಕರ್ ಜೊತೆ ನಿಂತಿದ್ದಾಳೆ. ಅವನ ಮೈ ಬೆಚ್ಚಗಾಯಿತು. ಹೆಂಡತಿ ಚೆಲುವೆಯರಲ್ಲಿ ಚೆಲುವೆ ನಿಜ. ಆದರೆ ಅವಳ ದೇಹ ಸೌಂದರ್ಯದ ಸುಖ ಅನುಭವಿಸುವ ಅದೃಷ್ಟ ಇರಲಿಲ್ಲ. ಹೆಂಡತಿಯ ತಂಗಿ ಇರೋದ್ರಿಂದ ಸಂಕೋಚ ಮತ್ತು ಮುಜುಗರ ಆಗುತ್ತಿದೆ. ಅಳುಕುತ್ತಲೇ ಡೈನಿಂಗ್ ಹಾಲ್ ಕಡೆ ನೋಡಿದನು.

ಪದ್ಮಿನಿ ಅಲ್ಲಿ ಇರಲಿಲ್ಲ. ಬಿಯರ್ ಮತ್ತು ವಿಸ್ಕಿ ಮತ್ತು ಹಾಟ್ ಬಾಕ್ಸ್‌ನಿಂದ ಊಟ ಹಾಕಿಕೊಂಡಿರುವ ತಟ್ಟೆ ಎತ್ತಿಕೊಂಡು ರೂಮನ್ನು ಸೇರಿದ್ದಾಳೆ.

ನಾದಿನಿಯ ಬಗ್ಗೆ ಇವನಿಗೆ ಖುಷಿಯಾಯಿತು. ಆದರೂ ಅವಳು ದಿಢೀರ್ ಅಂತ ಈ ಊರಿಗೆ ಯಾಕೆ ಬಂದಿದ್ದಾಳೆ ಎಬುದನ್ನು ಕೇಳಲು ಮರೆತಿದ್ದನು. ವ್ಯವಹಾರದ ಒಪ್ಪಂದ ಆಗಿದೆ. ಬ್ರೋಕರ್‌ಗೆ ಕಮೀಷನ್ ಮತ್ತು ಆ ಯುವತಿಗೆ ಹಣವನ್ನು ಮೊದಲೇ ಕೊಟ್ಟನು.

ಫ್ರಂಟ್ ಹಾಲ್‌ನಲ್ಲಿ ಇಬ್ಬರೇ ಇದ್ದಾರೆ. ಅವಳು ಇವನ ಕಡೆ ನೋಡಿ ನಗಾಡಿದಳು. ಸೋ ಕಾಲ್ಡ್ ಸೆಕ್ಸೀ ಸ್ಮೈಲ್! ಅವನ ಮೈ ಬೆಚ್ಚಗಾಗುತ್ತಿದೆ. ಅವಳ ಹತ್ತಿರ ಹೋಗಿ ಕೈ ಹಿಡಿದು ಎಳೆದು ತಬ್ಬಿಕೊಂಡು ಚುಂಬಿಸಲು ಬಾಗಿದನು. ಅವಳು ಕೈ ಅಡ್ಡ ಹಿಡಿದಳು. ಚುಂಬನದ ಭಾಗ್ಯ ಇಲ್ಲ. ಬಲು ಸುಂದರವಾದ ಚಿಗುರೆ ಬೆರಳುಗಳು ಮತ್ತು ಹತ್ತಿಯಂತೆ ಮೃದುವಾಗಿರುವ ಕೆಂಪು ಮತ್ತು ಬಿಳುಪು ಬಣ್ಣದ ಛಾಯೆ ಇರುವ ಅವಳ ಅಂಗೈ ಮುದ್ದಾಡಿದನು.

''ಡಿಯರ್... ಮೊದಲು ಡ್ರಿಂಕ್ಸ್ ತಗೋಬೇಕು. ಇಲ್ಲದಿದ್ದರೆ ನನಗೆ ಮೂಡ್ ಬರೋಲ್ಲ'' ಎಂದು ಹೇಳಿ ಅವನನ್ನು ತಳ್ಳಿ ಡೈನಿಂಗ್ ಟೇಬಲ್ ಕಡೆ ಹೆಜ್ಜೆ ಹಾಕಿದಳು.

ಅವನು ಹಿಂಬಾಲಿಸಿದನು. ಅವರಿಬ್ಬರು ಎದುರುಬದರಾಗಿ ಕುಳಿತರು. ಅವನು ಗಾಜಿನ ಗ್ಲಾಸುಗಳಿಗೆ ಡ್ರಿಂಕ್ಸ್ ಮತ್ತು ಸೋಡಾ ಬೆರೆಸಿದನು. ಇಬ್ಬರೂ ಚಿಯರ್ಸ್ ಹೇಳಿದರು. ಕಾಲಿಂಗ್ ಬೆಲ್ ಶಬ್ದ ಮಾಡಿತು.

ಅವನು ಗಾಬರಿಯಾದನು.

ಅವಳು ನಗುತ್ತಾ ''ಯಾರೋ ಬಂದಿದ್ದಾರೆ. ನಾನು ಅವರಿಗೆ ಕಾಣಿಸಿಕೊಳ್ಳಬಾರದು'' ಎಂದು ಡೋರ್ ಓಪನ್ ಆಗಿರುವ ಮತ್ತೊಂದು ರೂಮಿನ ಕಡೆ ಹೊರಟಳು. ಹೋಗುವಾಗ ಡ್ರಿಂಕ್ಸ್ ಬಾಟಲ್ ಮತ್ತು ಹಾಟ್ ಬಾಕ್ಸ್‌ನಲ್ಲಿದ್ದ ಸ್ವೀಟ್ ಸಿಹಿ ತಿಂಡಿಗಳು ಮತ್ತು ನಾನ್‌ವೆಜ್ ಮತ್ತು ಅವಳಿಗೆ ತುಂಬಾ ಪ್ರಿಯವಾಗಿರುವ ಆ್ಯಪಲ್ ಅನ್ನು ಎತ್ತಿಕೊಂಡಳು ಮತ್ತು ಎಲ್ಲವನ್ನು ತಟ್ಟೆಯಲ್ಲಿಟ್ಟುಕೊಂಡು ರೂಮಿನ ಕಡೆ ಹೆಜ್ಜೆ ಹಾಕಿದಳು. ಅವಳು ಕೂಗಿ ಹೇಳಿದಳು.

''ನಿಮ್ಮ ಮನೆಗೆ ಬಂದಿರೋ ಗೆಸ್ಟ್ ವಾಪಸ್ ಹೋದ ಮೇಲೆ ನನ್ನ ರೂಮಿಗೆ ಬನ್ನಿ. ಪಾರ್ಟಿ ಮಾಡುತ್ತಾ ಎಂಜಾಯ್ ಮಾಡೋಣ.''

ಪುನಹ ಬೆಲ್ ಶಬ್ದ ಮಾಡಿತು. ಬೇರೊಂದು ಐಡಿಯ ಬಂದಿತು. ಇಬ್ಬರು ಹೆಂಗಸರು ಇರುವ ಸುಳಿವು ಈಗ ಬಂದಿರುವ ವ್ಯಕ್ತಿಗೆ ಗೊತ್ತಾಗಬಾರದು ಎಂದು ಟೇಪ್ ರೆಕಾರ್ಡರ್ ಆನ್ ಮಾಡಿ ತುಂಬಾ ಸೊಗಸಾಗಿಸುವ ವೆಸ್ಟ್ರನ್ ಮ್ಯೂಸಿಕ್ ಪ್ಲೇ ಮಾಡಿದ ನಂತರ ಡೋರ್ ಓಪನ್ ಮಾಡಿದರು.

☞10

# ಕೆಜಿಎಫ್: ಒಂದೂವರೆ ಸಾವಿರಕ್ಕೆ ಬಾಳೇಹಣ್ಣು ವ್ಯಾಪಾರಿ ಕೊಲೆ!



ಕೊಲೆಯಾದ ರಾಜ

**ಬಾಳೇಹಣ್ಣಿನ ವ್ಯಾಪಾರ ಮುಗಿಸಿಕೊಂಡು ಊರಿಗೆ ಹೋಗಲು ಬಸ್ಸಿಗಾಗಿ ಕಾದಿದ್ದ ವೃದ್ಧನೋರ್ವನಿಗೆ ಯುವಕರಿಬ್ಬರು ಬೈಕ್‌ಗೆ ಪೆಟ್ರೋಲ್ ಹಾಕಿಸಿದರೆ ಡ್ರಾಪ್ ಕೊಡುವುದಾಗಿ ನಂಬಿಸಿ ಬಂಕ್‌ನಲ್ಲಿ ಪೆಟ್ರೋಲ್ ಹಾಕಿಸುವಾಗ ಆತನ ಬಳಿ ಇದ್ದ ಹಣವನ್ನು ನೋಡಿ ಲಪಟಾಯಿಸುವ ಪ್ಲಾನ್ ಮಾಡಿಕೊಂಡು ಊರಿಗೆ ಹೋಗುತ್ತಿರುವಾಗ ಮಾತ್ರ ವಿಸರ್ಜನೆಗೆಂದು ನಿರ್ಜನ ಪ್ರದೇಶದಲ್ಲಿ ನಿಲ್ಲಿಸಿ ಜೇಬಿನಲ್ಲಿದ್ದ 1500 ರೂ.ಗಳನ್ನು ಕಿತ್ತುಕೊಳ್ಳಲು ಹೋದಾಗ ವೃದ್ಧ ವಿರೋಧಿಸಿದಕ್ಕೆ ಟೆಸ್ಟರ್ ಸ್ಕ್ರೂಡ್ರೈವರ್‌ನಿಂದ ತಲೆಗೆ ಚುಚ್ಚಿ ದೊಣ್ಣೆಯಿಂದ ಹೊಡೆದು ಹಲ್ಲೆ ಮಾಡಿ ಹಣದೊಂದಿಗೆ ಪರಾರಿಯಾಗಿದ್ದ ಇಬ್ಬರು ಯುವಕರನ್ನು ಬೇತಮಂಗಲ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**



ಆರೋಜಪಿ ಕಿರಣ್‌ಕುಮಾರ್



ಆರೋಪಿ ವಿಜಯ್

**ಕೋಲಾರ**

✍ ಕೋಲಾರ ಮಂಜು

ಕೋಲಾರ ಜಿಲ್ಲೆ ಕೆಜಿಎಫ್ ತಾಲ್ಲೂಕಿನ ಬೇತಮಂಗಲ ಪೊಲೀಸ್ ಠಾಣೆಯ ಹೆಡ್‌ಕಾನ್‌ಸ್ಟೇಬಲ್ ನಟರಾಜ್ ಡಿಸೆಂಬರ್ 4ರಂದು ಮಧ್ಯಾಹ್ನ 12.15 ಗಂಟೆಗೆ ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ಇಂದು ಬೆಳಿಗ್ಗೆ 8 ಗಂಟೆಗೆ ಕರ್ತವ್ಯಕ್ಕೆಂದು ಪೊಲೀಸ್ ಠಾಣೆಗೆ ಹಾಜರಾಗಿದ್ದಾಗ ಠಾಣಾಧಿಕಾರಿಗಳು ನನಗೆ ಗುಪ್ತ ಮಾಹಿತಿ ಕರ್ತವ್ಯಕ್ಕೆ ನೇಮಕ ಮಾಡಿದ್ದು, ಅದರಂತೆ ಠಾಣಾ ಸರಹದ್ದು ಸುಂದರಪಾಳ್ಯ, ದಾಸೇನಹಳ್ಳಿ, ಎನ್.ಜಿ. ಹುಲ್ಕೂರು ಕಡೆಗಳಲ್ಲಿ ಗುಪ್ತ ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದ ಸಮಯದಲ್ಲಿ ಬೆಳಿಗ್ಗೆ 10.30 ಗಂಟೆಗೆ ನಮ್ಮ ಪೊಲೀಸ್ ಬಾತ್ಮೀದಾರರು ನನಗೆ ತಿಳಿಸಿದ್ದೇನೆಂದರೆ ಬೇತಮಂಗಲ - ವಿ. ಕೋಟೆ ಮುಖ್ಯರಸ್ತೆಯ ಕದರಿಗಾನಕುಪ್ಪ ಗ್ರಾಮದ ಬಳಿ ಕಾಮಗಾರಿ ಹಂತದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಜಮೀನಿನ ಬಳಿ ಯಾರೋ ಒಬ್ಬ ಆಸಾಮಿಗೆ ಮುಖದ ಬಳಿ, ತಲೆಗೆ ಹೊಡೆದು ರಕ್ತಗಾಯಗಳು ಉಂಟು ಮಾಡಿರುತ್ತಾರೆ ಎಂದು ತಿಳಿಸಿದ್ದರ ಮೇರೆಗೆ ನಾನು ಹೋಗಿ ನೋಡಲಾಗಿ ಸಂಗತಿ ನಿಜವಾಗಿರುತ್ತದೆ. ಯಾರೋ ಅನಾಮಧೇಯ ವೃದ್ಧ ವಯಸ್ಸು ಸುಮಾರು 60-65 ವರ್ಷಗಳಾಗಿದ್ದು, ನಿರ್ಜನ ಪ್ರದೇಶದಲ್ಲಿ ಬಿದ್ದಿರುತ್ತಾರೆ. ಸದರಿ ಆಸಾಮಿಗೆ ಬಲಕಣ್ಣಿನ ಹುಬ್ಬಿನ ಕೆಳಗೆ, ಎಡಕಣ್ಣಿನ ಬಳಿ ಮಾರಣಾಂತಿಕ ರಕ್ತಗಾಯವಾಗಿ ರಕ್ತಹೆಪ್ಪುಗಟ್ಟಿರುತ್ತದೆ. ತಲೆಯ ಮೇಲೆ ಸಹ ರಕ್ತಗಾಯವಾಗಿದ್ದು, ಮಾತನಾಡುವ ಸ್ಥಿತಿಯಲ್ಲಿ ಇರದೆ ಅಸ್ವಸ್ಥರಾಗಿದ್ದರು. ಈ ಅನಾಮಧೇಯ ವ್ಯಕ್ತಿಯ ವಾರಸುದಾರರ ಬಗ್ಗೆ ಅಕ್ಕಪಕ್ಕದಲ್ಲಿ ವಿಚಾರಣೆ ಮಾಡಲಾಗಿ ಯಾರೂ ಸಹ ಪತ್ತೆಯಾಗದೆ ಇದ್ದರಿಂದ ಕೂಡಲೇ 108 ಆ್ಯಂಬುಲೆನ್ಸ್ ಮೂಲಕ ಕೋಲಾರ ಜಿಲ್ಲಾ ಶ್ರೀ ನರಸಿಂಹರಾಜ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಲಾಯಿತು. ಯಾರೋ ದುಷ್ಕರ್ಮಿಗಳು ಯಾವುದೋ ಉದ್ದೇಶಕ್ಕಾಗಿ ಅನಾಮಧೇಯ ವ್ಯಕ್ತಿಯನ್ನು ಯಾವುದೋ ಒಂದು ಆಯುಧದಿಂದ ಹೊಡೆದು ರಕ್ತ ಗಾಯಪಡಿಸಿ ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ. ಆದುದರಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವೃದ್ಧನ ವಾರಸುದಾರರನ್ನು ಪತ್ತೆಮಾಡಬೇಕಾಗಿ ಹಾಗೂ ಕೃತ್ಯವೆಸಗಿ ಪರಾರಿಯಾಗಿರುವ ಆರೋಪಿಗಳ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಲು ಕೋರಿದ್ದರ ಮೇರೆಗೆ ಠಾಣಾ ಮೊ.ಸಂ. 162/2024 ಕಲಂ 109 ಬಿಎನ್‌ಎಸ್ 2023 ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ಮೇಲಾಧಿಕಾರಿಗಳಲ್ಲಿ ನಿವೇದಿಸಿಕೊಂಡಿರುತ್ತಾರೆ.



ಎಸ್ಪಿ ಶಾಂತಕುಮಾರ್




ಡಿವೈಎಸ್ಪಿ ಪಾಂಡುರಂಗ



ಬೇತಮಂಗಲ ಪೊಲೀಸ್ ಠಾಣೆ

**ಕೊಲೆಪಾತಕರ ಬಂಧನಕ್ಕೆ ಒತ್ತಾಯ**

ಆಂಧ್ರಪ್ರದೇಶ, ವಿ. ಕೋಟೆಯ ವಾಸಿ ಪಿ. ರಾಜರವರ ಮಗ ಜ್ಯೋತಿನಾಥ್ ರವರು ಡಿಸೆಂಬರ್ 7ರಂದು ರಾತ್ರಿ 7 ಗಂಟೆ ಸಮಯದಲ್ಲಿ ಬೇತಮಂಗಲ ಪೊಲೀಸ್ ಠಾಣೆಗೆ ಹಾಜರಾಗಿ ನೀಡಿದ ದೂರು ಏನೆಂದರೆ ನಮ್ಮ ತಂದೆ ಪೆರುಮಾಳ್ ಗೌಂಡರ್ ರವರ ಮಗ ಪಿ.ರಾಜ(65) ಇವರು ಸುಮಾರು ವರ್ಷಗಳಿಂದ ಬಾಳೇಹಣ್ಣಿನ ವ್ಯಾಪಾರ ಮಾಡಿಕೊಂಡು ಕೆಜಿಎಫ್ ತಾಲ್ಲೂಕು ಬೆನ್ನವಾರ ಗ್ರಾಮದಲ್ಲಿ ವಾಸವಾಗಿದ್ದರು. ಬಾಳೇಹಣ್ಣಿನ ವ್ಯಾಪಾರವನ್ನು ಬೇತಮಂಗಲದ ಮುಖ್ಯರಸ್ತೆಯಲ್ಲಿ ಮಾಡುತ್ತಿದ್ದರು. ವಾರದಲ್ಲಿ 1-2 ದಿನ ವಿ. ಕೋಟೆಗೆ ಬಂದು ಮತ್ತೆ ಬೇತಮಂಗಲಕ್ಕೆ ಬಂದು ಬಿಡುತ್ತಿದ್ದರು. ಡಿಸೆಂಬರ್ 4ರಂದು ಸಂಜೆ ಊರಿಗೆ ಬರುತ್ತೇನೆಂದು ಹೇಳಿದ ತಂದೆಯವರು ರಾತ್ರಿಯಾದರೂ ಬರದೇ ಇದ್ದಾಗ ಫೋನ್ ಮಾಡಿದಾಗ ಅವರ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿತ್ತು. ಮೊಬೈಲ್ ಚಾರ್ಜ್ ಇಲ್ಲದೆ ಇರುವುದರಿಂದ ಆಫ್ ಆಗಿರಬೇಕು, ಫೋನ್ ಮಾಡುತ್ತಾರೆಂದು ಕಾದಿದ್ದೆವು. ಡಿಸೆಂಬರ್ 5ರಂದು ಬೆಳಿಗ್ಗೆ ಫೋನ್ ಕರೆಯೊಂದು ಬಂದಿತು. ಇದು ಅಪ್ಪನ ಫೋನ್ ಕರೆ ಎಂದು ನೋಡಿದಾಗ ಬೇರೆ ಯಾರೋ ಮಾತನಾಡುತ್ತಾ ನಿಮ್ಮ ತಂದೆ ರಾಜರವರನ್ನು ಯಾರೋ ಅಪರಿಚಿತ ವ್ಯಕ್ತಿಗಳು ಕದಿರಗಾನಕುಪ್ಪ ಗ್ರಾಮದ ಬಳಿ ಹೊಡೆದು ಹಾಕಿದ್ದರು. ಅವರನ್ನು ಪೊಲೀಸರು ಆಸ್ಪತ್ರೆಗೆ ಸೇರಿಸಿದ್ದಾರಂತೆ ಎಂದು ತಿಳಿಸಿದರು. ಕೂಡಲೇ ಪೊಲೀಸ್ ಠಾಣೆಗೆ ಹೋಗಿ ವಿಚಾರಿಸಲಾಗಿ ಕೋಲಾರ ಜಿಲ್ಲಾ ಆಸ್ಪತ್ರೆಗೆ ಸೇರಿಸಿರುವುದಾಗಿ ಹೇಳಿದರು. ಅದರಂತೆ ನಾನು ಎಸ್‌ಎನ್‌ಆರ್ ಆಸ್ಪತ್ರೆಗೆ ಹೋಗಿ ನೋಡಲಾಗಿ ಅವರು ಮಾತನಾಡುವ ಸ್ಥಿತಿಯಲ್ಲಿ ಇರದೆ ಅಸ್ವಸ್ಥರಾಗಿದ್ದರು. ನಂತರ ನಾನು ಅಲ್ಲಿಯೇ ಎಂಟು ದಿನಗಳ ಕಾಲ ಆಸ್ಪತ್ರೆಯಲ್ಲಿ ನಮ್ಮ ತಂದೆಯ ಸೇವೆ ಮಾಡಿಕೊಂಡು ಇದ್ದೆನು. ಚಿಕಿತ್ಸೆ ಫಲಕಾರಿಯಾಗದೆ ಡಿಸೆಂಬರ್ 7ರಂದು ಮಧ್ಯಾಹ್ನ 2 ಗಂಟೆಗೆ ಮೃತಪಟ್ಟಿರುತ್ತಾರೆ. ಯಾರೋ ದುಷ್ಕರ್ಮಿಗಳು ಯಾವುದೋ ದುರುದ್ದೇಶದಿಂದ ನಮ್ಮ ತಂದೆಗೆ ಯಾವುದೋ ಆಯುಧಗಳನ್ನು ಬಳಸಿ ಮಾರಣಾಂತಿಕ ಹಲ್ಲೆ ಮಾಡಿರುತ್ತಾರೆ. ಅಂದಿನಿಂದ ಕೋಲಾರದ ಎಸ್‌ಎನ್‌ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಈ ದಿನ ಮೃತಪಟ್ಟಿರುತ್ತಾರೆ. ನಮ್ಮ ತಂದೆಯನ್ನು ಕೊಲೆ ಮಾಡುವ ಉದ್ದೇಶದಿಂದ ಅವರ ಮೇಲೆ ಹಲ್ಲೆ ಮಾಡಿ ಅಜ್ಞಾತ ಸ್ಥಳದಲ್ಲಿ ಬಿಸಾಡಿ, ಕೊಲೆಯನ್ನು ಮರೆಮಾಚಿರುವ ಕೊಲೆಪಾತಕರನ್ನು ಪತ್ತೆಹಚ್ಚಿ ಅವರ ಮೇಲೆ ಕಾನೂನು ಕ್ರಮ ಜರುಗಿಸಲು ಕೋರಿರುತ್ತಾರೆ.



ಪಿಐ ರಂಗಶಾಮಯ್ಯ



ಪಿಎಸ್‌ಐ ಗುರುರಾಜ ಚಿಂತಾಕಾಲ

ಆದ್ದರಿಂದ ಅವರ ಹೇಳಿಕೆ ಮೇಲೆ ಈಗಾಗಲೇ ದಾಖಲಿಸಿ ತನಿಖೆಯಲ್ಲಿರುವ ಮೊ.ಸಂ. 162/2024 ಕಲಂ 109 ಬಿಎನ್‌ಎಸ್ ಬದಲಿಗೆ ಪಿಎಸ್‌ಐ ಗುರುರಾಜ ಚಿಂತಾಕಾಲರವರು ಠಾಣಾ ಮೊ.ಸಂ. 162/2024 ಕಲಂ 103(1) 238 ಬಿಎನ್‌ಎಸ್- 2023 ಅನ್ನು ಅಳವಡಿಸಿಕೊಂಡು ಮುಂದಿನ ತನಿಖೆಯ ಸಲುವಾಗಿ ಮೇಲಾಧಿಕಾರಿಗಳಲ್ಲಿ ವರದಿ ಮಾಡಿಕೊಂಡಿರುತ್ತಾರೆ. ಸ್ಥಳಕ್ಕೆ ಕೆಜಿಎಫ್ ಎಸ್ಪಿ ಶಾಂತಕುಮಾರ್, ಡಿವೈಎಸ್ಪಿ ಪಾಂಡುರಂಗಯ್ಯ ಮತ್ತು ಸಿಬ್ಬಂದಿಯವರು ಭೇಟಿ ನೀಡಿ ಸ್ಥಳದ ಮಹಜರ್

☞12

# ಹೇರಿಂದ್ಯಾಪನಹಳ್ಳಿ ಗ್ರಾ.ಪಂ. ನರೇಗಾ ಯೋಜನೆಯಲ್ಲಿ ಭಾರೀ ಅವ್ಯವಹಾರ! ಬಿಲ್ ಕಲೆಕ್ಟರ್ ಲೋಕೇಶ ವಸೂಲಿ ಮಾಡಿದ ಮನೆ ಕಂದಾಯ ಗುಳುಂ ಸ್ವಾಹ!!

**ರಾಮನಗರ**

✍ ಶಾಂತರಾಜು ಜಿ. ಕಲ್ಲಹಳ್ಳಿ


ಬಿಲ್ ಕಲೆಕ್ಟರ್ ಲೋಕೇಶ್ ಬಿ.ಎಂ.

ಕೇಂದ್ರ, ಸರ್ಕಾರ ರೂಪಿಸಿರುವ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಲೆಂದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಕ್ಕೆ ತಂದು, ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತಾಪಿ ವರ್ಗದವರು ಅವರವರ ಜಮೀನಿನಲ್ಲಿ ಅಭಿವೃದ್ಧಿಪಡಿಸುವ ಸುಮಾರು ಕೆಲಸ ಕಾರ್ಯಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಅಲ್ಲದೆ ಗ್ರಾಮ ಅಭಿವೃದ್ಧಿಗಾಗಿ ಊರಿನ ಕೆರೆಕಟ್ಟೆಗಳ ಊಳೆತ್ತುವುದು, ಅಂತರ್ಜಲ ವೃದ್ಧಿಸುವುದು, ಧನಕರುಗಳಿಗೆ ನೀರು ಕುಡಿಯಲು ತೊಟ್ಟಿ ನಿರ್ಮಾಣ ಮಾಡುವುದು, ಚರಂಡಿಗಳು, ಕಾಂಕ್ರೀಟ್ ರಸ್ತೆಗಳು, ಮೇಕೆ ಶೆಡ್ಡು, ಕುರಿ ಶೆಡ್ಡು, ಕೋಳಿ ಶೆಡ್ಡು, ದನದ ಕೊಟ್ಟಿಗೆ ಮತ್ತು ಬಚ್ಚಲು ಗುಂಡಿಗಳು, ಶೌಚಾಲಯ ನಿರ್ಮಾಣ, ಸರ್ಕಾರಿ ಶಾಲೆಗಳಿಗೆ ಅನುಕೂಲವಾಗುವ ಹಲವಾರು ಯೋಜನೆಗಳು, ಇದಲ್ಲದೆ ವಿವಿಧ ಇಲಾಖೆಗಳಿಂದ ನರೇಗಾ ಯೋಜನೆಯಡಿ ಮಾಡಬಹುದಾದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಫಲಾನುಭವಿಗಳು ಅವರವರ ಕುಟುಂಬದ ಸದಸ್ಯರ ಹೆಸರಿನಲ್ಲಿ ಜಾಬ್ ಕಾರ್ಡ್‌ಗಳನ್ನು ಆಯಾ ಗ್ರಾಮ ಪಂಚಾಯಿತಿಯಲ್ಲಿ ಪಡೆದು, ಅವರೇ ಸ್ವಯಂ ಉದ್ಯೋಗ ರೂಪಿಸಿಕೊಂಡು, ಅವರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದುವುದರ ಜೊತೆಗೆ ತಮ್ಮ ಜಮೀನುಗಳನ್ನು ವ್ಯವಸಾಯಕ್ಕೆ ತಕ್ಕಂತೆ ಅಭಿವೃದ್ಧಿ ಪಡಿಸಿಕೊಂಡು ಉದ್ಯೋಗ ಹರಸಿ ಬೇರೆ ಕಡೆ ವಲಸೆ ಹೋಗುವುದನ್ನು ತಪ್ಪಿಸಲೆಂದು ಈ ನರೇಗಾ ಯೋಜನೆಯು ಗ್ರಾಮೀಣ ಭಾಗದ ಜನತೆಗೆ ಅನುಕೂಲಕರವಾಗಿದೆ. ಮತ್ತೊಂದೆಡೆ ಇದನ್ನೇ ಬಂಡವಾಳವಾಗಿ ಮಾಡಿಕೊಂಡಿರುವ ಕೆಲವು ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳು, ಜನಪ್ರತಿನಿಧಿಗಳು ನರೇಗಾ ಇಂಜಿನಿಯರ್‌ಗಳು ಫಲಾನುಭವಿಗಳ ಜೊತೆ ಶಾಮೀಲಾಗಿ ಕೆಲವೊಂದು ಕಾಮಗಾರಿಗಳಿಗೆ ಎರಡು/ಮೂರು ಬಿಲ್ ಮಾಡಿಕೊಂಡಿರುವುದು, ಬಿಲ್ ಪಡೆದ ನಂತರ ಆ ಕಾಮಗಾರಿಗಳನ್ನೇ ಮುಚ್ಚುವುದು, ಸತ್ತವರ ಹೆಸರಲ್ಲಿ ಹಣ ಪಡೆಯುವುದು, ಸರ್ಕಾರಿ ನೌಕರರ ಹೆಸರಲ್ಲಿ ಹಣ ವರ್ಗಾವಣೆ ಮಾಡುವುದು, ಇದೆಲ್ಲದರ ಜೊತೆಗೆ ನರೇಗಾ ಯೋಜನೆಯ ನಿಯಮಾವಳಿಗಳನ್ನು ಗಾಳಿಗೆ ತೂರಿ, ಯಂತ್ರೋಪಕರಣಗಳನ್ನು ಬಳಕೆ ಮಾಡಿಕೊಂಡು ಈ ಯೋಜನೆಗೆ ಮಸಿ ಬಳಿಯುವಂತಹ ವಿಚಾರಗಳನ್ನು ಆಯಾ ಗ್ರಾಮ ಪಂಚಾಯಿತಿಗಳ ಲೆಕ್ಕ ಪರಿಶೋಧನೆ ಸಭೆಗಲಲ್ಲಿ ಬಟಾ ಬಯಲಾಗುತ್ತಿದ್ದರೂ ಕಂಡು ಕಾಣದಂತೆ ಕಣ್ಣು ಮುಚ್ಚಿ ಕುಳಿತಿರುವ ಮೇಲಾಧಿಕಾರಿಗಳನ್ನು ಗಮನಿಸಿದರೆ ಬೇಲಿಯೇ ಎದ್ದು ಹೊಲ ಮೇಯ್ದಂತೆ ಇದೆ.



ಹೇರಿಂದ್ಯಾಪನಹಳ್ಳಿ ಗ್ರಾಮ ಪಂಚಾಯಿತಿ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ (ನರೇಗಾ)ಯಡಿಯಲ್ಲಿ ಸದುಪಯೋಗ ಮಾಡಿಕೊಂಡು ಅಭಿವೃದ್ಧಿಪಡಿಸಿಕೊಂಡು ರಾಜ್ಯಕ್ಕೆ ಪ್ರಥಮ ಎಂದು ಖ್ಯಾತಿ ಪಡೆದಿರುವುದು ಮತ್ತು ಅವ್ಯವಹಾರದ ಪಟ್ಟ ಕಟ್ಟಿಕೊಂಡಿರುವುದು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕು ಎಂದರೆ ತಪ್ಪಾಗಲಾರದು. ಈ ತಾಲ್ಲೂಕಿಗೆ ತಮ್ಮದೇ ಆದ ಶ್ರಮವಹಿಸಿ ಅಭಿವೃದ್ಧಿ ಪಡಿಸುತ್ತಿರುವ ರಾಜ್ಯದ ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್‌ರವರು ಹಾಗೂ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಮಾಜಿ ಸಂಸದರಾದ ಡಿ.ಕೆ. ಸುರೇಶ್‌ರವರು ಪ್ರತಿಯೊಂದು ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಎಷ್ಟೆಲ್ಲಾ ಶ್ರಮ ವಹಿಸುತ್ತಿದ್ದಾರೆ ಎಂಬುದು ರಾಜ್ಯದ ಜನತೆಗೆ ಗೊತ್ತಿರುವ ವಿಚಾರ ಇತ್ತ ಇವರ ಹೆಸರಿಗೆ ಕಳಂಕ ಬರುವ ಹಾಗೆ ನಡೆದುಕೊಳ್ಳುತ್ತಿರುವುದು ಸ್ಥಳೀಯ ಗ್ರಾಮ ಪಂಚಾಯಿತಿಗಳ ಜನಪ್ರತಿನಿಧಿಗಳು ನರೇಗಾ ಯೋಜನೆ ವಿಚಾರ ಬಂದಾಗ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲೂ ಅವ್ಯವಹಾರ ಇದ್ದೇ ಇರುತ್ತದೆ. ಅದರಲ್ಲಿ ಕನಕಪುರ ತಾಲ್ಲೂಕಿನಲ್ಲೂ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಲೆಕ್ಕ ಪರಿಶೋಧನಾ ಗ್ರಾಮಸಭೆಗಳ ಮೂಲಕ ಬಯಲಾಗುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಇತ್ತೀಚೆಗೆ ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿಯ ಹೇರಿಂದ್ಯಾಪನಹಳ್ಳಿ ಗ್ರಾಮ ಪಂಚಾಯಿತಿಯ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ಸಾಮಾಜಿಕ ಲೆಕ್ಕ ಪರಿಶೋಧನಾ ಗ್ರಾಮಸಭೆ ನಡೆಯಿತು. ನರೇಗಾ ಯೋಜನೆಯಲ್ಲಿ ಭಾರೀ ಅವ್ಯವಹಾರ ನಡೆದಿದ್ದು, ಈ ಯೋಜನೆಯಿಂದ ಯಾವುದೇ ಫಲಾನುಭವಿಗಳಿಗೆ ಸಮರ್ಪಕವಾದ ಸವಲತ್ತುಗಳು ಸಿಗುತ್ತಿಲ್ಲ ಎಂದು ಪ್ರಕಾಶ್, ಚಂದ್ರು ಮತ್ತು ಹಲವಾರು ಗ್ರಾಮಸ್ಥರುಗಳು ತಮ್ಮ ಸಮಸ್ಯೆಗಳನ್ನು ಅಧಿಕಾರಿಗಳ ಮುಂದೆ ಹೇಳಿದರು. ಅದರಲ್ಲಿ ಸರ್ಕಾರಿ ನೌಕರ ಚಂದ್ರು ಎಂಬುವರು ಸಭೆಯಲ್ಲಿ ಎದ್ದು ನಿಂತು, ಸರ್ಕಾರಿ ನೌಕರರಿಗೆ ಕೂಲಿ ಹಣ ಪಾವತಿ ಮಾಡುವಂತಿಲ್ಲ. ಹಾಗಾಗಿ ನನ್ನ ಖಾತೆಗೆ ಬಂದಿದ್ದ ಕೂಲಿ ಹಣವನ್ನು ಪಂಚಾಯಿತಿಗೆ ಮರುಪಾವತಿ ಮಾಡಿದ್ದೇನೆ. ಎರಡು ವರ್ಷದಿಂದ ಇಂದು ನಾಳೆ ಎಂದು ಕಾಲಹರಣ ಮಾಡುತ್ತಿದ್ದಾರೆ. ನಾವು ಸರ್ಕಾರಕ್ಕೆ ಮರುಪಾವತಿ ಮಾಡಿರುವ ಹಣವನ್ನು ಈ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯಾದ ಬಸವರಾಜುರವರು ವೈಯಕ್ತಿಕವಾಗಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಅನುಮಾನವಿದೆ. ಈ ಅಧಿಕಾರಿಗಳು ವರ್ಗಾವಣೆ ಅಥವಾ ನಿವೃತ್ತಿ ಆದರೆ ನಾವು ಮತ್ತೊಮ್ಮೆ ಹಣ ಕಟ್ಟಬೇಕಾಗುತ್ತದೆ.

ಈ ಸಭೆಯಲ್ಲಿ ನಾವು ಕಟ್ಟಿರುವ ಹಣಕ್ಕೆ ಏನಾದರೂ ದಾಖಲೆ ಕೊಡಿಸಬೇಕು ಎಂದು ಪಟ್ಟು ಹಿಡಿದರು. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶೌಚಗೃಹ ನಿರ್ಮಾಣದಲ್ಲಿ ಅಕ್ರಮವಾಗಿರುವುದು, ಜಲಜೀವನ ಮಿಷನ್ ಹಾಗೂ ನರೇಗಾ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ಅರ್ಹ ಫಲಾನುಭವಿಗಳನ್ನು ಕೈ ಬಿಟ್ಟು ತಮಗೆ ಬೇಕಾದ ಜಾಗದಲ್ಲಿ ಕಾಮಗಾರಿಗಳನ್ನು ಮಾಡದೇ ಹಣವನ್ನು ಡ್ರಾ ಮಾಡಲಾಗಿದೆ. ದನದ ಕೊಟ್ಟಿಗೆ ನಿರ್ಮಾಣಕ್ಕೆ ಸರ್ಕಾರದಿಂದ 45 ಸಾವಿರ ರೂ. ನಿಗಧಿಯಾಗಿದ್ದರೆ, ಪಂಚಾಯಿತಿಯಲ್ಲಿ ಕೇವಲ 15 ಸಾವಿರ ರೂಪಾಯಿ ಕೊಟ್ಟು ಕೈ ತೊಳೆದುಕೊಳ್ಳುತ್ತಿದ್ದಾರೆ. ಗ್ರಾಮದ ಸರ್ವೆ ನಂ. 52ರಲ್ಲಿ ವೀಳ್ಯದೆಲೆ ತೋಟಕ್ಕೆ ನರೇಗಾ ಯೋಜನೆ ನೀಡಿದ್ದಾರೆ. ಆದರೆ ಅಲ್ಲಿ ಯಾವುದೇ ಪಂಪ್ ಸೆಟ್, ಬೆಳೆ ಬೆಳೆಯದಿದ್ದರೂ ಹಣ ಡ್ರಾ ಮಾಡಲಾಗಿದೆ ಎಂದು ಆರೋಪಿಸಿದರು. ಮತ್ತೋರ್ವ ಗುಳಗನಹಳ್ಳಿ ಗ್ರಾಮಸ್ಥ ಚನ್ನಪ್ಪ ಎಂಬುವರು ಈ ಗ್ರಾಮಪಂಚಾಯಿತಿಯಲ್ಲಿ ಶೌಚಾಲಯ ನಿರ್ಮಾಣದಲ್ಲಿ ಭಾರೀ ಅಕ್ರಮವಾಗಿದೆ. ಕೊಟ್ಟಿಗೆ ನಿರ್ಮಿಸಿ ಒಂದು ವರ್ಷ ಕಳೆದರೂ ಹಣ ಬಿಡುಗಡೆಯಾಗಲಿಲ್ಲ. ಆದಷ್ಟು ಬೇಗ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆದಿರುವ ನರೇಗಾ ಯೋಜನೆಯ ದುರುಪಯೋಗ ಮತ್ತು ಅಕ್ರಮದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು ಎಂದು ಒತ್ತಾಯಿಸಿದರು.


ನರೇಗಾ ಇಂಜಿನಿಯರ್ ಶಿವರಾಜು

ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ, ಹಾಲಿ ಸದಸ್ಯ ತಟ್ಟಗುಪ್ಪೆ ರಾಜೇಗೌಡ ಸಭೆಯಲ್ಲಿ ಚರ್ಚಿಸುತ್ತಾ ನರೇಗಾ ಇಂಜಿನಿಯರ್ ಶಿವರಾಜುರವರು ಕೆಲವೊಂದು ಕಾಮಗಾರಿಗಳನ್ನು ಪರಿಶೀಲನೆ ಮಾಡದೇ ಥಮ್ ಕೊಡುವುದು, ಎಂಪಿ ಪುಸ್ತಕ ಬರೆಯುವುದು, ದನದ ಕೊಟ್ಟಿಗೆ, ಕೋಳಿ ಶೆಡ್, ಮೇಕೆ ಶೆಡ್, ಬದು ನಿರ್ಮಾಣಕ್ಕೆ ತಲಾ 2 ಸಾವಿರ ರೂಪಾಯಿ ಬೇಡಿಕೆ ಇಟ್ಟು ವಸೂಲಿ ಮಾಡುವುದರ ಜೊತೆಗೆ ಸಾರ್ವಜನಿಕರಿಗೆ ಯಾವುದೇ ರೀತಿ ಸ್ಪಂದಿಸದೇ ಬೇಜವಾಬ್ದಾರಿಯುತ ಕಾರ್ಯ ನಿರ್ವಹಿಸುತ್ತಿರುವ ನರೇಗಾ ಇಂಜಿನಿಯರ್ ಶಿವರಾಜುರವರು ನಮ್ಮ ಗ್ರಾಮ ಪಂಚಾಯಿತಿಗೆ ಬೇಡ, ಸಾರ್ವಜನಿಕರಿಗೆ ಸ್ಪಂದಿಸುವ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡುವ ನರೇಗಾ ಇಂಜಿನಿಯರ್ ಬೇಕು ಎಂದು ಮನವಿ ಮಾಡಿಕೊಂಡರು.

ಸಾಮಾಜಿಕ ಲೆಕ್ಕ ಪರಿಶೋಧಕ ಸಂಯೋಜಕಿ ಕಮಲಮ್ಮ ನರೇಗಾ ಯೋಜನೆಯ ವರದಿ ಮಂಡಿಸಿ, ಈ ಯೋಜನೆಯ ಸದ್ಬಳಕೆಯ ಬಗ್ಗೆ ಮಾಹಿತಿ ನೀಡುತ್ತಾ, ರೇಷ್ಮಾ ಇಲಾಖೆಯಲ್ಲಿ 16 ಲಕ್ಷ ರೂ. ವೆಚ್ಚದಲ್ಲಿ 49 ಕಾಮಗಾರಿಗಳು, ಕೃಷಿ ಇಲಾಖೆಯಲ್ಲಿ 28 ಲಕ್ಷದಲ್ಲಿ ಒಂದು ಕಾಮಗಾರಿ, ಅರಣ್ಯ ಇಲಾಖೆಯಲ್ಲಿ 16 ಲಕ್ಷ ರೂ. ವೆಚ್ಚದಲ್ಲಿ 21 ಕಾಮಗಾರಿಗಳು ನಡೆದಿವೆ. ಸಸಿ ನೆಡುವ ಯೋಜನೆಯಲ್ಲಿ ಸಸಿಗಳೇ ಅಲ್ಲಿ ಕಾಣುತ್ತಿಲ್ಲ. ಅರಣ್ಯ ಇಲಾಖೆ ಕೂಡಲೇ ಇದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಒಟ್ಟು 31 ಕಾಮಗಾರಿಗಳಿಗೆ ಭಾವಚಿತ್ರ ಅಳವಡಿಸಿಲ್ಲ. 42 ಕಾಮಗಾರಿಗಳಿಗೆ ಎಂ.ಬಿ. ಪುಸ್ತಕ ಬರೆಯದೆ ಹಣ ಬಿಡುಗಡೆಗೊಳಿಸಲಾಗಿದೆ. 60ಕ್ಕೂ ಹೆಚ್ಚು ಕಾಮಗಾರಿಗಳಲ್ಲಿ ನಾಮಫಲಕಗಳ ಪ್ರದರ್ಶನವಿಲ್ಲ. ವಸತಿ ಇಲಾಖೆಯಲ್ಲೂ ಇಂತಹ ಪ್ರಕರಣಗಳಿಗೆ ಹಣ ಬಿಡುಗಡೆ ಮಾಡಲಾಗಿದೆ. ಕಂದಕ ಬದು, ದನದ ಕೊಟ್ಟಿಗೆಗಳು 4 ಕಾಮಗಾರಿಗಳು ನಾಶವಾಗಿವೆ. ಕೂಡಲೇ ಇವುಗಳನ್ನು ಮರು ನಿರ್ಮಾಣ ಮಾಡುವುದು, ಇಲ್ಲವಾದಲ್ಲಿ ಅದರ ಹಣವನ್ನು ವಾಪಸ್ ಕಟ್ಟಿಸಬೇಕೆಂದು ಪಿಡಿಓ ಬಸವರಾಜುರವರಿಗೆ ಸೂಚನೆ ನೀಡಿ ಆದೇಶಿಸಿದರು.


ಬಿಲ್ ಕಲೆಕ್ಟರ್ ಲೋಕೇಶ್ ಬಿ.ಎಂ. ಮನೆ

## ಇಂಜಿನಿಯರ್ ಹಾಗೂ ಬಿಲ್ ಕಲೆಕ್ಟರ್‌ಗೆ ವಾರ್ನಿಂಗ್!

ಹೇರಿಂದ್ಯಾಪನಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಸವರಾಜು ಲೋಪದೋಷವಿರುವ ಕಾಮಗಾರಿಗಳನ್ನು ಪರಿಶೀಲಿಸಿ ಒಂದು ತಿಂಗಳಲ್ಲಿ ಸರಿಪಡಿಸುವುದಾಗಿ ತಿಳಿಸುತ್ತಾ, ನರೇಗಾ ಇಂಜಿನಿಯರ್ ಶಿವರಾಜು ಮತ್ತು ಬಿಲ್ ಕಲೆಕ್ಟರ್ ಲೋಕೇಶ್ ಬಿ.ಎಂ. ಇವರಿಬ್ಬರ ಬಗ್ಗೆ ಸಾರ್ವಜನಿಕರು ಆರೋಪ ಮಾಡಿರುವುದರಿಂದ ಮುಂದೆ ನೀವು ಮಾಡಿರುವ ತಪ್ಪುಗಳನ್ನು ಸರಿಪಡಿಸಿಕೊಂಡು ಮುಂದೆ ಯಾವುದೇ ರೀತಿ ತಪ್ಪು ಮರುಕಳಿಸದ ರೀತಿಯಲ್ಲಿ ಕೆಲಸ ಮಾಡಿ ಎಂದು ಸಭೆಯಲ್ಲಿ ವಾರ್ನಿಂಗ್ ಕೊಟ್ಟರು.


ಈ ಮನೆಯ ಕಂದಾಯ ಹಣ ಕಟ್ಟಿರು ಜಯಮ್ಮ


ತಿಪ್ಪೂರು ಜಯಮ್ಮ

ಹೇರಿಂದ್ಯಾಪನಹಳ್ಳಿ ಗ್ರಾಮ ಪಂಚಾಯಿತಿಯ ಸಾಮಾಜಿಕ ಲೆಕ್ಕಪರಿಶೋಧನ ಗ್ರಾಮಸಭೆಯಲ್ಲಿ ತಿಪ್ಪೂರು ಗ್ರಾಮದ ಮಹಿಳೆ ಜಯಮ್ಮ ಕೋಂ ಮಾರೇಗೌಡ ಆಕ್ರೋಶದಿಂದ ಪಂಚಾಯಿತಿ ಬಿಲ್ ಕಲೆಕ್ಟರ್ ಲೋಕೇಶ್ ಬಿ.ಎಂ. ಬಿಜ್ಜಹಳ್ಳಿರವರು ಜೊತೆಗೆ ನಮ್ಮ ಗ್ರಾಮದ ಗ್ರಾಮ ಪಂಚಾಯಿತಿ ಸದಸ್ಯರನ್ನು ಜೊತೆಗೆ ಕರೆದುಕೊಂಡು ನಮ್ಮ ಮನೆಯ ಹತ್ತಿರ ಬಂದು ಮನೆ ಕಂದಾಯ ಕಟ್ಟಬೇಕು ಎಂದು ಕೇಳಿದಾಗ 5 ಸಾವಿರ ರೂಪಾಯಿಗಳನ್ನು ಕೊಟ್ಟಾಗ, ಅವರು 110 ರೂ. ವಾಪಸ್ ಕೊಟ್ಟು ಹೋಗಿ ಸುಮಾರು ಒಂದೂವರೆ ವರ್ಷ ಕಳೆದರೂ ಈವರೆಗೆ ರಶೀದಿ ಕೊಟ್ಟಿಲ್ಲ. ನಾನು ಹಲವಾರು ಬಾರಿ ಬಿಲ್ ಕಲೆಕ್ಟರ್ ಲೋಕೇಶ್ ಬಿ.ಎಂ. ರನ್ನು ಭೇಟಿ ಮಾಡಿ ನಾನು ಕಟ್ಟಿರುವ ಮನೆ ಕಂದಾಯ 5 ಸಾವಿರ ಹಣಕ್ಕೆ ರಶೀದಿ ಕೊಡಿ ಎಂದು ಕೇಳಿದರು, ಈಗ, ಆಗ, ನಾಳೆ ಎಂದು ಒಂದೂವರೆ ವರ್ಷದಿಂದ ಇದೇ ಉತ್ತರ ಕೊಡುತ್ತಿದ್ದಾರೆ. ಈ ಬಿಲ್ ಕಲೆಕ್ಟರ್ ಲೋಕೇಶ್, ನಮ್ಮ ಮನೆಯಲ್ಲಿ ನನ್ನ ಗಂಡ ಮಾರೇಗೌಡ, ಮಗ ಸುರೇಶ ಇಬ್ಬರೂ ನಾನು ಕಟ್ಟಿರುವ ಹಣದ ರಶೀದಿ ಪಡೆಯಲಿಲ್ಲ ಎಂದು ಗಲಾಟೆ ಮಾಡುತ್ತಿದ್ದಾರೆ. ನನಗೆ ದಯಮಾಡಿ ನಮ್ಮ ಮನೆಯ ಕಂದಾಯದ ಹಣ ಕಟ್ಟಿರುವ ರಶೀದಿಯನ್ನು ಲೋಕೇಶ್‌ರಿಂದ ಕೊಡಿಸಿಕೊಟ್ಟು, ಈ ಬಿಲ್ ಕಲೆಕ್ಟರ್‌ಗೆ ತಕ್ಕ ಕಾನೂನು ಕ್ರಮ ಜರುಗಿಸಿ ಎಂದರು.


ಮತ್ತೋರ್ವ ಯಕ್ಕುಳ್ಳಿ ಗ್ರಾಮದ ರೈತ ಮಾರೇಗೌಡ ಎಂಬುವರು ಸಹ ಇದೇ ಬಿಲ್ ಕಲೆಕ್ಟರ್ ಲೋಕೇಶ್ ಬಿ.ಎಂ.ರವರು ನಮ್ಮ ಮನೆಯ ಹತ್ತಿರ ಬಂದು ನಿಮ್ಮ ಮನೆ ಖಾತೆಯಾಗುತ್ತಿದೆ ಕಂದಾಯ ಕಟ್ಟಿ ಎಂದಾಗ ಎಷ್ಟು ಹಣ ಎಂದು ಕೇಳಲಾಗಿ, 2 ಸಾವಿರ ರೂಪಾಯಿ ಎಂದರು. ಆಗ ನಾನು 2 ಸಾವಿರ ಮನೆ ಕಂದಾಯ ಕಟ್ಟಿ ರಶೀದಿ ಕೇಳಿದಾಗ ಕೊಡುತ್ತೇನೆ ಎಂದು ಹೋದವರು, ಸುಮಾರು ಒಂದು ವರ್ಷವೇ ಕಳೆಯಿತು. ಇಲ್ಲಿಯವರೆಗೂ ಸಿಕ್ಕಿದಾಗಲೆಲ್ಲ ಕೊಡುತ್ತೇನೆ ಎಂದು ಗಾಡಿಯಲ್ಲಿ ಕೈ ಬೀಸಿಕೊಂಡು ಹೊರಟು ಹೋಗುತ್ತಿದ್ದ ಆಸಾಮಿ ಎಂದು ಪಂಚಾಯಿತಿಯಲ್ಲಿ ಅಧಿಕಾರಿಗಳ ಗಮನಕ್ಕೂ ತಂದರೂ ಪ್ರಯೋಜನವಾಗಲಿಲ್ಲ. ಈಗಲಾದರೂ ರಶೀದಿ ಕೊಡಿಸಿ ಕೊಡಿ ಎಂದು ಅಂಗಲಾಚಿದರು.

ಈ ಗ್ರಾಮ ಪಂಚಾಯಿತಿಯ ಬಿಲ್ ಕಲೆಕ್ಟರ್ ಲೋಕೇಶ್ ಬಿ.ಎಂ. ಮನಸೋ ಇಚ್ಛೆಯಂತೆ ಕೆಲಸ ಮಾಡುತ್ತಿರುತ್ತಾರೆ ಎಂದು ಸಾರ್ವಜನಿಕರು ಆರೋಪಿಸುತ್ತಾ, ಈತ ಮೊದಲು ನೀರುಘಂಟಿಯಾಗಿ 1992ರಲ್ಲಿ ಕೆಲಸ ಮಾಡುತ್ತಿದ್ದು, ಸರಿಯಷ್ಟೆ ಅದ್ಯಾವ ಕಾರಣದಿಂದ ಈತ ಬಿಲ್ ಕಲೆಕ್ಟರ್ ಆದನೋ ಗೊತ್ತಿಲ್ಲ. ಈತನಿಗೆ ಈ ಕೆಲಸದ ಅರಿವೇ ಇಲ್ಲದಂತೆ ವರ್ತಿಸುತ್ತಾರೆ. ಗ್ರಾಮಸಭೆಗಳು, ವಾರ್ಡ್ ಸಭೆಗಳಲ್ಲಿ ಈ ಬಿಲ್ ಕಲೆಕ್ಟರ್ ಸಾಮಾನ್ಯವಾಗಿ ಕಾಣಿಸಿಕೊಳ್ಳುವುದೇಯಿಲ್ಲ. ಕಾರಣ ಮನೆ ಕಂದಾಯದ ಹಣ ಕಟ್ಟಿಸಿಕೊಂಡು ಅವರಿಗೆ ರಶೀದಿನೇ ಕೊಡದೇ ಆ ಹಣವನ್ನು ಗುಳುಂ ಸ್ವಾಹಃ ಮಾಡುತ್ತಿರುವ ಈ ಬಿಲ್ ಕಲೆಕ್ಟರ್ ಲೋಕೇಶ್‌ಗೆ ಮೇಲಾಧಿಕಾರಿಗಳು ಕಾನೂನು ರೀತಿ ಕ್ರಮ ಕೈಗೊಳ್ಳುವರೇ ಎನ್ನುತ್ತಾರೆ ಸಾರ್ವಜನಿಕರು.

ಈ ಸಭೆಯಲ್ಲಿ ಅಧ್ಯಕ್ಷರಾದ ಬೈರವಮೂರ್ತಿ, ಉಪಾಧ್ಯಕ್ಷೆ ಜಯರತ್ನ, ಮಾಜಿ ಉಪಾಧ್ಯಕ್ಷ ರಾಜೇಗೌಡ, ಸದಸ್ಯರಾದ ನರಸಿಂಹಮೂರ್ತಿ, ಸನತ್‌ಕುಮಾರ್, ಸಾವಿತ್ರಮ್ಮ, ಶಂಭುಲಿಂಗಯ್ಯ, ನರೇಗಾ ಇಂಜಿನಿಯರ್ ಶಿವರಾಜು, ರೇಷ್ಮೆ ಕೃಷಿ, ತೋಟಗಾರಿಕೆ, ಅರಣ್ಯ ಇಲಾಖೆ, ಅಂಗನವಾಡಿ ಅಧಿಕಾರಿ ವರ್ಗದವರು ಹಾಜರಿದ್ದರು. ☯



ನರೇಗಾ ಯೋಜನೆಯ ವರದಿ ಮಂಡಿಸುತ್ತಿರುವ ಕಮಲಮ್ಮ


ಮಾಜಿ ಉಪಾಧ್ಯಕ್ಷ ರಾಜೇಗೌಡ ಆರೋಪಿಸುತ್ತಿರುವುದು


ಬಿಲ್ ಕಲೆಕ್ಟರ್ ಲೋಕೇಶ್‌ನನ್ನ ತರಾಟೆಗೆ ತೆಗೆದುಕೊಂಡಿರುವ ಜಯಮ್ಮ

# ಡಿ.ಕೆ. ಸುರೇಶ್ ತಂಗಿ ಎಂದೇಳಿ 14 ಕೆಜಿ ಬಂಗಾರಕ್ಕೆ ಪಂಗನಾಮ ಹಾಕಿದ ಐಶ್ವರ್ಯಾ ಗೌಡ!


ಡಿ.ಕೆ. ಶಿವಕುಮಾರ್ ಅವರ ಸಹೋದರ ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ತಂಗಿ ಎಂದು ಹೇಳಿಕೊಂಡ ಐಶ್ವರ್ಯಾ ಗೌಡ, 14 ಕೆಜಿಗೂ ಹೆಚ್ಚು ಚಿನ್ನಾಭರಣಗಳನ್ನು ಪಡೆದು ವಂಚಿಸಿದ್ದಾಳೆ ಎಂಬ ಆರೋಪ ಕೇಳಿಬಂದಿದೆ. ರಾಜಕಾರಣಿಗಳು ಮತ್ತು ಉದ್ಯಮಿಗಳ ಪರಿಚಯವನ್ನು ಬಳಸಿಕೊಂಡು ಜ್ಯುವೆಲ್ಲರಿ ಅಂಗಡಿ ಮಾಲೀಕರನ್ನು ವಂಚಿಸಿದ್ದಾಳೆ ಎನ್ನಲಾಗಿದೆ.


ಆರೋಪಿ ಐಶ್ವರ್ಯಾ ಗೌಡ

ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಹೋದರ ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ತಂಗಿ ಎಂದು ಹೇಳಿಕೊಂಡಿರುವ ಐಶ್ವರ್ಯಾ ಗೌಡ ಬರೋಬ್ಬರಿ 14 ಕೆಜಿ 660 ಗ್ರಾಮ ಬಂಗಾರದ ಆಭರಣಗಳನ್ನು ಪಡೆದು ಹಣ ವಂಚನೆ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಐಶ್ವರ್ಯ ಗೌಡ ಎಂಬ ಮಹಿಳೆ ವಾರಾಹಿ ಜ್ಯೂವೆಲ್ಲರಿ ಶಾಪ್ ಮಾಲೀಕರಾದ ವನಿತಾ ಅವರ ಜೊತೆ ಸ್ನೇಹ ಸಂಪಾದನೆ ಮಾಡುತ್ತಾರೆ. ವಿವಿಧ ರಾಜಕೀಯ ಕಾರ್ಯಕ್ರಮಗಳಲ್ಲಿ ದೊಡ್ಡ ದೊಡ್ಡ ರಾಜಕಾರಣಿಗಳ ಜೊತೆಗೆ ಕಾಣಿಸಿಕೊಳ್ಳುತ್ತಿದ್ದ ಈ ಐಶ್ವರ್ಯಾ ಗೌಡ ತಾನು ಸಂಸದ ಡಿ.ಕೆ. ಸುರೇಶ್ ಅವರ ತಂಗಿ ಎಂದು ಹೇಳಿಕೊಂಡಿದ್ದಾರೆ. ವನಿತಾ ಅವರ ಜ್ಯೂವೆಲ್ಲರಿ ಮಳಿಗೆಗೆ ತೆರಳಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಖರೀದಿ ಮಾಡುತ್ತಾರೆ. ಇದಾದ ನಂತರ, ತನಗೆ ದೊಡ್ಡ ದೊಡ್ಡ ರಾಜಕಾರಣಿಗಳು, ಗುತ್ತಿಗೆದಾರರು, ಉದ್ಯಮಿಗಳು ಹಾಗೂ ಶ್ರೀಮಂತರು ಪರಿಚಯವಿದ್ದು, ನಿಮ್ಮ ಚಿನ್ನದ ಅಂಗಡಿಯ ಬ್ಯೂಸಿನೆಸ್ ಹೆಚ್ಚಳ ಮಾಡುವುದಾಗಿ ಭರವಸೆ ನೀಡುತ್ತಾಳೆ.

ಇದಾದ ನಂತರ ಇಬ್ಬರ ಸ್ನೇಹ ಗಾಢವಾಗಿ ಬೆಳೆದಿದ್ದು, ಸಿನಿಮಾ ನಟರು ಹಾಗೂ ರಾಜಕಾರಣಿಗಳ ಪರಿಚಯದ ನೆಪ ಹೇಳಿಕೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಆಗ ಮೈಮೇಲೆ ಕೋಟ್ಯಂತರ ರೂ. ಮೌಲ್ಯದ ಚಿನ್ನಾಭರಣಗಳನ್ನು ಹಾಕಿಕೊಂಡು ಶ್ರೀಮಂತೆ ಎಂಬಂತೆ ಪೋಸ್ ಕೊಟ್ಟಿದ್ದಾರೆ. ಇದೆಲ್ಲವನ್ನು ಜ್ಯೂವೆಲ್ಲರಿ ಅಂಗಡಿ ಮಾಲೀಕರಾದ ವನಿತಾ ಅವರಿಗೆ ತೋರಿಸಿ ಅವರಿಂದ ಚಿನ್ನವನ್ನು ಖರೀದಿ ಮಾಡಿ ಅದನ್ನು ಮಾರಾಟ ಮಾಡಿದ್ದಾಗಿ ಹೇಳಿಕೊಂಡು ಅದಕ್ಕೆ ಹಣವನ್ನು ಪಾವತಿ ಮಾಡಿದ್ದಾರೆ. ಆರಂಭದಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತಿತ್ತು.


ಮಾಜಿ ಸಂಸದ ಡಿ.ಕೆ. ಸುರೇಶ್

ಆರಂಭದಲ್ಲಿ ವಿಶ್ವಾಸ ಗಳಿಸಿಕೊಂಡ ಐಶ್ವರ್ಯಾ ಗೌಡ ನಂತರ ಕೆಜಿಗಟ್ಟಲೆ ಬಂಗಾರ ಹಾಗೂ ಚಿನ್ನಾಭರಣಗಳನ್ನು ಪಡೆದು ಅದನ್ನು ರಾಜಕಾರಣಿಗಳು ಹಾಗೂ ಉದ್ಯಮಿಗಳಿಗೆ ಮಾರಾಟ ಮಾಡಿ ಅವರು ಹಣ ಕೊಡುವುದು ತಡವಾಗುತ್ತಿದೆ ಎಂದು ಸಬೂಬು ಹೇಳಿದ್ದಾರೆ. ಇದು ಪದೇ ಪದೇ ರಿಪೀಟ್ ಆಗುತ್ತದೆ. ಮೊದಲಿಗೆ ಸರಿಯಾಗಿ ಹಣ ಪಾವತಿ ಮಾಡಿ, ನಂತರ ನಿಧಾನವಾಗಿ ಒಡವೆ ಖರೀದಿ ಮಾಡಿ, ಹಣ ಕೊಡುವುದನ್ನು ಡಿಲೇ ಮಾಡಲಾಗುತ್ತದೆ.

ಹಣ ಕೇಳಿದಾಗಲೆಲ್ಲಾ ಕೆಲವು ಬಿಲ್‌ಗಳು ಬರುವುದು ಬಾಕಿ ಇದೆ. ಬಿಲ್ ಬಂದ ಕೂಡಲೇ ಹಣ ನೀಡುವುದಾಗಿ ಐಶ್ವರ್ಯ ಗೌಡ ಭರವಸೆ ಕೊಡುತ್ತಾಳೆ. ಹಣ ನೀಡುವಂತೆ ಒತ್ತಾಯ ಮಾಡಿದಾಗ, ನಿಮಗೆ ನಂಬಿಕೆ ಇಲ್ಲವೇ? ಸಂಸದ ಡಿ.ಕೆ. ಸುರೇಶ್ ಅವರಿಂದಲೇ ಹೇಳಿಸ್ತೀನಿ ಅಂತಾ ಹೇಳಿ ಮೊಬೈಲ್ ಕರೆ ಮಾಡುತ್ತಿದ್ದರು. ಇನ್ನು ಮೊಬೈಲ್‌ನಲ್ಲಿ ಅತ್ತ ಕಡೆಯಿಂದ ಡಿ.ಕೆ. ಸುರೇಶ್ ಅವರ ಧ್ವನಿಯಲ್ಲಿ ನಿಮ್ಮ ಹಣ ಎಲ್ಲೂ ಹೋಗಲ್ಲ. ಚುನಾವಣೆ ಮುಗಿಯುವವರೆಗೂ ಕಾಯಿರಿ. ನಿಮ್ಮ ಹಣಕ್ಕೆ ನಾನು ಗ್ಯಾರಂಟಿ ಎಂದು ಭರವಸೆ ನೀಡುತ್ತಾರೆ.

ಇದಾದ ನಂತರ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಬಳಿ ವನಿತಾ ಅವರನ್ನು ಖುದ್ದಾಗಿ ಕರೆದುಕೊಂಡು ಹೋಗಿದ್ದ ಐಶ್ವರ್ಯಾ ಗೌಡ, ಅಲ್ಲಿ ಪರಿಚಯ ಮಾಡಿಸಿ ಫೋಟೋ ತೆಗೆಸಿಕೊಂಡು ಬಂದಿದ್ದಾರೆ. ಇತ್ತೀಚಿಗೆ ಬೇರೊಂದು ಪ್ರಕರಣದಲ್ಲಿ ಐಶ್ವರ್ಯ ಗೌಡ ಮೇಲೆ ವಂಚನೆ ಕೇಸ್ ದಾಖಲಾಗಿರುತ್ತದೆ. ಆಗ ಐಶ್ವರ್ಯಾ ಮೇಲೆ ಅನುಮಾನಗೊಂಡ ಗೋಲ್ಡ್ ಶಾಪ್ ಮಾಲೀಕರಾದ ವನಿತಾ ಅವರು ಈ ವಿಚಾರದ ಬಗ್ಗೆ ಡಿ.ಕೆ. ಸುರೇಶ್ ಅವರನ್ನು ಸಂಪರ್ಕ ಮಾಡಿ ನಿಮ್ಮ ದನಿಯಲ್ಲಿ ಮಾತಾಡಿ ಭರವಸೆ ನೀಡಿದ್ದಾಗಿ ಕೇಳಿದರೆ, ನಾನು ಮಾತನಾಡಿಲ್ಲ, ನಿಮಗೆ ಯಾರೋ ನನ್ನ ಧ್ವನಿಯಲ್ಲಿ ಮಾತನಾಡಿ ಮೋಸ ಮಾಡಿದ್ದಾರೆ ಎಂದು ಹೇಳಿದ್ದಾರಂತೆ. ಜೊತೆಗೆ, ನಿಮಗೆ ಮೋಸ ಮಾಡಿದ ಮಹಿಳೆಗೂ ನಮಗೂ ಯಾವ ಸಂಬಂಧವೂ ಇಲ್ಲ, ನೀವು ಕಾನೂನು ಕ್ರಮ ತೆಗೆದುಕೊಳ್ಳಿ ಎಂದು ಡಿ.ಕೆ. ಸುರೇಶ್ ಹೇಳಿದ್ದಾರೆ. ನಂತರ, ತಾವು ಕೂಡಾ ಮೋಸ ಹೋಗಿರುವುದನ್ನು ಅರಿತುಕೊಂಡ ವನಿತಾ ಚಂದ್ರಾ ಲೇಔಟ್ ಠಾಣೆಯಲ್ಲಿ ದೂರು ನೀಡಿದ್ದು, ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ☯

6 ☞

ಆ ಕ್ಷಣ ಬೆಚ್ಚಿಬಿದ್ದರು. ಎದುರಿಗೆ ಪೊಲೀಸ್ ಅಧಿಕಾರಿ ಯೂನಿಫಾರಂ ಧರಿಸಿ, ಲಾಠಿ ಹಿಡಿದು ನಿಂತಿದ್ದಾನೆ.

ಈಶ್ವರ್‌ಗೆ ಭಯವಾಯಿತು. ಮುಂದೇನು ಗತಿ? ಕಾಲ್‌ಗರ್ಲ್ ಇರೋದು ಗೊತ್ತಾದರೆ ಬೇರೊಂದು ರೀತಿಯ ಸಮಸ್ಯೆ ಎದುರಾಗುತ್ತದೆ. ಈಗ ಏನು ಮಾಡಲಿ?

ಪೊಲೀಸ್ ಅಧಿಕಾರಿ ಗಡುಸಾಗಿ ''ಮನೇಲಿ ಬೇರೆ ಯಾರಾದರೂ ಇದ್ದಾರ? ಎಂದು ಕೇಳಿದನು.

ಅವನು ತಡವರಿಸಿದನು.

''ಇಲ್ಲ... ಇಲ್ಲಸಾರ್.''

''ನಾನು ಬಡಾವಣೆಯಲ್ಲಿ ಯಾವುದೋ ಕೇಸಿನ ತನಿಖೆಗಾಗಿ ಬಂದಿದ್ದೆ. ಆಗ ಆ ದೃಶ್ಯ ಕಂಡಿತು.''

ಅವನು ಗಾಬರಿಯಿಂದ ''ಯಾವ ದೃಶ್ಯ ಸಾರ್?'' ಎಂದು ಕೇಳಿದನು.

''ನಿಮ್ಮಮನೆಕಾಂಪೌಂಡ್ ಆವರಣದಗಲ್ಲಿಯಾರೋ ಅನುಮಾನಾಸ್ಪದವಾಗಿ ತಿರುಗುತ್ತಿದ್ದರು. ನಾನು ಅದರ ಫೋಟೋ ತೆಗೆದೆ'' ಎಂದು ಹೇಳಿ ಮೊಬೈಲ್ ಆನ್ ಮಾಡಿ ಫೋಟೋ ತೋರಿಸಿದನು. ದೃಶ್ಯ ಹೀಗಿದೆ.

ಬ್ಲಾಕ್ ಪ್ಯಾಂಟ್, ಜರ್ಕಿನ್, ಕೂಲಿಂಗ್ ಗ್ಲಾಸ್, ಅಮೇರಿಕನ್ ಸ್ಟೈಲ್ ಮಂಕಿ ಕ್ಯಾಂಪ್ ಹಾಕಿದ್ದ ವ್ಯಕ್ತಿಯ ಫೋಟೋ ನೋಡುತ್ತಿದ್ದಾನೆ.

ಪೊಲೀಸ್ ಅಧಿಕಾರಿ ''ಈ ರೌಡಿ ನಿಮಗೆ ತೊಂದರೆ ಮಾಡಲು ಅಥವಾ ಕಳ್ಳತನ ಮಾಡಲು ಹೊಂಚು ಹಾಕುತ್ತಿದ್ದ ಅಂತ ಕಾಣುತ್ತೆ. ಅವನು ಈ ಮನೆ ಒಳಗೆ ಬಂದಿದ್ದಾನ?''

''ಸಾರ್... ಇಲ್ಲಿಗೆ ಯಾರೂ ಬಂದಿಲ್ಲ. ನಾನು ಫ್ರಂಟ್ ಡೋರ್ ಲಾಕ್ ಮಾಡಿದ್ದೆ'' ಎನ್ನುತ್ತಿರುವಾಗಲೇ, ಇವನು ಹೊರಗೆ ಹೋಗಿ ಬಂದ ಮೇಲೆ ಬ್ಯಾಕ್ ಡೋರ್ ಓಪನ್ ಆಗಿದ್ದು ನೆನಪಿಗೆ ಬಂದಿತು. ಆದರೆ ಇದನ್ನು ಹೇಳಲಿಲ್ಲ.

''ಇಲ್ಲಿಗೆ ಯಾರೂ ಬಂದಿಲ್ಲಸಾರ್.''

ಪೊಲೀಸ್ ಅಧಿಕಾರಿ ಎಲ್ಲಾ ಕಡೆ ಸೂಕ್ಷ್ಮವಾಗಿ ನೋಡುತ್ತಾ ''ಬೀ ಕೇರ್‌ಫುಲ್ ಮಿಸ್ಟರ್. ನಗರದಲ್ಲಿ ಕ್ರೈಂ ಚಟುವಟಿಕೆಗಳು ತುಂಬಾ ಬುದ್ಧಿವಂತಿಕೆಯಿಂದ ಮತ್ತು ಊಹೆ ಮಾಡಿರದಿದ್ದ ರೀತಿ ನಡೆಯುತ್ತಿದೆ. ಓಕೆ ಏನಾದರೂ ತೊಂದರೆ ಉಂಟಾದರೆ ನನಗೆ ಫೋನ್ ಮಾಡಿ'' ಎಂದು ಹೇಳಿ ಫೋನ್ ನಂಬರ್ ಕೊಟ್ಟು ಅಲ್ಲಿಂದ ಹೊರಟನು.

''ಎಕ್ಸ್‌ಕ್ಯೂಜ್ ಮೀ ಸಾರ್.''

ಪೊಲೀಸ್ ಅಧಿಕಾರಿ ಹಿಂತಿರುಗಿದನು.

''ಸಾರ್... ನೀವು ತೆಗೆದಿದ್ದ ಆ ರೌಡಿಯ ಫೋಟೋ ಕಳಿಸುತ್ತೀರ. ನಾನು ವಾಚ್ ಮಾಡುತ್ತಿರುತ್ತೀನಿ. ಈ ಬಡಾವಣೇಲಿ ಎಲ್ಲಾದರೂ ಕಂಡು ಬಂದರೆ ನಿಮಗೆ ತಿಳಿಸುತ್ತೇನೆ'' ಎಂದಾಗ, ಈಶ್ವರನ ಮೊಬೈಲ್ ನಂಬರ್ ಪಡೆದು ಆ ಫೋಟೋ ಕಳಿಸಿದನು.

ಪೊಲೀಸ್ ಅಧಿಕಾರಿ ಹೋಗಿದ್ದಾನೆ.

ಅವನಿಗೆತುಂಬಾ ಬೇಜಾರಾಗಿದೆ. ಜೊತೆಗೆ ಈಗ ಟೆನ್ಷನ್ ಶುರುವಾಗಿದೆ.

ಮೊಬೈಲ್ ಆನ್ ಮಾಡಿದನು. ರೌಡಿಯ ಫೋಟೋ ಕಾಣುತ್ತಿದೆ. ಎಚ್ಚರಿಕೆಯಿಂದ ನೋಡಿದನು. ಅವನಿಗೆ ಅನಿಸಿದ್ದೇನು? ಇದೇನಿದು ರೌಡಿಯ ಲಕ್ಷಣಗಳು ಕಾಣುತ್ತಿಲ್ಲವಲ್ಲ. ರೌಡಿಸಂ ಮಾಡುವವರು ಇಷ್ಟೊಂದು ಚೆನ್ನಾಗಿರುತ್ತಾರ?

ಫೋನ್‌ಕಾಲ್ ಬಂದಿತು. ರಾತ್ರಿ ಒಂಭತ್ತೂವರೆ ಯಾಗಿದೆ. ಹೆಂಡತಿ ಫೋನ್ ಮಾಡಿದ್ದಾಳೆ.

''ರೀ... ಊಟ ಮಾಡಿದ್ರಾ ? ಸ್ಪೆಷಲ್ ಐಟಂಗಳು ಚೆನ್ನಾಗಿದ್ಯ ?''

ಅವನು ''ಇಲ್ಲ... ಇನ್ನೂ ಊಟ ಮಾಡಿಲ್ಲ. ಈಗ ಮಾಡ್ತೀನಿ.''

''ಈಗ ಗಂಟೆ ಎಷ್ಟು ಗೊತ್ತಾ ? ಇನ್ನೂ ಯಾಕೆ ಊಟ ಮಾಡಿಲ್ಲ?''

''ಅದು... ಅದು... ಹಾಂ... ಆಫೀಸ್ ಕೆಲಸ ತುರ್ತಾಗಿ ಮಾಡಬೇಕಿತ್ತು . ಸಿಸ್ಟಮ್ ಮುಂದೆ ಕುಳಿತಿದ್ದೆ ಈಗ ಮಾಡ್ತೀನಿ.

ಅವಳು ಗಂಭೀರವಾಗಿ ''ಮೊದಲು ಊಟ ಮಾಡಿ ಟೇಸ್ಟ್ ಹ್ಯಾಗಿದೆ ಅಂತ ಫೋನ್ ಮಾಡಿ ಹೇಳ್ಬೇಕು'' ಎಂದಳು.

''ನೀನು ಎಲ್ಲಿದ್ದೀಯ?''

ಅವಳಿಂದ ಕೂಡಲೇ ಉತ್ತರ ಬರಲಿಲ್ಲ.

''ಹಲೋ... ಚಂದ್ರಿಕ...''

ಚಂದ್ರಿಕ ಕೋಪದಿಂದ ''ತವರುಮನೆಗೆ ಬಂದಿರುವ ನಾನು ಇನ್ನೆಲ್ಲಿ ಇರಲು ಸಾಧ್ಯ ? ಬೇಗ ಊಟ ಮಾಡಿ. ಎಲ್ಲಾ ಐಟಂಗಳನ್ನು ತಿಂದು ಕಾಲಿ ಮಾಡಿ. ಅರ್ಧ ಗಂಟೆ ಕಳೆದ ಮೇಲೆ ನಾನೇ ಫೋನ್ ಮಾಡ್ತೀನಿ.''

ಫೋನ್ ಲಿಂಕ್ ಕಟ್ ಮಾಡಲುವ ಮೊದಲು ಚಂದ್ರಿಕ ''ಅದೇನು ಮ್ಯೂಸಿಕ್ ಸೌಂಡ್ ಕೇಳುತ್ತಿದೆ'' ಎಂದಳು.

''ಒಬ್ಬನೇ ಇರಲು ಬೇಜಾರಾಗಿದ್ದರಿಂದ ಮ್ಯೂಸಿಕ್ ಹಾಕಿಕೊಂಡಿದ್ದೆ.''

●●●

ಅವನೀಗ ಕಾಲ್‌ಗರ್ಲ್ ಉಳಿದುಕೊಂಡಿರುವ ರೂಮಿಗೆ ಬಂದನು.

ಡೋರ್ ಲಾಕ್ ಆಗಿದೆ. ಮೃದುವಾಗಿ ಬಾಗಿಲು ಬಡಿದನು. ಅವಳಿಂದ ರಿಯಾಕ್ಷನ್ ಇಲ್ಲ. ಪಕ್ಕದ ರೂಮಿನಲ್ಲಿ ಹೆಂಡತಿಯ ತಂಗಿ ಇದ್ದಾಳೆ. ಅವಳಿಗೆ ಕೇಳಿಸಿದಂತೆ ಮತ್ತೊಮ್ಮೆ ಬಾಗಿಲು ಬಡಿದನು. ಆಗಲೂ ರಿಯಾಕ್ಷನ್ ಬರಲಿಲ್ಲ. ಏನೋ ಅನುಮಾನ ಬಂದು ಕಿಟಕಿಯ ಮೂಲಕ ಬಗ್ಗಿ ನೋಡಿದನು. ಅವಳು ಮಂಚದ ಕೆಳಗೆ ಬೋರಲಾಗಿ ಬಿದ್ದಿದ್ದಾಳೆ! ವಿಪರೀತ ಕುಡಿದು ಕಂಟ್ರೋಲ್ ಕಳೆದುಕೊಂಡು ಬಿದ್ದಿದ್ದಾಳೆ. ಮರದ ಕೊರಡಿನ ರೀತಿ ಬಿದ್ದಿದ್ದರೆ ಎಂಜಾಯ್ ಮಾಡಲು ಹೇಗೆ ಸಾಧ್ಯ ? ಛೇ... ಛೇ... ಮೊದಲೇ ಪೇಮೆಂಟ್ ಮಾಡಬಾರದಿತ್ತು ಎಂದುಕೊಂಡನು.

ಆಲೋಚನೆ ಬಂದಿತು. ಕಿಟಕಿಗೂ ಬಾಗಿಲಿಗೂ ಅಂತರ ತುಂಬಾ ಕಡಿಮೆ ಇರೋದ್ರಿಂದ, ಕೈ ತೂರಿಸಿ ಲಾಕ್ ಎಳೆದನು., ಡೋರ್ ತೆರೆದುಕೊಂಡಿತು. ಆ ದೃಶ್ಯ ಕಂಡಿತು. ನೆಲದ ತುಂಬಾ ವಿಸ್ಕಿ, ಆಹಾರ ಪದಾರ್ಥಗಳು ಮತ್ತು ಇನ್ನಿತರ ವಸ್ತುಗಳು ಹರಡಿಕೊಂಡು ಬಿದ್ದಿವೆ. ಕೋಪದಿಂದಲೇ ಅವಳ ಹತ್ತಿರ ಬಂದು ಭುಜ ಹಿಡಿದು ಅಲ್ಲಾಡಿಸಿದನು. ನಾಲ್ಕಾರು ಸಲ ಹೊರಳಾಡಿಸಿದರೂ ಸಹ ಅವಳು ಎಚ್ಚರಗೊಳ್ಳಲಿಲ್ಲ.

ಏನೋ ಅನುಮಾನ ಬರುತ್ತಿದೆ. ಮುಖ ನೋಡುತ್ತಿದ್ದಾನೆ. ಆ ಕ್ಷಣ ಬೆಚ್ಚಿ ಬಿದ್ದನು. ನೀಲಿಛಾಯೆ ಆವರಿಸಿದೆ. ಗಾಬರಿ, ಭಯದಿಂದಲೇ ಈಗ ಅವಳ ಉಸಿರಾಟ ಮತ್ತು ಎದೆಬಡಿತ ಪರೀಕ್ಷೆ ಮಾಡಿದನು. ಕಾಲ್‌ಗರ್ಲ್ ಸತ್ತಿದ್ದಾಳೆ. ಆ ಕ್ಷಣ ನಡುಗಿಸಿದನು. ಶರೀರ ಬೆವಲಾರಂಭಿಸಿತು. ಕಾಲ್‌ಗರ್ಲ್ ನನ್ನ ಮನೇಲಿ ಕೊಲೆಯಾಗಿದ್ದಾಳೆ. ಇದೇನಾದರೂ ಬಹಿರಂಗವಾದರೆ ಜೀವನ ಪೂರ್ತಿ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ. ಏನು ಮಾಡಲಿ?

ಪಕ್ಕದ ರೂಮಿನಲ್ಲಿ ಹೆಂಡತಿಯ ತಂಗಿ ಇದ್ದಾಳೆ. ಅವಳು ಎಚ್ಚರಗೊಳ್ಳುವುದರಲ್ಲಿ ಡೆಡ್‌ಬಾಡಿನಾ ಇಲ್ಲಿಂದ ಸಾಗಿಸಬೇಕು. ಬ್ರೋಕರ್‌ಗೆ ಫೋನ್ ಮಾಡಬೇಕು. ನೀನು ಕಳಿಸಿದ್ದ ಕಾಲ್ ಗರ್ಲ್ ನನ್ನ ಜೊತೆ ಜಗಳ ಆಡಿಕೊಂಡು ಆಗಲೇ ಹೊರಟು ಹೋದಳು ಅಂತ ಹೇಳಬೇಕು ಎಂದುಕೊಂಡಿದ್ದಾನೆ. ಸಮಸ್ಯೆ ಎದುರಾಯಿತು. ಡೆಡ್‌ಬಾಡಿನ ಹೇಗೆ ಸಾಗಿಸಲಿ? ಮನೆಯಿಂದ ಹೊರಗೆ ಬಂದು, ಕಾಂಪೌಂಡ್ ಒಳ ಆವರಣದಲ್ಲಿ ನಿಲ್ಲಿಸಿರುವ ಕಾರಿನ ಡೋರ್ ಓಪನ್ ಮಾಡಿದನು. ಡಿಕ್ಕಿ ಬಾಗಿಲು ತೆಗೆದನು. ಗೇಟಿನ ಹತ್ತಿರ ಬಂದು ಈಗ ರಸ್ತೆಯ ಉದ್ದಗಲಕ್ಕೂ ನೋಡಿದನು. ರಸ್ತೆ ನಿರ್ಜನವಾಗಿದೆ. ಬೇಗ ಡೆಡ್‌ಬಾಡಿ ಸಾಗಿಸಬೇಕು ಎಂದುಕೊಂಡು ಮನೆಯೊಳಗೆ ಬಂದನು. ಕಾಲ್‌ಗರ್ಲ್ ಡೆಡ್‌ಬಾಡಿಯನ್ನು ಗೋಣಿಚೀಲಗಳಲ್ಲಿ ಸುತ್ತಿ, ದಪ್ಪಸುತ್ತಲಿ ದಾರದಿಂದ ಕಟ್ಟಿದ ನಂತರ ಎತ್ತಿಕೊಂಡು ಬಂದು ಡಿಕ್ಕಿಯಲ್ಲಿ ಉರುಳಿಸಿ ಡಿಕ್ಕಿ ಕ್ಲೋಸ್ ಮಾಡಿದನು.

ಪುನಹ ಮನೆಯೊಳಗೆ ಬಂದನು. ಕಾಲ್‌ಗರ್ಲ್ ಹಾಕಿಕೊಂಡು ಬಂದಿದ್ದ ಹೈಹೀಲ್ಡ್ ಚಪ್ಪಲಿಗಳು, ವ್ಯಾನಿಟಿ ಬ್ಯಾಗು ಮತ್ತು ಮೊಬೈಲ್ ಫೋನ್‌ನ ಸಿಮ್ ತೆಗೆದನು ಮತ್ತು ಅವಳು ಉಳಿದುಕೊಂಡಿದ್ದ ರೂಮಿನಲ್ಲಿದ್ದ ಎಲ್ಲಾ ವಸ್ತುಗಳನ್ನು ತೆಗೆದು, ಗುರುತಿಸಲಾಗದ ರೀತಿ ಇರುವ ಹಳೆಯ ಚೀಲದಲ್ಲಿ ತುಂಬಿ ಗಂಟು ಕಟ್ಟಿದನು. ಮತ್ತೊಮ್ಮೆ ನೋಡಿದನು.

ಅವಳು ಇಲ್ಲಿಗೆ ಬಂದಿದ್ದಳು ಎಂಬುದಕ್ಕೆ ಯಾವ ಸುಳಿವೂ ಇರಲಿಲ್ಲ.

ಫ್ರಂಟ್ ಹಾಲ್‌ನ ಮೂಲೆಯಲ್ಲಿ ಇಟ್ಟಿದ್ದ ಪೆಟ್ರೋಲ್ ಕ್ಯಾನ್ ತೆಗೆದು ಕಾರಲ್ಲಿ ಇಟ್ಟನು. ಪದ್ಮಿನಿ ಎಲ್ಲಿದ್ದಾಳೆ? ಅವಳು ವಿಪರೀತ ಕುಡಿದು ನಿದ್ದೆ ಮಾಡುತ್ತಿದ್ದಾಳೆ ಎಂದುಕೊಂಡು ಡೋರ್‌ಲಾಕ್ ಮಾಡಿ ಅಲ್ಲಿಂದ ಹೊರಗೆ ಬಂದು ಕಾರನ್ನು ಸ್ಟಾರ್ಟ್ ಮಾಡಿದನು. ಅವನು ಗಮನಿಸಿರಲಿಲ್ಲ! ಅವನ ಈ ಎಲ್ಲಾ ಚಟುವಟಿಕೆಗಳನ್ನು ಒಬ್ಬ ವ್ಯಕ್ತಿ ಗಮನಿಸಿದ್ದನು. ವೀಡಿಯೋ ಕವರೇಜ್ ಮಾಡಲಾಗಿದೆ.

●●●

ನಗರದ ಹೊರವಲಯದ ಗ್ರಾಮಾಂತರ ಪ್ರದೇಶದ ನಿರ್ಜನ ರಸ್ತೆಯಲ್ಲಿ ಕಾರನ್ನು ನಿಲ್ಲಿಸಿದನು. ನಿರ್ಜನ ರಸ್ತೆ. ವಿದ್ಯುತ್ ಕಂಬಳಿಂದ ಬೆಳಕು ಬರುತ್ತಿದೆ. ಡೈರಕ್ಷನ್ ಬದಲಿಸಿ ಕಾರಿನ ಹೆಡ್‌ಲೈಟ್ ಅನ್ನು ಬೆಳಗಿಸಿದನು. ಕಾಲ್‌ಗರ್ಲ್ ಡೆಡ್‌ಬಾಡಿ ಮತ್ತು ಅವಳಿಗೆ ಸಂಬಂಧಪಟ್ಟಿದ್ದ ವಸ್ತುಗಳ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹತ್ತಿಸಿದನು.

ಬೆಂಕಿ ಪ್ರಜ್ವಲಿಸುತ್ತಿದೆ. ಹತ್ತು ನಿಮಿಷಗಳಾಯಿತು. ಮತ್ತಷ್ಟು ಪೆಟ್ರೋಲ್ ಸುರಿದು ಅಲ್ಲಿಂದ ಹೊರಟನು. ರಸ್ತೆಯ ತಿರುವಿಗೆ ಬಂದನು. ಉರಿಯುತ್ತಿರುವ ಬೆಂಕಿ ಕಾಣುತ್ತಿದೆ. ಈ ಸ್ಥಳದಲ್ಲಿ ಯ.ಆರಾದರೂ ನನ್ನನ್ನು ನೋಡಿದ್ದಾರ ಎಂದು ಪರೀಕ್ಷೆ ಮಾಡಿದನು. ಕಾರು ವೇಗವಾಗಿ ಹೋಗುತ್ತಿದೆ. ಸಿಡಿದಾದ ನಿಟ್ಟುಸಿರುಬಿಟ್ಟನು.

●●●

ರಾತ್ರಿ ಹನ್ನೆರಡು ಗಂಟೆ. ಡೋರ್ ಲಾಕ್ ಓಪನ್ ಮಾಡಿ ಒಳಗೆ ಬಂದವನೇ ಬೆಚ್ಚಿಬಿದ್ದನು. ಬ್ಯಾಕ್ ಡೋರ್ ಓಪನ್ ಆಗಿದೆ. ಈ ರೀತಿ ಆಗಿರೋದು ಎರಡನೆಯ ಸಲ. ಹೊರಗೆ ಹೋಗುವ ಮೊದಲು ಡೋರ್‌ಲಾಕ್ (ಬ್ಯಾಕ್ ಡೋರ್) ಲಾಕ್ ಮಾಡಿದ್ದನು. ಅವನಿಗೆ ಗಾಬರಿಯಾಗಿದೆ. ಯಾರೋ ಕ್ರೈಂ ಗೇಮ್ ಪ್ಲೇ ಮಾಡುತ್ತಿದ್ದಾರೆ ಎಂದುಕೊಂಡು ತಿರುಗಿದನು. ಪದ್ಮಿನಿ ಮಲಗಿದ್ದ ರೂಮಿನ ಡೋರ್ ಸಹ ಓಪನ್ ಆಗಿದೆ.

ಅವನಿಗೆ ಅನಿಸಿದ್ದೇನು? ಪದ್ಮಿನಿಗೆ ಎಚ್ಚರವಾಗಿ ಹೊರಗೆ ಬಂದಿದ್ದಾಳೆ. ನೇಚರ್ ಕಾಲ್‌ಗೆ ಹೋಗಲು ಬ್ಯಾಕ್ ಡೋರ್ ಓಪನ್ ಮಾಡಿದ್ದಾಳ? ಆದರೆ ಈ ಮನೆಯಲ್ಲಿರುವ ಎಲ್ಲಾ ರೂಮುಗಳಲ್ಲಿ ಬಾತ್‌ರೂಮ್, ಟಾಯ್ಲೆಟ್ ಅಟ್ಯಾಚ್ಡ್ ಆಗಿದೆ. ಹಾಂ... ಕುಡಿತದ ಅಮಲಿನಲ್ಲಿದ್ದ ಅವಳು ಇದನ್ನು ಗಮನಿಸದೆ ಹೊರಗೆ ಹೋಗಿದ್ದಾಳ?

ಅವನೀಗ ಹಿತ್ತಲಿನಲ್ಲಿರುವ ಕಾಮನ್ ಟಾಯ್ಲೆಟ್ ಹತ್ತಿರ ಹೋಗಿ ಕೂಗಿದನು.

ರೆಸ್ಪಾನ್ಸ್ ಬರಲಿಲ್ಲ. ನಂತರ ಬಗ್ಗಿ ನೋಡಿದನು. ಪದ್ಮಿನಿ ಇರಲಿಲ್ಲ. ಪುನಹ ಒಳಗೆ ಬಂದು ಡೋರ್ ಲಾಕ್ ಮಾಡಿ ಪದ್ಮಿನಿ ಮಲಗಿದ್ದ ರೂಮಿನ ಹತ್ತಿರ ಬಂದು ಬಗ್ಗಿ ನೋಡಿದನು. ಆ ಕ್ಷಣ ಗಾಬರಿಯಾಯಿತು. ಪದ್ಮಿನಿ ಮಂಚದ ಮೇಲೆ ಅಡ್ಡಾದಿಡ್ಡಿ ಮಲಗಿದ್ದಾಳೆ. ಬೆಡ್‌ಶೀಟ್, ಬೆಡ್‌ಸ್ಪ್ರೇ, ದಿಂಬುಗಳು ನೆಲ ಕಂಡಿವೆ. ಆ ರೂಮಿನಲ್ಲಿರುವ ಟೇಬಲ್ ಮೇಲೆ ವಿಸ್ಕಿ ಬಾಟಲ್, ಗ್ಲಾಸು, ಹಣ್ಣುಗಳು ಮತ್ತು ಹೆಂಡತಿ ಇವನಿಗಾಗಿ ಮಾಡಿದ್ದ ಆಹಾರ ಪದಾರ್ಥಗಳಿವೆ.

ಕಾಲ್‌ಗರ್ಲ್ ಸಹ ಚಂದ್ರಿಕ (ಹೆಂಡತಿ) ಮಾಡಿದ್ದ ಆಹಾರ ಪದಾರ್ಥಗಳಲ್ಲಿ ಕೆಲವನ್ನು ಮಾತ್ರ ತಂದಿದ್ದಳು.

ಆ ದೃಶ್ಯ ಕಂಡಿತು. ಅರ್ಧ ತಿಂದು ಉಳಿದಿರುವ ಸೇಬಿನ ಹಣ್ಣು ನೆಲದ ಮೇಲೆ ಬಿದ್ದಿದೆ. ಭಯ, ಆತಂಕ ಜಾಸ್ತಿಯಾಗಿದೆ. ಎದೆ ಢವಗುಡುತ್ತಿದೆ. ಮಂಚದ ಹತ್ತಿರ ಬಂದು ಮುಖ ನೋಡಿದ ಕ್ಷಣಗಳಲ್ಲಿ ಶಾಕ್ ಆಯಿತು. ಮುಖ ನೀಲಿ ಅಡರಿದೆ. ಎದೆಬಡಿತ, ಉಸಿರಾಟ ಪರೀಕ್ಷೆ ಮಾಡಿದನು. ಪದ್ಮಿನಿ ಈಸ್ ನೋ ಮೋರ್!

ಅವನಿಗೆ ಏನೋ ಅನುಮಾನ ಬರುತ್ತಿದೆ. ಕೆಲವು ಗಂಟೆಗಳ ಹಿಂದೆ, ನೈಟ್ ವಾಚ್ ಮಾಡುತ್ತಿದ್ದ ಪೊಲೀಸ್ ಅಧಿಕಾರಿ ಬಂದು ತಾನು ಕಂಡಿದ್ದನ್ನು ಹೇಳಿದ್ದನು. ಆ ಮನೆಯ ಸುತ್ತಲು ಯಾರೋ ಅನುಮಾನ ಉಂಟಾಗುವ ರೀತಿ ತಿರುಗುತ್ತಿದ್ದರು. ಅವರ ಫೋಟೋ ಸಹ ತೆಗೆದಿದ್ದನು.

ಆ ಫೋಟೋ ಇವನಿಗೆ ಕಳಿಸಿದ್ದನು. ಈಶ್ವರ್ ಈಗ ಮೊಬೈಲ್ ಆನ್ ಮಾಡಿ ಆ ಫೋಟೋ ನೋಡಿದನು.

ಎರಡು ಸಲ ಬ್ಯಾಕ್ ಡೋರ್ ಓಪನ್ ಮಾಡಿರುವ ಈ ಕ್ರಿಮಿನಲ್ ಯಾರು?

ಆ ಕ್ಷಣಗಳಲ್ಲಿ ಗುರುತಾಯಿತು. ಆ ವ್ಯಕ್ತಿ ರೌಡಿ ಅಲ್ಲ...! ಗೆಟಪ್ ಬದಲಾಗಿದೆ. ಆದರೆ ಮುಖದಲ್ಲೇ ಆಗಲಿ, ದೇಹ ರಚನೆಯಲ್ಲೇ ಆಗಲಿ ರೌಡಿಯ ರಫ್ ಕ್ಯಾರೆಕ್ಟರ್‌ನ ಲಕ್ಷಣಗಳಿರಲಿಲ್ಲ. ತೀವ್ರವಾಗಿ ಗಮನಿಸುತ್ತಿದ್ದಾಗ ಕಂಡು ಬಂದಿತ್ತು ಮಾಂಗಲ್ಯದ ಒಂದು ಭಾಗ! ಬಲು ಸುಂದರವಾದ ಕೈ ಬೆರಳುಗಳಿಗೆ ನೈಲ್ ಪಾಲೀಶ್ ಮಾಡಲಾಗಿದೆ. ಕತ್ತಿನ ಬಲಭಾಗದಲ್ಲಿ ಅವರೆಬೇಳೆ ಅಗಲದ ಮಚ್ಚೆ ಇದೆ.

ಅವನು ತತ್ತರಿಸುತ್ತಿದ್ದಾನೆ. ಪೊಲೀಸ್ ಸೈರನ್ ಕೇಳಿಸಿತು. ಆ ಕೂಡಲೇ ಅವನು ಅಲರ್ಟ್ ಆದನು. ಪದ್ಮಿನಿಯ ಡೆಡ್ ಬಾಡಿ ಇರುವ ರೂಮಿನ ಡೋರ್‌ಲಾಕ್ ಮಾಡಿದನು. ಪುನಹ ಬೆಲ್ ಮಾಡಿದರು. ಅವನೀಗ ಹೊರಗೆ ಬಂದು ಫ್ರಂಟ್ ಡೋರ್ ಲಾಕ್ ಓಪನ್ ಮಾಡಿದನು. ಪೊಲೀಸರು ನಿಂತಿದ್ದಾರೆ.

ಕೆಲವು ಗಂಟೆಗಳ ಹಿಂದೆ ಇಲ್ಲಿಗೆ ಬಂದಿದ್ದ ಪೊಲೀಸ್ ಅಧಿಕಾರಿ ಗಡುಸಾಗಿ ''ನಿಮ್ಮನ್ನು ಅರೆಸ್ಟ್ ಮಾಡುತ್ತಿದ್ದೇನೆ. ಎರಡು ಕೊಲೆಗಳ ಆರೋಪದ ಮೇಲೆ ಬಂಧಿಸುತ್ತಿದ್ದೇನೆ'' ಎಂದು ಹೇಳಿ ಎಲ್ಲಾ ರೂಮುಗಳನ್ನು ಚೆಕ್ ಮಾಡಲು ಪಿ.ಸಿ.ಗಳಿಗೆ ಹೇಳಿದನು.

ಪದ್ಮಿನಿಯ ಡೆಡ್‌ಬಾಡಿ ಅಲ್ಲಿದೆ!

ಪೊಲೀಸ್ ಅಧಿಕಾರಿ ತನ್ನ ಮೊಬೈಲಿನಲ್ಲಿರುವ ಫೋಟೋಗಳನ್ನು ತೋರಿಸಿದನು. ಕಾಲ್‌ಗರ್ಲ್ ಫೋಟೋಗಳನ್ನು ತೋರಿಸಿದನು. ಕಾಲ್‌ಗರ್ಲ್ ಮತ್ತು ಪದ್ಮಿನಿಯ ಸಾವಿಗೆ ಸಂಬಂಧ ಪಡುವ ದೃಶ್ಯಗಳಿವೆ...!

ಕಾಲ್‌ಗರ್ಲ್ ಶವ ಸಾಗಿಸುತ್ತಿರುವ ಮತ್ತು ಪೆಟ್ರೋಲ್ ಕ್ಯಾನ್ ಅನ್ನು ಎತ್ತಿಕೊಂಡು ಹೋಗಿ ಕಾರಲ್ಲಿ ಇಡುತ್ತಿರುವ ದೃಶ್ಯಗಳೊಂದಿಗೆ ಪದ್ಮಿನಿಯ ಪ್ರಕರಣ ದೃಶ್ಯಗಳನ್ನು ವೀಡಿಯೋ ಮಾಡಲಾಗಿದೆ.

ಅರೆಸ್ಟ್ ಮಾಡಿ ಎಳೆದುಕೊಂಡು ಹೋಗಿ ಜೀಪಲ್ಲಿ ಕೂರಿಸಿದರು. ಮನೆ ಸೀಜ್ ಮಾಡಲಾಗಿದೆ.

''ಸಾರ್... ನಿಮಗೆ ಫೋಟೋ ಮತ್ತು ವೀಡಿಯೋ ಕ್ಲಿಪ್ ಯಾವ ನಂಬರ್‌ನಿಂದ ಬಂದಿದೆ?''

ಪೊಲೀಸ್ ಅಧಿಕಾರಿ ನಂಬರ್ ಹೇಳಿದನು.

ಶಾಕ್... ಶಾಕ್ ಉಂಟಾಗಿದೆ.

ಹೆಂಡತಿ ಚಂದ್ರಿಕಾಳ ಮೊಬೈಲ್‌ನಿಂದ ಪೊಲೀಸ್ ಅಧಿಕಾರಿಗೆ ಕಳಿಸಲಾಗಿದೆ.

ಆಹಾರ ಪದಾರ್ಥಗಳಲ್ಲಿ ವಿಷ ಬೆರೆಸಲಾಗಿದೆ. ಡ್ರಿಂಕ್ಸ್ ಜೊತೆ ಅದನ್ನು ಸಹ ಸೇರಿಸಿದ್ದರಿಂದ ಸಾವು ಬಂದಿದೆ. ಕಾಲ್ ಗರ್ಲ್ ಇಲ್ಲಿಗೆ ಬಂದಿದ್ದರ ಬಗ್ಗೆ ಬ್ರೋಕರ್‌ನಿಂದ ವಿಷಯ ತಿಳಿಯಿತು. ತನಿಖೆಯ ನಂತರ ಎಫ್‌ಐಆರ್ ಫೈಲ್ ಮಾಡಿ ಕೋರ್ಟ್‌ಗೆ ಹಾಜರುಪಡಿಸಿದರು.


●●●

ನ್ಯಾಯಾಲಯದ ಆವರಣ! ಪೊಲೀಸರ ಜೊತೆ ಪತ್ನಿ ಚಂದ್ರಿಕ ಬರುತ್ತಿದ್ದಾಳೆ. ಅವಳು ಗಂಡನ ಹತ್ತಿರ ಬಂದಾಗ ಪೊಲೀಸರು ಮಾತಾಡಲು ಅವಕಾಶ ನೀಡಿದರು.

ಚಂದ್ರಿಕ ಹೇಳುತ್ತಿದ್ದಾಳೆ. ರತಿ ವರ್ಚಸ್ಸಿನ ಬೆಡಗಿ ಚಂದ್ರಿಕಳ ಸೌಂದರ್ಯದ ಸರಿಯಾದ ಜೋಡಿ ಇವನಾಗಿರಲಿಲ್ಲ. ಬಾಹ್ಯರೂಪದ ಆಕರ್ಷಣೆ ಇರಲಿಲ್ಲ. ಶ್ರೀಮಂತ ಕುಟುಂಬದ ಯುವಕ ಇವಳನ್ನು ಇಷ್ಟಪಟ್ಟಿದ್ದನು. ಆದರೆ ತಾಯಿಯ ಬಲವಂತದ ಕಾರಣದಿಂದ ಈಶ್ವರ್‌ನನ್ನು ಮದುವೆ ಆಗಿದ್ದಳು.

ಗಂಡ ಸಾಯಬೇಕು ಅಥವಾ ಶಾಶ್ವತವಾಗಿ ಜೈಲು ಸೇರಬೇಕು. ಚಂದ್ರಿಕ ಗೆಟಪ್ ಬದಲಿಸಿಕೊಂಡು ಬಂದು ತನ್ನ ಹತ್ತಿರವಿದ್ದ ಡೋರ್‌ಲಾಕ್ ಕೀ ಉಪಯೋಗಿಸಿ ಮನೆಯೊಳಗೆಂದು ಆಹಾರ ಪದಾರ್ಥಗಳಲ್ಲಿ ವಿಷ ಬೆರೆಸಿದ್ದಳು. ಎಲ್ಲಾ ದೃಶ್ಯಗಳ ವೀಡಿಯೋ ಕವರೇಜ್ ಮಾಡಿ ಬೆರೆಸಿದ್ದಳು. ಎಲ್ಲಾ ದೃಶ್ಯಗಳ ವೀಡಿಯೋ ಕವರೇಜ್ ಮಾಡಿ ಪೊಲೀಸರಿಗೆ ಅವಳು ಕಳಿಸಿದ್ದಳು. ಗಂಡನಿಗೆ ಶಿಕ್ಷೆಯಾಗಿದೆ. ಚಂದ್ರಿಕ ಆ ಶ್ರೀಮಂತನನ್ನು ಮದುವೆ ಆಗಿದ್ದಾಳೆ. ☯

# ಹೊನ್ನಾವರ : ಅಣ್ಣನಿಂದಲೇ ತಮ್ಮನ ಕೊಲೆ!



ಕೊಲೆಯಾದ ನಾಗೇಶ

**ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಗುಂಡಬಾಳ ಹೆಬ್ಬೈಲ್‌ನ ಮನೆಯೊಂದರಿಂದ ಕಾಗಾಟ, ಗಲಾಟೆ, ಕಿರುಚಾಟ ಕೇಳಿ ಬರ್ತಿದೆ. ಆಗ ರಾತ್ರಿ ಅಂದಾಜು 8 ಗಂಟೆಯ ಸಮಯವಿರಬಹುದು. ಅಕ್ಕಪಕ್ಕದ ಜನರೆಲ್ಲಾ ಸೇರಿದ್ದಾರೆ. ಮನೆ ಒಳಗೆ ಹೋಗಿ ನೋಡಿದ್ರೆ ಸ್ವಂತ ಅಣ್ಣ ಸುಬ್ರಾಯನೇ ತನ್ನ ತಮ್ಮ ನಾಗೇಶನ ಕೊಲೆ ಮಾಡಿದ್ದಾನೆ. ತಕ್ಷಣ ಅಲ್ಲಿದ್ದವರಲ್ಲಿ ಯಾರೋ ಆಂಬುಲೆನ್ಸ್‌ಗೆ ಫೋನ್ ಮಾಡಿ ಕರಸಿದ್ದಾರೆ. ಹೊನ್ನಾವರ ಪೊಲೀಸರಿಗೂ ಕರೆಹೋಗಿ ಹೊನ್ನಾವರ ಪಿಎಸ್‌ಐ ಮಂಜುನಾಥ ಹಾಗೂ ಸಿಬ್ಬಂದಿಗಳು ಬಂದು ಪರಿಶೀಲಿಸಿ ಅಲ್ಲೇ ತಪ್ಪಿಸಿಕೊಳ್ಳಲು ಯತಿಸಿದ್ದ ಆರೋಪಿ ಸುಬ್ರಾಯನನ್ನು ಬಂಧಿಸಿ, ಶವವನ್ನು ಮರಣೋತ್ತರ ಪರೀಕ್ಷೆಗೆ ಕಳಿಸಿದ್ದಾರೆ. ಹಾಗಾದರೆ ಆಗಿದ್ದೇನು ಹುಟ್ಟಿದಾಗಿನಿಂದ ಜೊತೆಯಲ್ಲೇ ಆಡಿ ಬೆಳೆದಿದ್ದ ತಮ್ಮನನ್ನೇ ಅಣ್ಣ ಕೊಲೆ ಮಾಡೋಕೆ ಕಾರಣವಾದರೂ ಏನು?**

**ಉತ್ತರ ಕನ್ನಡ**
✍ ಸಂತೋಷಕುಮಾರ

**ಹೊ**ನ್ನಾವರ ತಾಲೂಕಿನ ಗೇರುಸೊಪ್ಪಾದ ನಾರಾಯಣ ಮಹಾದೇವ ನಾಯ್ಕ ಇವರಿಗೆ ನಾಲ್ಕು ಜನ ಮಕ್ಕಳು ಹನುಮಂತ, ಮಂಗಲಾ, ಮಮತಾ, ಸಂತೋಷ. ಮೂವರು ಮಕ್ಕಳ ಮದುವೆ ಆಗಿದ್ದು, ಅವರಲ್ಲಿ ಸಂತೋಷ ಮಾತ್ರ ಬೆಂಗಳೂರಲ್ಲಿ ಕೆಲಸಕ್ಕಿದ್ದಾನೆ. ಮಂಗಲಾಗೆ ಕಳೆದ 2014ರಲ್ಲಿ ಹೊನ್ನಾವರ ತಾಲೂಕಿನ ಗುಂಡಬಾಳಹೆಬ್ಬೈಲ್‌ನ ಲಕ್ಷ್ಮಿ ವೆಂಕಟ್ರಮಣ ದೇವಸ್ಥಾನದ ಬಳಿಯ ಹಡೀನ ಬಾಳ ಹೊಳೆ ಹತ್ತಿರದ ಕೋಲ್ಕರ ಹನ್ಮಂತ ನಾಯ್ಕರ ಎರಡನೇಯ ಮಗನಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಮದುವೆ ಆಗಿ 10 ವರ್ಷ ಕಳೆದರೂ ನಾಗೇಶ-ಮಂಗಲಾ ದಂಪತಿಗಳಿಗೆ ಮಕ್ಕಳಾಗಿಲ್ಲ. ನಾಗೇಶ ಮತ್ತು ಮಂಗಲಾ ಕೂಲಿ ಮಾಡಿ ಬದುಕು ಸಾಗಿಸುತ್ತಿದ್ದರು. ನಾಗೇಶನಿಗೊಬ್ಬ ಅಣ್ಣ ಅವನ ಹೆಸರು ಸುಬ್ರಾಯ ಹನ್ಮಂತ ನಾಯ್ಕ (50). ಇವನೂ ಕೂಲಿ ಮಾಡುತ್ತಿದ್ದ. ಸುಬ್ರಾಯನಿಗೂ ಮದುವೆ ಆಗಿ ಒಂದು ಮಗು ಕೂಡಾ ಇತ್ತು. ಆದರೆ ಅದೇನೋ ಏನೋ ಸುಬ್ರಾಯನಿಗೂ ಅವನ ಹೆಂಡ್ತಿ ಗೌರಿಗೂ ಆಗೇ ಬರುತ್ತಿರಲಿಲ್ಲ. ಹಾಗಾಗಿ ಗೌರಿ ತನ್ನ ಮಗೂನಾ ಕರೆದುಕೊಂಡು ಆಗಲೇ ಮನೆ ಬಿಟ್ಟು ಹೋಗಿದ್ದಾಳೆ.

ಮೊದಲೇ ಕುಡಿತದ ಚಟ ಅಂಟಿಸಿಕೊಂಡಿದ್ದ ಸುಬ್ರಾಯ ತನ್ನ ಹೆಂಡ್ತಿ ಮನೆ ಬಿಟ್ಟು ಹೋದ ಮೇಲೆಲೆ ಇನ್ನೂ ಜಾಸ್ತಿ ಕುಡಿಯೋಕೆ ಶುರುಹಚ್ಕೊಂಡಿದ್ದಾನೆ. ಹಗಲಿಡೀ ಕೆಲಸ ಮಾಡಿ ರಾತ್ರಿ ಸರಿಯಾಗಿ ಕುಡಿದು ಬರುತ್ತಿದ್ದ ಸುಬ್ರಾಯ ತನ್ನ ತಮ್ಮನ ಮನೇಲೇ ಊಟ ಮಾಡಿ ಪಕ್ಕದಲ್ಲೇ ಇದ್ದ ತನ್ನ ರೂಮಿಗೆ ಹೋಗಿ ಮಲಗುತ್ತಿದ್ದ. ಈಗ್ಗೆ ವರ್ಷಗಳಿಂದ ನಡೆದುಕೊಂಡು ಬರುತ್ತಿತ್ತು. ಈ ಮಧ್ಯೆ ಅಣ್ಣ-ತಮ್ಮಂದಿರ ಕುಡಿತದ ನಶೆಯಲ್ಲಿ ರಾತ್ರೆ ಜಗಳ ಜಾಸ್ತಿ ಆಗುತ್ತಿತ್ತು. ಹೀಗೆ ಒಂದಿನ ಜಗಳ ಜಾಸ್ತಿ ಆಗಿ ನಾಗೇಶ ಸುಬ್ರಾಯನ ಕಾಲೇ



ಉ.ಕ. ಎಸ್ಪಿ ಎಂ. ನಾರಾಯಣ



ಭಟ್ಕಳ ಎಸ್ಪಿ ಮಹೇಶ್ ನಾಯ್ಕ್

ಮುರಿದಿದ್ದ, ಅಷ್ಟೇ ಅಲ್ಲ, ನಾಗೇಶ ಮತ್ತವನ ಹೆಂಡತಿ ಮಂಗಲಾನೇ ಸುಬ್ರಾಯನ ಸೇವೆ ಮಾಡಿ ಅವನ ಆರೈಕೆ ಮಾಡಿದ್ದರಂತೆ. ಈ ಮಧ್ಯೆ ನಾಗೇಶನಿಗೆ ಮಕ್ಕಳಿಲ್ಲದ್ರಿಂದ ತಮಗಿರೋ ಆಸ್ತಿ 33 ಗುಂಟೆ ತನಗೇ ಬೇಕು ಅಂತಾ ಸುಬ್ರಾಯ ಗಲಾಟೆ ಮಾಡುತ್ತಿದ್ದನಂತೆ. ಆಗಾಗ ಅಣ್ಣ ತಮ್ಮಂದಿರ ಮಧ್ಯೆ ಈ ಆಸ್ತಿಯ ಪಾಲುದಾರಿಕೆ ಬಗ್ಗೆನೂ ದೊಡ್ಡ ಗಲಾಟೆ ಆಗುತ್ತಾ ಇರುತ್ತಿತ್ತು.

ಇದೇ ಸಿಟ್ಟು ಸುಬ್ರಾಯ ಇಟ್ಟುಕೊಂಡು ಕುಡಿದು ಬಂದಾಗ ಗಲಾಟೆ ಮಾಡುತ್ತಿದ್ದ. ಅಲ್ಲದೇ ಅಣ್ಣ ತಮ್ಮಂದಿರಿಗೆ ಸೇರಿದ ತೆಂಗಿನ ಮರಗಳಿಂದ ತೆಂಗಿನಕಾಯಿಗಳನ್ನು ಅಣ್ಣ ತಮ್ಮಂದಿರಿಬ್ಬರೂ ಹಂಚಿಕೊಂಡಿದ್ದಾರೆ. ಆ ದಿನ ಅಂದರೆ 03/12/2024 ಮಂಗಳವಾರ ಎಂದಿನಂತೆ ನಾಗೇಶನ ಹೆಂಡತಿ ಮಂಗಲಾ ತನ್ನ ಗಂಡ ನಾಗೇಶನಿಗೂ ಭಾವ ಸುಬ್ರಾಯನಿಗೂ ರಾತ್ರಿ ಊಟಕ್ಕೆ ಬಡಿಸಿದ್ದಾಳೆ. ಸುಬ್ರಾಯ ಮತ್ತು ನಾಗೇಶ ಊಟ ಮಾಡುತ್ತಾ ಅದೂ ಇದೂ ಮಾತಾಡುತ್ತಾ ಒಂದೇ ಸಮ ನಾಗೇಶ ತನ್ನಣ್ಣ ಸುಬ್ರಾಯನಿಗೆ ಮಾತಲ್ಲೇ ಛೇಡಿಸುತ್ತಿದ್ದಾನೆ. ನಮ್ಮನೇಲಿ ನೀನು ಪುಕ್ಸಟ್ಟೆ ಊಟ ಮಾಡುತ್ತಿದ್ದೀಯಾ. ಇಲ್ಲೇ ನಿನ್ ಊಟ ತಿಂಡಿ, ಎಲ್ಲಾ ನಾವೇ ನೋಡ್ಕೊಳ್ತಿದ್ದೀವಿ ಅದ್ರ ಮೇಲೆ ತೆಗೆದ ತೆಂಗಿನ ಕಾಯಿಗಳನ್ನ ನಮ್ಮ ಮನೆಗೇ



ಮೃತದೇಹದ ಮುಂದೆ ಆರೋಪಿ ಸುಬ್ರಾಯ

ಕೊಡೋದನ್ನಬಿಟ್ಟು ಅದ್ರಲ್ಲೂ ಪಾಲು ಮಾಡ್ಕೋತೀಯಾ... ಆಸ್ತಿ ಬೇರೆ ನಿನ್ನ ಹೆಸ್ರಿಗೆ ಬರ್ಕೊಡ್ಬೇಕಾಂತ ಜಗಳ ಮಾಡ್ತೀಯಾ ಅಂತಾ ನಾಗೇಶ ತನ್ನ ಅಣ್ಣ ಸುಬ್ರಾಯನಿಗೆ ಕಿಚಾಯಿಸಿದ್ದಾರೆ. ಆಗ ಅಣ್ಣ ತಮ್ಮಂದಿರಿಬ್ಬರ ಮಧ್ಯೆ ಗಲಾಟೆ ಶುರುವಾಗಿ ಊಟ ಬಿಟ್ಟು ಇಬ್ಬರೂ ಕೈ-ಕೈ ಮಿಲಾಯಿಸಿದ್ದಾರೆ. ಆ ಜಗಳದಲ್ಲಿ ತಮ್ಮ ನಾಗೇಶ ನೆಲಕ್ಕುರುಳಿದ್ದಾನೆ. ಅದೇ ಸಮಯಕ್ಕೆ ಸುಬ್ರಾಯನಿಗೆ ತಾನು ಅಡಿಕೆ ಕೊಯ್ಯೋ ತೋಟದ ಕೆಲಸಕ್ಕೆ ಉಪಯೋಗಿಸೋ ಹರಿತವಾದ ಉದ್ದ ಚಾಕು ಸಿಕ್ಕಿದೆ.



ಮೃತನ ಪತ್ನಿ ಮಂಗಲಾ

ಅದರಿಂದಾನೇ ಸುಬ್ರಾಯ ತನ್ನ ತಮ್ಮ ನಾಗೇಶನ ಹೊಟ್ಟೆ ಕಣ್ಣಿನ ಹತ್ತಿರ ಎಲ್ಲ ಕಡೆ ಒಟ್ಟೂ ಏಳು ಕಡೆ ಚುಚ್ಚಿದ್ದಾನೆ. ಅಲ್ಲೇ ಒದ್ದಾಡಿ ನಾಗೇಶ ಪ್ರಾಣ ಬಿಟ್ಟಿದ್ದಾನೆ

ಹೊನ್ನಾವರದಂಥ ದೊಡ್ಡ ಊರಲ್ಲಿ ಕಳೆದ ಎರಡು ವರ್ಷಗಳಿಂದ ಸರ್ಕಲ್ ಇನ್ಸ್‌ಪೆಕ್ಟರ್ ಜಾಗನ ಘನವೆತ್ತ ಸರ್ಕಾರ ಖಾಲಿ ಇಟ್ಟಿದ್ದಕ್ಕೆ ಕುಮಟಾ ಸಿಪಿಐ ತಿಮ್ಮಪ್ಪನಾಯ್ಕ, ಹೊನ್ನಾವರ ಪಿಎಸ್‌ಐ ಮಂಜುನಾಥ ನಾಯ್ಕ ತಮ್ಮ ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಧಾವಿಸಿ ಆರೋಪಿಯನ್ನ ಬಂಧಿಸಿ ಉತ್ತರ ಕನ್ನಡ ಎಸ್ಪಿ ಎಂ. ನಾರಾಯಣ, ಭಟ್ಕಳ ಡಿವೈಎಸ್ಪಿ ಎಂ.ಕೆ. ಮಹೇಶ ಮಾರ್ಗದರ್ಶನದಲ್ಲಿ ಮುಂದಿನ ತನಿಖೆ ನಡೆದಿದೆ.



ಸಿಪಿಐ ತಿಮ್ಮಪ್ಪ ನಾಯ್ಕ್



ಪಿಎಸ್‌ಐ ಮಂಜುನಾಥ

☯

---

3 ☞

ಚಿನ್ನದ ಕಳ್ಳಿ ಬಗ್ಗೆ ಹೆಚ್ಚು ಮಾತನಾಡಲು ನನಗೆ ಇಷ್ಟವಿಲ್ಲ. ಈ ವಿಚಾರದಲ್ಲಿ ನನ್ನನ್ನು ಎಳೆದು ತರಬೇಡಿ ಎಂದು ಮನವಿ ಮಾಡಿದ್ದಾರೆ.

### ವರ್ತೂರ್‌ಗೆ ಗುಲಾಬ್ ಜಾಮೂನ್

ಮಾಜಿ ಸಚಿವ ವರ್ತೂರ್ ಪ್ರಕಾಶ್‌ಗೆ ಕಾನೂನಿನ ಸಂಕಷ್ಟ ತಂದೊಟ್ಟಿರುವ ಶ್ವೇತಾಗೌಡ ವಿಚಾರಣೆ ಸಂದರ್ಭದಲ್ಲಿ ಹಲವು ಸ್ಫೋಟಕ ಮಾಹಿತಿಗಳು ಬಹಿರಂಗವಾಗಿದೆ. ವರ್ತೂರ್ ಪ್ರಕಾಶ್‌ಗೆ ಗುಲಾಬ್ ಜಾಮೂನ್ ಮತ್ತು ಕೋಲಾರ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಓಂಶಕ್ತಿ ಚಲಪತಿ ಮೊಬೈಲ್ ನಂಬರ್‌ಗೆ ಮೈಸೂರುಪಾಕ್ ಎಂದು ಸೇವ್ ಮಾಡಿಕೊಂಡಿರುವ ಒಂದೊಂದೇ ಕಹಾನಿಗಳು ಗೊತ್ತಾಗುತ್ತಿವೆ. ಆರು ತಿಂಗಳ ಹಿಂದೆಯಷ್ಟೇ ಶ್ವೇತಾಗೌಡ ಮಾಜಿ ಮಂತ್ರಿ ವರ್ತೂರ್ ಪ್ರಕಾಶ್‌ರವರಿಗೆ ಫೇಸ್ ಬುಕ್‌ನಲ್ಲಿ ಪರಿಚಯವಾಗಿದ್ದು, ತಾನೇ ರಿಕ್ವೆಸ್ಟ್ ಕಳಿಸಿ ಸ್ನೇಹದ ಬಲೆಗೆ ಬೀಳಿಸಿಕೊಂಡಿದ್ದಳು. ಬಳಿಕ ಮೆಸೇಂಜರ್‌ನಲ್ಲಿ ಚಾಟಿಂಗ್ ಶುರುವಾಗಿ ಇಬ್ಬರು ಮೊಬೈಲ್ ನಂಬರ್‌ನ್ನು ವಿನಿಮಯ ಮಾಡಿಕೊಂಡಿದ್ದಾರೆ. ಬಳಿಕ ವಾಟ್ಸ್ ಅಪ್‌ನಲ್ಲೂ ಚಾಟಿಂಗ್ ಮುಂದುವರಿದಿದೆ. ವರ್ತೂರ್ ಪ್ರಕಾಶ್‌ರವರ ನಂಬರ್ ಬೇರೆಯವರಿಗೆ ಗೊತ್ತಾಗಬಾರದೆನ್ನುವ ಉದ್ದೇಶದಿಂದ ಮೊಬೈಲ್‌ನಲ್ಲಿ ಗುಲಾಬ್ ಜಾಮೂನ್ ಎಂದು ನಂಬರ್ ಸೇವ್ ಮಾಡಿಕೊಂಡಿರುವ ವಿಚಾರ ಬೆಳಕಿಗೆ ಬಂದಿರುವುದಲ್ಲದೆ, ಶ್ವೇತಾಗೌಡ ಮತ್ತು ವರ್ತೂರ್ ಪ್ರಕಾಶ್ ನಡುವೆ ನಿಕಟ ನಂಟಿರುವುದಾಗಿ ಹೇಳಿರುವುದಲ್ಲದೆ ಇಬ್ಬರು ಹಲವು ಬಾರಿ ಮೈಸೂರು ಚಾಮುಂಡಿ ಬೆಟ್ಟಕ್ಕೆ ಹೋಗಿ ಬಂದಿರುವುದು. ವರ್ತೂರ್ ಪ್ರಕಾಶ್‌ಗೆ ಪತ್ನಿಯ ವಿಯೋಗವಾಗಿರುವುದರಿಂದ ಪತ್ನಿಯ ಸ್ಥಾನವನ್ನು ಪಡೆಯಲು ಶ್ವೇತಾಗೌಡ ವರ್ತೂರ್ ಪ್ರಕಾಶ್ ಜೊತೆಗೆ ಎಂಗೇಜ್‌ಮೆಂಟ್ ಮಾಡಿಕೊಳ್ಳಲು ಸಿದ್ಧತೆ ನಡೆಸಿರುವುದಲ್ಲದೆ ತಿರುಪತಿಗೆ ಎರಡು ಟಿಕೆಟ್ ಸಹ ಬುಕ್ ಮಾಡಿರುವುದು ಬಹಿರಂಗವಾಗಿದೆ. ಇದಕ್ಕೆ ಪೂರಕವಾಗಿ ಶ್ವೇತಾಗೌಡ ಮೊಬೈಲ್‌ನಲ್ಲಿ ಹಲವು ಫೋಟೋ, ಸಾಕ್ಷಿಗಳು ಸಿಕ್ಕಿವೆ. ಮೂರು ಚಿನ್ನದ ಅಂಗಡಿಗಳಿಗೆ ಚೀಟಿ ಕೊಟ್ಟಿರುವುದಕ್ಕೆ ಸಾಕ್ಷಿ ಸಿಕ್ಕಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ಹನಿಟ್ರ್ಯಾಪ್‌ಗೆ ಯತ್ನ

ಶ್ವೇತಾಗೌಡ ತನ್ನ ಮೊಬೈಲ್‌ನಲ್ಲಿ ಮೈಸೂರು ಪಾಕ್ ಎಂದು ಸೇವ್ ಮಾಡಿಕೊಂಡಿದ್ದ ನಂಬರ್‌ನ ಬೆನ್ನು ಹತ್ತಿದ ಪೊಲೀಸರಿಗೆ ಕೋಲಾರ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಓಂಶಕ್ತಿ ಚಲಪತಿ ನಂಬರ್ ಎಂಬುವುದು ಗೊತ್ತಾಗಿ ವಿಚಾರಣೆ ಮಾಡಲಾಗಿ ಚಲಪತಿಯನ್ನು ಹನಿಟ್ರ್ಯಾಪ್‌ನ ಖೆಡ್ಡಾಗೆ ಬೀಳಿಸಿಕೊಳ್ಳಲು ಶ್ವೇತಾಗೌಡ ಮುಂದಾಗಿದ್ದ ಅಂಶ ಬಯಲಾಗಿದೆ. ಓಂ ಶಕ್ತಿ ಚಲಪತಿರವರನ್ನು ಸಮಾಜ ಸೇವಕಿಯ ಹೆಸರಿನಲ್ಲಿ ಪರಿಚಯ ಮಾಡಿಕೊಂಡು ಹನಿಟ್ರ್ಯಾಪ್‌ಗೆ ಬೀಳಿಸಿಕೊಂಡು ದುಡ್ಡು ಮಾಡುವ ಪ್ಲಾನ್ ಇತ್ತು ಎಂದು ಹೇಳಲಾಗಿದೆ. ಶ್ವೇತಾಗೌಡ ತನ್ನ ಮೊಬೈಲ್ ಫೋನ್‌ನಲ್ಲಿ ಸಿಹಿತಿಂಡಿಗಳ ಹೆಸರಿನಲ್ಲಿ ಸೇವ್ ಆಗಿರುವ 20 ನಂಬರ್‌ಗಳು ಬಿಜೆಪಿ ಮತ್ತು ಇತರೆ ಪಕ್ಷಗಳ ಮುಖಂಡರು ಯಾರು ಎನ್ನುವ ಬಗ್ಗೆ ನಂಬರ್‌ಗಳ ಜಾಡು ಹಿಡಿದು ತನಿಖೆ ಆರಂಭಿಸಿದ್ದಾರೆ. ಓಂ ಶಕ್ತಿ ಚಲಪತಿ ನಂಬರ್ ಆಧರಿಸಿ ಪೊಲೀಸರು ಅವರಿಗೆ ಫೋನ್ ಮಾಡಿ ವಿಚಾರಣೆ ಮಾಡಲಾಗಿ ನನಗೂ ಶ್ವೇತಾಗೌಡಗೂ ಯಾವುದೇ ಸಂಬಂಧ ಇಲ್ಲ. ನಾನು ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುತ್ತಿದ್ದು, ಈ ಹಿನ್ನೆಲೆಯಲ್ಲಿ ಶ್ವೇತಾಗೌಡ ನನ್ನನ್ನು ಭೇಟಿಯಾಗಿರಬೇಕು ಅಥವಾ ಫೋನ್‌ನಲ್ಲಿ ಮಾತನಾಡಿರಬಹುದು ನನಗೆ ನೆನಪಿಲ್ಲ. ಆದರೆ ಆಕೆ ಜೊತೆ ನನಗೆ ಸಂಪರ್ಕವೇ ಇಲ್ಲ. ಯಾರೋ ನನನ್ನು ಹನಿಟ್ರ್ಯಾಪ್‌ಗೆ ಒಳಪಡಿಸಲು ನಡೆಸಿರುವ ಯತ್ನ. ರಾಜಕೀಯ ತೇಜೋವಧೆಗಾಗಿ ನಡೆದಿರುವ ಷಡ್ಯಂತ್ರವಾಗಿದೆ ಎಂದು ಓಂ ಶಕ್ತಿ ಚಲಪತಿ ಪೊಲೀಸರಿಗೆ ವಿವರಣೆ ನೀಡಿದ್ದಾರೆ.

☯

# ಒಂದೂವರೆ ಸಾವಿರಕ್ಕೆ ಬಾಳೇಹಣ್ಣು ವ್ಯಾಪಾರಿ ಕೊಲೆ!

7 ☞

ನಡೆಸಿದರು. ಬಾಳೇಹಣ್ಣು ವ್ಯಾಪಾರಿ ವೃದ್ಧನ ಬಳಿ ಇದ್ದ ಹಣವನ್ನು ಲಪಟಾಯಿಸಲು ಊರಿಗೆ ಬಿಡುವುದಾಗಿ ಹೇಳಿ ನಂಬಿಸಿ ನಿರ್ಜನ ಪ್ರದೇಶದಲ್ಲಿ ಹಣವನ್ನು ಕಿತ್ತುಕೊಂಡು ಹಲ್ಲೆ ಮಾಡಿ ಪರಾರಿಯಾಗಿರುವ ಆರೋಪಿಗಳ ಪತ್ತೆಗಾಗಿ ಎಸ್ಪಿ ಶಾಂತಕುಮಾರ್, ಡಿವೈಎಸ್ಪಿ ಪಾಂಡುರಂಗರವರ ಮಾರ್ಗದರ್ಶನದಲ್ಲಿ ಪಿಐ ರಂಗಶಾಮಯ್ಯನವರ ನೇತೃತ್ವದಲ್ಲಿ ಪಿಎಸ್ಐ ಗುರುರಾಜ ಚಿಂತಾಕಾಲ, ಸಿಬ್ಬಂದಿ ವರ್ಗದವರಾದ ಮಹೇಂದ್ರ, ಶ್ರೀನಿವಾಸ್, ವೇಣುಗೋಪಾಲ್, ಗಜೇಂದ್ರ, ನಟರಾಜ್, ಸತೀಶ್‌ಕುಮಾರ್, ಸಂಪಂಗಿ, ಸತೀಶ್ ರೆಡ್ಡಿ, ಮುರುಳಿ, ಶಿವಯ್ಯ, ಮುಂತಾದವರ ತಂಡವನ್ನು ರಚಿಸಲಾಗಿರುತ್ತದೆ. ಕೋಲಾರ ಎಸ್‌ಎನ್ ಆರ್ ಆಸ್ಪತ್ರೆಯ ಶವಗಾರದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು, ಮೃತನ ವಾರಸುದಾರರು ಹಾಗೂ ಪಂಚರ ಸಮಕ್ಷಮದಲ್ಲಿ ಶವದ ಪಂಚನಾಮೆ ನಡೆಸಿದ ಮೇಲೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತದೇಹದ ಪರೀಕ್ಷೆ ನಡೆಸಿದ ನಂತರ ಶವವನ್ನು ವಾರಸುದಾರರಿಗೆ ನೀಡಲಾಯಿತು.

### ಹಣದ ಆಸೆಗಾಗಿ ಕೊಲೆ

ಬೇತಮಂಗಲ ಪೊಲೀಸ್ ಠಾಣೆಯ ಪಿಐ ರಂಗಶಾಮಯ್ಯ ನೇತೃತ್ವದ ಕ್ರೈಂ ತಂಡವು ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದು ಮೊದಲಿಗೆ ಮೃತನು ಬಾಳೇಹಣ್ಣು ವ್ಯಾಪಾರ ಮಾಡುವ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮರಾಗಳ ಪರಿಶೀಲನೆ ಹಾಗೂ ಮೊಬೈಲ್ ಕಾಲ್ ಲಿಸ್ಟ್‌ನಲ್ಲಿ ಮೃತ ರಾಜರವರಿಗೆ ಹೆಚ್ಚು ಬಾರಿ ಫೋನ್ ಮಾಡಿ ಮಾತನಾಡಿದವರನ್ನು ವಿಚಾರಣೆ ಮಾಡಲಾಯಿತು. ಆದರೆ ಯಾವುದೇ ಸುಳಿವು ಸಿಗಲಿಲ್ಲ. ಕೊನೆಗೆ ವಿ. ಕೋಟೆಗೆ ಹೋಗುವ ರಸ್ತೆಯಲ್ಲಿನ ಪೆಟ್ರೋಲ್ ಬಂಕ್‌ಗಳಲ್ಲಿನ ಸಿಸಿಟಿವಿ ಕ್ಯಾಮರಾಗಳನ್ನು ಪರಿಶೀಲಿಸಲಾಗಿ ಸುಂದರಪಾಳ್ಯ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕಿಸಿಕೊಂಡು ದ್ವಿಚಕ್ರ ವಾಹನದಲ್ಲಿ ಮೃತ ವ್ಯಕ್ತಿಯನ್ನು ಕರೆದುಕೊಂಡು ಇಬ್ಬರು ಯುವಕರು ವಿ. ಕೋಟೆ ಕಡೆಗೆ ಹೋಗುತ್ತಿರುವ ದೃಶ್ಯದ ಆಧಾರದ ಮೇಲೆ ಬೇತಮಂಗಲದ ಹಳೇ ಬಡಾವಣೆ, 5ನೇ ಬ್ಲಾಕ್‌ನ ವಾಸಿ ಜಗದೀಶ್‌ರವರ ಮಗ ಪೈಂಟಿಂಗ್ ಕೆಲಸ ಮಾಡುವ ಕಿರಣ್ ಅಲಿಯಾಸ್ ಕಿರಣ್‌ಕುಮಾರ್ (30) ಹಾಗೂ ಬೇತಮಂಗಲ ಹನುಮಂತನಗರ, ಹಳೇ ಬಡಾವಣೆ, 5ನೇ ಬ್ಲಾಕ್‌ನ ವಾಸಿ ವೆಂಕಟೇಶ್‌ರವರ ಮಗ ತರಕಾರಿ ವ್ಯಾಪಾರ ಮಾಡುವ ವಿಜಯ್ (21) ಎನ್ನುವ ವ್ಯಕ್ತಿಗಳೆಂದು ಖಚಿತಪಡಿಸಿಕೊಂಡು ಅವರ ಬಂಧನಕ್ಕೆ ಬಲೆ ಬೀಸಿದ್ದು, ಪೊಲೀಸ್ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಡಿಸೆಂಬರ್ 8ರಂದು ಮಧ್ಯಾಹ್ನ 1.45 ಗಂಟೆ ಸಮಯದಲ್ಲಿ ಬೇತಮಂಗಲ ಕೆರೆ ಬಳಿ ಎ1 ಕಿರಣ್ ಮತ್ತು ಎ2 ವಿಜಯ್‌ರವರನ್ನು ಪತ್ತೆಹಚ್ಚಿ ವಶಕ್ಕೆ ಪಡೆದು, ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆಗೆ ಒಳಪಡಿಸಲಾಗಿ ಕಿರಣ್ ಮತ್ತು ವಿಜಯ್ ನಾವಿಬ್ಬರು ಸ್ನೇಹಿತರಾಗಿದ್ದು, ಕಿರಣ್ ಪೈಂಟಿಂಗ್ ಕೆಲಸ ಮಾಡುತ್ತಿದ್ದನು. ವಿಜಯ್ ತರಕಾರಿ ವ್ಯಾಪಾರ ಮಾಡುತ್ತಿದ್ದು, ಇಬ್ಬರು ಪ್ರತಿದಿನ ರಾತ್ರಿ ಬಸ್ ನಿಲ್ದಾಣದ ಸರ್ಕಲ್‌ನಲ್ಲಿ ಸೇರಿಕೊಂಡು ಸ್ವಲ್ಪ ಹೊತ್ತು ಮಾತನಾಡಿಕೊಂಡಿದ್ದು, ನಂತರ ಲೈಟಾಗಿ ಮದ್ಯ ಸೇವನೆ ಮಾಡಿ ಸ್ನ್ಯಾಕ್ಸ್ ತಿಂದು ಮನೆಗಳಿಗೆ ಹೋಗುತ್ತಿದ್ದರು. ಬಟವಾಡೆ ದಿನ ಮಾತ್ರ ಇಬ್ಬರು ಕಂಠಪೂರ್ತಿ ಕುಡಿಯುತ್ತಿದ್ದರು. ತಾವು ದಿನವು ಸಂಪಾದನೆ ಮಾಡುತ್ತಿದ್ದ ಹಣದಲ್ಲಿ ಮನೆಗೂ ಕೊಟ್ಟು ಉಳಿದ ಸ್ವಲ್ಪ ಹಣವನ್ನು ಖರ್ಚಿಗೆ ಉಳಿಸಿಕೊಂಡು, ಇರುವ ಹಣದಲ್ಲಿ ವಾರ ಪೂರ್ತಿ ಕುಡಿತಕ್ಕೆ ಖರ್ಚು ಮಾಡಬೇಕಾಗಿತ್ತು. ಇದರಿಂದ ಹಣ ಸಾಕಾಗದೆ ಇರುವುದರಲ್ಲಿ ಕಾಲ ಕಳೆಯುತ್ತಿದ್ದರು. ಬಸ್ ನಿಲ್ದಾಣದ ವೃತ್ತದಲ್ಲಿ ಬಾಳೇಹಣ್ಣಿನ ವ್ಯಾಪಾರ ಮಾಡುತ್ತಿದ್ದ ವೃದ್ಧ ಬೆಳಗ್ಗಿನಿಂದ ರಾತ್ರಿವರೆಗೂ ವ್ಯಾಪಾರ ಮಾಡಿಕೊಂಡು ರಾತ್ರಿ ಹಣದೊಂದಿಗೆ ಕೆಜಿಎಫ್ ತಾಲ್ಲೂಕಿನ ಬೆನ್ನವಾರ ಗ್ರಾಮಕ್ಕೆ ಅಥವಾ ವಿ. ಕೋಟೆಗೆ ಹೋಗುತ್ತಿದ್ದ ಬಗ್ಗೆ ತಿಳಿದುಕೊಂಡು ಹಣವನ್ನು ಲಪಟಾಯಿಸುವ ಪ್ಲಾನ್ ಮಾಡಿಕೊಂಡಿದ್ದರು.

ಡಿಸೆಂಬರ್ 3ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಸುಂದರಪಾಳ್ಯ ಗ್ರಾಮದ ರಾಮಸಾಗರ ಕ್ರಾಸ್ ಬಸ್ ನಿಲ್ದಾಣದ ಬಳಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿರುವಾಗ ಬಸ್ಸಿಗಾಗಿ ವೃದ್ಧನು ಕಾದಿದ್ದನು. ಆಗ ವಿಜಯ್ ಎಲ್ಲಿಗೆ ಹೋಗಬೇಕು ಎಂದು ಕೇಳಿದನು. ಅದಕ್ಕೆ ವೃದ್ಧನಾನು ವಿ. ಕೋಟೆಗೆ ಹೋಗಬೇಕು ಬಸ್ ಅಥವಾ ಶೇರ್ ಆಟೋ ಬಂದಿಲ್ಲ, ನಾನೂ ನಿಮ್ಮ ಜೊತೆ ಬರುತ್ತೇನೆಂದು ಹೇಳಿದಾಗ ವಿಜಯ್‌ನು ನಾವು ಸಹ ವಿ. ಕೋಟೆಗೆ ಹೋಗುತ್ತಿದ್ದೇವೆ, ಬಾ ಬೈಕ್‌ನಲ್ಲಿ ಬಿಡುತ್ತೇವೆ. ಆದರೆ ನಮ್ಮ ಬೈಕಿಗೆ ಪೆಟ್ರೋಲ್ ಹಾಕಿಸು ಎಂದು ಕೇಳಿದಾಗ ಸರಿ ಎಂದು ಹೇಳಿ ನಮ್ಮ ಜೊತೆ ಬಂದನು. ಸುಂದರಪಾಳ್ಯ ಪೆಟ್ರೋಲ್ ಬಂಕ್‌ನಲ್ಲಿ 100 ರೂ. ಕೊಟ್ಟು ಪೆಟ್ರೋಲ್ ಹಾಕಿಸಿದನು. ವೃದ್ಧನ ಬಳಿ ಇರುವ ಹಣವನ್ನು ನೋಡಿ ಲಪಟಾಯಿಸಬೇಕೆಂದು ಕಣ್ಣುಸನ್ನೆಯಲ್ಲಿ ಮಾತನಾಡಿಕೊಂಡೆವು. ನಂತರ ವಿಜಯ್ ಬೈಕ್‌ನ್ನು ಚಲಾಯಿಸಿಕೊಂಡು ವಿ. ಕೋಟೆ ಮುಖ್ಯರಸ್ತೆಯ ಕದಿರಿಗಾನಕುಪ್ಪ ಗ್ರಾಮದ ಬಳಿ ಹೊಸದಾಗಿ ಕಾಮಗಾರಿ ಹಂತದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಜಮೀನಿನ ಎಡಭಾಗದ ನಿರ್ಜನ ಪ್ರದೇಶಕ್ಕೆ ರಾತ್ರಿ ಸುಮಾರು 10.30 ಗಂಟೆಗೆ ಕರೆದುಕೊಂಡು ಹೋದೆವು. ಆಗ ವೃದ್ಧ ಎಲ್ಲಿಗೆ ಹೋಗುತ್ತಿರುವುದೆಂದು ಕೇಳಿದನು. ಅದಕ್ಕೆ ನಾವು ಮೂತ್ರವಿಸರ್ಜನೆ ಮಾಡಲು ಹೋಗುತ್ತಿರುವುದು ಎಂದು ಹೇಳಿ ಕರೆದುಕೊಂಡು ಹೋಗಿ ದ್ವಿಚಕ್ರ ವಾಹನವನ್ನು ನಿಲ್ಲಿಸಿ ವೃದ್ಧನನ್ನು ಕೆಳಗೆ ಇಳಿಸಿದ ನಂತರ ವಿಜಯ್ ಆತನ ಜೇಬಿನಲ್ಲಿದ್ದ 1500 ರೂ. ನಗದು ಹಣ ಮತ್ತು ಮೊಬೈಲ್ ಫೋನನ್ನು ಕಿತ್ತುಕೊಂಡನು. ಆಗ ವೃದ್ಧ ಗಲಾಟೆ ಮಾಡಿದನಲ್ಲದೆ ಜೋರಾಗಿ ಕಾಪಾಡಿ ಎಂದು ಕಿರುಚಲು ಪ್ರಾರಂಭಿಸಿದನು. ತಕ್ಷಣ ವಿಜಯ್ ನನ್ನನ್ನು ಕುರಿತು ವೃದ್ಧನನ್ನು ಗಟ್ಟಿಯಾಗಿ ಹಿಡಿದುಕೋ ಎಂದು ಹೇಳಿ ಬೇಕಿನಲ್ಲಿದ್ದ ಟೆಸ್ಟರ್ ಸ್ಕ್ರೂಡ್ರೈವರ್‌ನ್ನು ತೆಗೆದುಕೊಂಡು ಬಂದು ತಲೆಯ ಮೇಲೆ ಚುಚ್ಚಿ ರಕ್ತಗಾಯ ಮಾಡಿದ ನಂತರ ನಾನು ಅಲ್ಲಿಯೇ ಇದ್ದ ಮರದ ದೊಣ್ಣೆಯಿಂದ ಮುಖ, ಮೂಗು, ಬಲಕಣ್ಣು, ಎಡಕಣ್ಣು ಬಳಿ ಹಾಗೂ ಕೈಕಾಲುಗಳಿಗೆ ಹೊಡೆದು ರಕ್ತಗಾಯಪಡಿಸಿ ಕೊಲೆ ಮಾಡಲು ಪ್ರಯತ್ನಿಸಿದ್ದೆವು. ವೃದ್ಧನಿಗೆ ಮಾರಣಾಂತಿಕ ರಕ್ತಗಾಯವಾಗಿದ್ದರಿಂದ ಕೆಳಗೆ ಬಿದ್ದು ಹೋದನು. ಆ ಸಮಯದಲ್ಲಿ ವೃದ್ಧ ಧರಿಸಿದ್ದ ಟೋಪಿ, ಕನ್ನಡಕ ಅಲ್ಲಿಯೇ ಬಿದ್ದು ಹೋದವು. ವೃದ್ಧನು ಅಲ್ಲೇ ನರಳಾಡುತ್ತಾ, ಒದ್ದಾಡುತ್ತಿದ್ದನು. ನಾವಿಬ್ಬರು ಆತನ ಬಳಿ ಇದ್ದ ಹಣ ಮತ್ತು ಮೊಬೈಲ್ ಫೋನನ್ನು ಕಿತ್ತುಕೊಂಡು ನಮ್ಮ ದ್ವಿಚಕ್ರ ವಾಹನದಲ್ಲಿ ಸ್ಥಳದಿಂದ ಪರಾರಿಯಾದೆವು. ಡಿಸೆಂಬರ್ 8ರಂದು ಮಧ್ಯಾಹ್ನ 1.45ರಲ್ಲಿ ಬೇತಮಂಗಲ ಕೆರೆಯ ಬಳಿ ಏನೂ ತಿಳಿಯದವರಂತೆ ತಿರುಗಾಡುತ್ತಿದ್ದಾಗ ಪೊಲೀಸರು ಕೈಗೆ ಸಿಕ್ಕಿಹಾಕಿಕೊಂಡ ಬಗ್ಗೆ ಹೇಳಿದರು.

ಕಿರಣ್ ಮತ್ತು ವಿಜಯ್‌ನಿಂದ ಹೇಳಿಕೆ ಪಡೆದ ನಂತರ ಇಬ್ಬರನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಕದಿರಿಗಾನಕುಪ್ಪ ಗ್ರಾಮದ ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ನಂತರ ಆರೋಪಿಗಳಾದ ಕಿರಣ್ ಮತ್ತು ವಿಜಯ್ ತಾವು ಕೃತ್ಯಕ್ಕೆ ಉಪಯೋಗಿಸಿದ್ದ ಟೆಸ್ಟರ್ ಮತ್ತು ಮರದ ದೊಣ್ಣೆಯನ್ನು ತೆಗೆದುಕೊಟ್ಟಿದ್ದು ಪಂಚರ ಸಮಕ್ಷಮದಲ್ಲಿ ಪೊಲೀಸರು ವಶಕ್ಕೆ ಪಡೆದ ಮೇಲೆ ಮನೆಯಲ್ಲಿ ನಿಲ್ಲಿಸಿದ್ದ ಬೈಕನ್ನು ಆರೋಪಿಗಳು ತೋರಿಸಿದ್ದು, ಅದನ್ನು ವಶಕ್ಕೆ ಪಡೆದ ನಂತರ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ☯


ರಾಜನ ಮೃತದೇಹ


ರೈಟರ್ ಮಹೇಂದ್ರ ಬಿ., ಹೆಚ್‌ಸಿಗಳಾದ ಗಜೇಂದ್ರ, ಶ್ರೀನಿವಾಸ್ ಹಾಗೂ ಪಿಸಿಸಿ ವೇಣುಗೋಪಾಲ್

# ಗರಗಸದಿಂದ ರೈತನ ಪೀಸ್ ಪೀಸ್ ಮಾಡಿದ ಸೈಕೋ!

5 ☞

ತನ್ನ ಕೆಲಸ ಮಾಡಿಕೊಳ್ಳಲೇ ಬೇಕೆಂಬ ತೀರ್ಮಾನ ಮಾಡಿ ಪಾಂಡವಪುರ ತಾಲೂಕಿನ ಕೆನ್ನಾಳು ಗ್ರಾಮದ ಮನೆಯೊಂದಕ್ಕೆ ಹೋಗಿದ್ದಾನೆ ಅಲ್ಲಿ ಮನೆಯ ಹೊರಗೆ ನಿಂತು ಸುತ್ತ ಕಣ್ಣು ಹಾಯಿಸಿದ್ದಾನೆ. ಅಲ್ಲಿ ಸಿಸಿಟಿವಿ ಕ್ಯಾಮರಾ ಇರುವುದು ಮತ್ತು ಮನೆಯಲ್ಲಿ ಹೆಚ್ಚಿನ ಜನ ಇದ್ದುದರಿಂದ ಇಲ್ಲಿ ನನ್ನ ಆಟ ನಡೆಯಲ್ಲ ಎಂದುಕೊಂಡು ಅಲ್ಲಿಂದ ಜಾಗ ಖಾಲಿ ಮಾಡಿದ್ದಾನೆ. ಅಲ್ಲಿಂದ ನೇರವಾಗಿ ಆತ ಕ್ಯಾತನಹಳ್ಳಿಗೆ ಬಂದಿದ್ದಾನೆ. ಗ್ರಾಮದ ಹೊರವಲಯದಲ್ಲಿರುವ ಶ್ರೀ ಶಂಭುಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಸಮೀಪದ ತೋಟದ ಮನೆಯೊಂದು ಕಾಣಿಸಿದೆ. ಸೀದಾ ಅತ್ತ ತೆರಳಿದ್ದಾನೆ. ಅಂದಾಜು ರಾತ್ರಿ 7.20ರ ಸಮಯ. ಮನೆಯಲ್ಲಿ ರಮೇಶ್ ಮತ್ತು ಯಶೋಧಮ್ಮ ವೃದ್ಧ ದಂಪತಿಗಳಿದ್ದರು. ಅವರಿಗೆ ಹೊರಗೆ ಯಮನಂತೆ ಮೊಹಮ್ಮದ್ ಇಬ್ರಾಹಿಂ ಬಂದಿದ್ದಾನೆ ಎಂಬುದು ಹೇಗೆ ಗೊತ್ತಾಗಬೇಕು?

ಹಂತಕ ಮೊಹಮ್ಮದ್ ಇಬ್ರಾಹಿಂ ಮನೆ ಬಾಗಿಲು ಬಡಿದಿದ್ದಾನೆ ಮನೆಯಿಂದ ಹೊರಗೆ ಬಂದ ವೃದ್ಧೆ ಯಶೋಧಮ್ಮನಿಗೆ ನೀವು ಮರ ಕತ್ತರಿಸುವ ಯಂತ್ರ ಆಡ ಮಾಡಿದ್ದೀರಿ ತೆಗೆದುಕೊಳ್ಳಿ ಎಂದು ಹೇಳಿದ್ದಾನೆ. ನಾವು ಆರ್ಡರ್ ಮಾಡಿಲ್ಲವೆಂದು ಹೇಳಿದರೂ ಕೇಳದೇ ಮನೆಯೊಳಗೆ ಮರ ಕತ್ತರಿಸುವ ಯಂತ್ರವನ್ನು ಬ್ಯಾಗ್‌ನಿಂದ ತೆಗೆದು ಮಹಿಳೆಯ ಮುಖಕ್ಕೆ ಹಿಡಿದು ಸ್ವಲ್ಪ ಭಾಗವನ್ನು ಕೊಯ್ದಿದ್ದಾನೆ. ಕೂಡಲೇ ಯಶೋಧಮ್ಮ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ಅಲ್ಲಿಂದ ಒಳಗೆ ನುಗ್ಗಿದ ವೇಳೆ ಹಾಸಿಗೆ ಮೇಲೆ ಸ್ಟ್ರೋಕ್ ಆಗಿ ಮಲಗಿದ್ದ ವೃದ್ಧ ರೈತ ರಮೇಶ್ ನೀನು ಯಾರೆಂದು ವಿಚಾರಿಸುತ್ತಾ ಜೋರು ಧ್ವನಿಯಲ್ಲಿ ಕೂಗಾಡಿದ್ದಾರೆ. ಕೂಗಾಟ ಕೇಳಿ ಜನ ಬಂದು ಬಿಟ್ಟರೆ ಕಷ್ಟ ಎಂದರಿತ ಹಂತಕ ತನ್ನ ಬಳಿಯಿದ್ದ ಮಿಷನ್‌ನಿಂದ ಮರ ಕತ್ತರಿಸುವಂತೆ ರೈತ ರಮೇಶನ ಕುತ್ತಿಗೆಯನ್ನು ಕತ್ತರಿಸಿ ಬಿಟ್ಟಿದ್ದಾನೆ.


ಮೊದಲು ಹೀಗಿದ್ದ ರಮೇಶ್

ಅಷ್ಟರಲ್ಲೇ ಪ್ರಜ್ಞೆತಪ್ಪಿ ಬಿದ್ದಿದ್ದ ಯಶೋಧಮ್ಮನಿಗೆ ಪ್ರಜ್ಞೆ ಬಂದಿದ್ದು ಕೂಡಲೇ ಅವರು ಮನೆಯಿಂದ ಹೊರ ಬಂದು ಹೊರಗಿನಿಂದ ಬಾಗಿಲು ಹಾಕಿದ್ದಾರೆ. ಇದು ಗೊತ್ತಾಗುತ್ತಿದ್ದಂತೆಯೇ ಮನೆಯ ಒಳಗಿನಿಂದ ಬಾಗಿಲು ತೆರೆಯುವಂತೆ ಯಶೋಧಮ್ಮನಿಗೆ ಬೆದರಿಕೆ ಹಾಕಿದ್ದಾನೆ. ತೆಗೆಯದಿದ್ದರೆ ನಿನ್ನ ಗಂಡನ ಪೀಸ್ ಪೀಸ್ ಮಾಡುತ್ತೇನೆ ಎಂದಿದ್ದಾನೆ. ಆದರೆ ಆತನ ಬೆದರಿಕೆಗೆ ಬಾಗಿಲು ತೆಗೆಯಲು ಯಶೋಧಮ್ಮ ಮುಂದಾಗಲಿಲ್ಲ ಅಷ್ಟರಲ್ಲೇ ಯಶೋಧಮ್ಮ ಕೂಗಾಡಿದ್ದು ಜನಕ್ಕೆ ಕೇಳಿಸಿದೆ. ಹೀಗಾಗಿ ಮನೆ ಕಡೆಗೆ ಬಂದಿದ್ದಾರೆ. ಆದರೆ ಒಳಗಿದ್ದ ಹಂತಕ ಮೊಹಮ್ಮದ್ ಇಬ್ರಾಹಿಂ ಬಾಗಿಲು ತೆಗೆಯದ ಕೋಪಕ್ಕೆ ಮಿಷನ್‌ನಿಂದ ಮನಸ್ಸೋಇಚ್ಛೆ ವೃದ್ಧ ರಮೇಶನನ್ನು ಕತ್ತರಿಸಿ ಹಾಕಿದ್ದಾನೆ.

ಅಷ್ಟರಲ್ಲಿಯೇ ಜನ ಸೇರಿದ್ದು ಪೊಲೀಸರಿಗೆ ಮಾಹಿತಿ ಹೋಗಿದೆ. ಸ್ಥಳಕ್ಕೆ ಬಂದ ಪೊಲೀಸರು ಬಾಗಿಲು ತೆಗೆದು ಆರೋಪಿ ಮೊಹಮ್ಮದ್ ಇಬ್ರಾಹಿಂನನ್ನು ವಶಕ್ಕೆ ಪಡೆದಿದ್ದಾರೆ. ಹಾಗೆಯೇ ಗಾಯಾಳು ಯಶೋಧಮ್ಮನನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದು ಅವರು ಚೇತರಿಸಿಕೊಳ್ಳುತ್ತಿದ್ದಾರೆ. ಹಂತಕ ಜೈಲ್ ಸೇರಿದ್ದಾನೆ. ಆದರೆ ಈ ಘಟನೆಯಿಂದ ಸುತ್ತಮುತ್ತಲಿನ ಜನ ಬೆಚ್ಚಿ ಬಿದ್ದಿರುವುದಂತು ಸತ್ಯ. ☯

## ಪಾತಕ ಪ್ರಪಂಚ

# ಮ್ಯಾಡ್ ಕ್ರಿಮಿನಲ್

ಸ್ಥಳ-ಆಂಧ್ರಪ್ರದೇಶ. ಜಿಲ್ಲೆ-ಕಡಪ.

ಕಾಲಾವಧಿ-2010ರಿಂದ 2012.

ಮ್ಯಾಡ್ ಕ್ರಿಮಿನಲ್ ಯಾರು?

ವೇಲಂಗಿ ರಾವ್...!

ಕಡಪ ಜಿಲ್ಲೆಯ ತಾಲ್ಲೂಕ್ ಕೇಂದ್ರ ಚಂದನಾಪುರಂ.

ಸಮಯ ಬೆಳಗಿನ ಹನ್ನೊಂದು ಗಂಟೆ. ಸ್ಥಳ-ಪೊಲೀಸ್ ಸ್ಟೇಷನ್. ಕಾರೊಂದು ಬಂದು ಸ್ಟೇಷನ್ ಮುಂದೆ ನಿಂತಿತು. ಈಗ ಅದರಿಂದ ನಾಲ್ಕು ಮಂದಿ ಇಳಿದು ಬಂದರು. ಶ್ರೀಮಂತರಂತೆ ಕಂಡು ಬರುತ್ತಿದ್ದಾರೆ.

ಪಿ.ಸಿ.ಯೊಬ್ಬ ಬಂದು ಹೇಳಿದ್ದರಿಂದ ಪೊಲೀಸ್ ಅಧಿಕಾರಿ ಅಚ್ಯುತರಾವ್ ಕಡಪ ಅನುಮತಿ ನೀಡಿದರು. ಅಲ್ಲಿಗೆ ಬಂದ ನಾಲ್ಕು ಮಂದಿ ಗಾಬರಿಯಾಗಿದ್ದಾರೆ. ಅವರನ್ನು ಕುಳಿತುಕೊಳ್ಳಲು ಹೇಳಿದ ಮೇಲೆ ಕಾರಣ ಕೇಳಲಾಯಿತು. ಆ ನಾಲ್ಕು ಮಂದಿಯಲ್ಲಿ ಇಬ್ಬರು ಫೋಟೋ ತೆಗೆದುಕೊಟ್ಟರು. ಪೋಸ್ಟ್‌ಕಾರ್ಡ್ ಸೈಜ್‌ನ ಫೋಟೋದಲ್ಲಿ ಆಕರ್ಷಕ ರೂಪಿನ ಯುವತಿಯ ವಿವಿಧ ಭಂಗಿಗಳಿವೆ.

ಅಚ್ಯುತರಾವ್ ಕಡಪ ಅವರು ಫೋಟೋ ನೋಡಿದ ಕೂಡಲೇ "ಈಕೆ ಟಿ.ವಿ. ಸೀರಿಯಲ್‌ಗಳಲ್ಲಿ ನೋಡಿದ್ದೇನೆ" ಎಂದರು.

"ಹೌದು ಸಾರ್ ಇವಳು ರೂಪಕಲಾ ಅಂತ. ಎರಡು ವರ್ಷಗಳಿಂದ ಟಿ.ವಿ. ಸೀರಿಯಲ್‌ಗಳಲ್ಲಿ ನಟಿಸುತ್ತಿದ್ದಾಳೆ."

"ಈಕೆ ಯಾರು?"

ಐವತ್ತರ ಪ್ರಾಯದ ವ್ಯಕ್ತಿ "ಇವಳು ನನ್ನ ಮಗಳು ರೂಪಕಲಾ ಅಂತ. ಎರಡು ದಿನಗಳಿಂದ ಕಾಣುತ್ತಿಲ್ಲ."

"ಶೂಟಿಂಗ್‌ಗೆ ಹೋಗಿರಬಹುದು."

"ಪ್ರೊಡ್ಯೂಸರ್, ಡೈರೆಕ್ಟರ್‌ಗಳೇ ನಮಗೆ ಫೋನ್ ಮಾಡಿ ವಿಚಾರಿಸಿದ್ದರು. ಅವಳು ಶೂಟಿಂಗ್‌ಗೆ ಹೋಗಿಲ್ಲ. ಸಂಬಂಧಿಕರ ಮನೆಗಳಿಗೂ ಸಹ ಹೋಗಿಲ್ಲ."

"ರೂಪಕಲಾ ಯಾವತ್ತಿನಿಂದ ಕಾಣುತ್ತಿಲ್ಲ?"

"ಗುರುವಾರ ಬಳಿಗ್ಗೆ ಶೂಟಿಂಗ್‌ಗೆ ಅಂತ ಕಾರಲ್ಲಿ ಹೋದಳು. ಶೂಟಿಂಗ್ ಮುಗಿಯೋದು ತಡವಾದ್ರೆ ಫೋನ್ ಮಾಡುತ್ತಿದ್ದಳು. ಆದರೆ ಗುರುವಾರ ರಾತ್ರಿ ಎಂಟು ಗಂಟೆಯಾದರೂ ಬರಲಿಲ್ಲ ಮತ್ತು ಫೋನ್ ಮಾಡಲಿಲ್ಲ. ಆಮೇಲೆ ನಾನೇ ಫೋನ್ ಮಾಡಿದ್ದೆ. ಅವಳ ಫೋನ್ ಸ್ವಿಚ್ ಆಫ್ ಆಗಿತ್ತು."

"ಶೂಟಿಂಗ್ ಎಲ್ಲಿತ್ತು?"

"ದಾಬಸ್‌ಪೇಟೆ ಕಾಲೋನಿಯಲ್ಲಿ, 'ಸೌಭಾಗ್ಯವತಿ' ಅನ್ನೋ ಸೀರಿಯಲ್ ಶೂಟಿಂಗ್‌ಗೆ ಹೋಗಿದ್ದು."

"ಕಾರಿನ ಡ್ರೈವರ್ ಯಾರು?"

"ಭಗವಂತಯ್ಯ ಅಂತ."

"ಅವನನ್ನು ಕೇಳಿದ್ರಾ?"

"ಪ್ರತಿದಿವಸ ಏಳು ಗಂಟೆಗೆ ಸರಿಯಾಗಿ ಮನೆ ಹತ್ತಿರ ಬಂದು ಅವಳನ್ನು ಶೂಟಿಂಗ್‌ಗೆ ಕರ್ಕೊಂಡ್ ಹೋಗ್ತಿದ್ದ. ಆದರೆ ಅವತ್ತು ಬರಲಿಲ್ಲ. ನನಗೆ ವಿಪರೀತ ಜ್ವರ ಬಂದಿದೆ ಅಂತ ಬುಧವಾರ ರಾತ್ರಿ ಒಂಭತ್ತು ಗಂಟೇಲಿ ಫನ್ ಮಾಡ್ದ. ಹಾಗಾಗಿ ರೂಪಕಲಾ ತಾನೇ ಡ್ರೈವಿಂಗ್ ಮಾಡಿಕೊಂಡು ಹೋಗಿದ್ದು."

"ಸೀರಿಯಲ್ ಯೂನಿಟ್‌ನವರನ್ನ ವಿಚಾರಿಸಬೇಕಿತ್ತು."

"ಪ್ರೊಡ್ಯೂಸರ್ ಮತ್ತು ಅಸಿಸ್ಟೆಂಟ್ ಡೈರೆಕ್ಟರ್ ಹೇಳಿದ್ರು. ಆರೂವರೆಗೆ ಶೂಟಿಂಗ್ ಮುಗಿತು. ರೂಪಕಲಾ ಏಳು ಗಂಟೆ ಅಲ್ಲಿಂದ ಹೊರಟಿದ್ದಳಂತೆ.

"ಅವಳು ಕಣ್ಮರೆಯಾಗಿ ಎರಡು ದಿನಗಳಾಗಿದ್ದರೂ ಯಾಕೆ ಕಂಪ್ಲೇಂಟ್ ಕೊಡಲಿಲ್ಲ? ನೀವು ಉದಾಸೀನ ಮಾಡಬಾರದಿತ್ತು."

"ಸಾರ್... ರೂಪಕಲಾ ಪ್ರಖ್ಯಾತಳಾಗಿದ್ದಳು. ಇತ್ತೀಚೆಗೆ ಒಂದು ಸಿನಿಮಾಕ್ಕೆ ಸಹ ಸೆಲೆಕ್ಟ್ ಆಗಿದ್ದು. ಅವಳು ಕಣ್ಮರೆಯಾಗಿದ್ದಾಳೆ ಅಂತ ಬಹಿರಂಗವಾದರೆ ಅವಳ ಕೆರಿಯರ್ ಮೇಲೆ ಪರಿಣಾಮ ಬೀರುತ್ತೆ ಅಂತ ಹಿಂಜರಿದಿದ್ದೆವು."

"ಅವಳಿಗೆ ಆಗದವರು ಯಾರಾದರೂ ಇದ್ದರೆ ನೆನಪು ಮಾಡಿಕೊಂಡು ಹೇಳಿ.'

"ಅಂತಹವರು ಯಾರು ಇರಲಿಲ್ಲ."

"ಯಾರನ್ನಾದರೂ ಲವ್ ಮಾಡುತ್ತಿದ್ದಾ?"

"ಅವಳ ಗಮನ, ಆಸಕ್ತಿ, ಪರಿಶ್ರಮವೆಲ್ಲಾ ಟಿ.ವಿ. ಚಾನಲ್‌ಗಳಲ್ಲಿ ಮತ್ತು ಸಿನಿಮಾಗಳಲ್ಲಿ ಪ್ರಸಿದ್ಧಳಾಗಬೇಕು ಎಂಬ ಉದ್ದೇಶ ಇತ್ತು. ಹಾಗಾಗಿ ಯಾರನ್ನೂ ಲವ್ ಮಾಡುತ್ತಿರಲಿಲ್ಲ."

ಅವಳ ಫೋಟೋ, ಫೋನ್ ನಂಬರ್ ಕಂಪ್ಲೇಂಟ್ ಕೊಟ್ಟವರಿಂದ ದೂರನ್ನು ಲಿಖಿತ ರೂಪದಲ್ಲಿ ಪಡೆದ ನಂತರ "ಆಗಲಿ ನಾವು ಪ್ರಯತ್ನ ಮಾಡ್ತೀನಿ. ಅವಳ ಬಗ್ಗೆ ಸುಳಿವು ದೊರೆತ ಕೂಡಲೇ ನಿಮಗೆ ಫೋನ್ ಮಾಡ್ತೀವಿ" ಎಂದು ಹೇಳಿ, ಡ್ರೈವರ್ ಟಿ.ವಿ. ಸೀರಿಯಲ್ ಪ್ರೊಡ್ಯೂಸರ್ ಮತ್ತು ಡೈರೆಕ್ಟರ್ ಅವರ ಫೋನ್ ನಂಬರ್, ಅಡ್ರೆಸ್ ಪಡೆದರು.

ಮಿಸ್ಸಿಂಗ್ ಕಂಪ್ಲೇಂಟ್ ದಾಖಲಾಗಿದೆ!

●●●

ಪೊಲೀಸ್ ಅಧಿಕಾರಿ ಬಾಯಿ ಪ್ರಕಾಶರಾವ್ ಅವರು 'ಸೌಭಾಗ್ಯವತಿ' ಸೀರಿಯಲ್‌ನ ಹೀರೋ, ಪ್ರೊಡ್ಯೂಸರ್, ಡೈರೆಕ್ಟರ್ ಮತ್ತು ಯೂನಿಟ್‌ನ ಕೆಲವರನ್ನು ವಿಚಾರಣೆ ಮಾಡಿದರು.

ಕಾರಿನ ಡ್ರೈವರ್ ಯಾರು?

ನಲವತ್ತೈದರ ಪ್ರಾಯದ ಭಗವಂತಯ್ಯನನ್ನು ಪೊಲೀಸ್ ಸ್ಟೇಷನ್‌ಗೆ ಕರೆಸಿಕೊಂಡು "ರೂಪಕಲಾ ಕಣ್ಮರೆಯಾಗಿದ್ದು ಗುರುವಾರ. ಆ ದಿನ ನೀನು ಡ್ಯೂಟಿಗೆ ಬರಲಿಲ್ಲ ಅಲ್ವಾ?"

"ಹೌದು ಸಾರ್."

"ಕಾರಣ ಏನು?"

"ತುಂಬಾ ಜ್ವರ ಬಂದಿತ್ತು."

"ಯಾವಾಗ ಜ್ವರ ಬಂತು."

"ಬುಧವಾರ ರಾತ್ರಿ."

"ಗುರುವಾರನೂ ಜ್ವರ ಇತ್ತಾ?'

"ಹೌದು ಸಾರ್."

ಮಾತು ಮುಗಿಯುವ ಮೊದಲೇ ಪೊಲೀಸ್ ಅಧಿಕಾರಿಯ ಕೈ ಅವನ ಕೆನ್ನೆಯ ಮೇಲೆ ಬಲವಾಗಿ ಅಪ್ಪಳಿಸಿತು.

ನೋವಿನಿಂದ ಕಿರುಚಿದನು.

ನಿಂತಲ್ಲೇ ತೂರಾಡಿದನು.

ಪೊಲೀಸ್ ಅಧಿಕಾರಿ ಅಚ್ಯುತರಾವ್ ಬದ್ಮಾಶ್... ಪೊಲೀಸರ ಬಗ್ಗೆ ನಿನಗೆ ಗೊತ್ತಿಲ್ಲ. ನಿನ್ನನ್ನು ಇಲ್ಲಿಗೆ ಕರೆಸುವ ಮೊದಲು ಗುರುವಾರದ ನಿನ್ನ ಚಟುವಟಿಕೆಗಳ ಬಗ್ಗೆ ನಮ್ಮವರು ಫಾಲೋ ಮಾಡಿ ವರದಿ ಕಳಿಸಿದ್ದಾರೆ."

ಭಗವಂತಯ್ಯ ಬೆಚ್ಚಿ ಬಿದ್ದನು.

ಅವನ ಮುಖ ಬಿಳುಚಿಕೊಂಡಿತು.

"ನೀನು ಗುರುವಾರ ಬೆಳಿಗ್ಗೆ ಶ್ರೀದೇವಿ ಸಿನಿಮಾ ಥಿಯೇಟರ್‌ಗೆ ಸಿನಿಮಾ ನೋಡಲು ಹೋಗಿದ್ದೆ. ಆಮೇಲೆ ಮಧ್ಯಾಹ್ನ ನರ್ತಕಿ ಬಾರ್‌ಗೆ ಹೋಗಿ ಕುಡಿದು, ತಿಂದು ಮಜಾ ಮಾಡುತ್ತಾ ಎಂಜಾಯ್ ಮಾಡಿದ್ದೆ. ಜ್ವರ ಬಂದವರು ಈ ರೀತಿ ಮಜಾ ಮಾಡ್ತಾರಾ?

ಡ್ರೈವರ್ ಭಯಗೊಂಡಿದ್ದಾನೆ.

ಸಣ್ಣಗೆ ನಡುಗುತ್ತಿದ್ದಾನೆ.

"ಸಾರ್... ಅದು... ಅದು..."

ಪೊಲೀಸ್ ಅಧಿಕಾರಿ ಗಡುಸಾಗಿ "ಜ್ವರ ಬಂತು ಅಂತ ಯಾಕೆ ಸುಳ್ಳು ಹೇಳಿ ಡ್ಯೂಟಿಗೆ ಹೋಗಲಿಲ್ಲ. ನಿನಗೆ ಬರುವ ಸಂಬಳ ಕಡಿಮೆ. ಸಂಸಾರದ ಖರ್ಚಿಗೆ ಸಾಲುತ್ತಿರಲಿಲ್ಲ. ಅಂದ ಮೇಲೆ ದಿನ ಪೂರ್ತಿ ಮಜಾ ಮಾಡಲು ಹಣ ಎಲ್ಲಿಂದ ಬಂತು?"

ಅವನು ಹೆದರುತ್ತಲೇ "ಬುಧವಾರ ಮಧ್ಯಾಹ್ನ ಯೂನಿಟ್‌ನಲ್ಲಿ ಊಟ ಮಾಡಿ ಸಿಗರೇಟ್ ಸೇದಲು ಅಂಗಡಿ ಹತ್ತಿರ ಹೋಗಿದ್ದೆ. ಆಗ ಕಾರಲ್ಲಿ ಬಂದಿದ್ದವರು ನನ್ನ ಹೆಸರಿಡಿದು ಕೂಗಿ ಕರೆದರು. ನಾನು ಹತ್ತಿರ ಹೋಗಿ ಮಾತಾಡ್ದೆ."

"ಯಾರು... ಯಾರವರು?"

"ಅವರ್‍ಯಾರೂ ಅಂತ ಗೊತ್ತಿಲ್ಲ ಸಾರ್."

"ಪರಿಚಯ ಇಲ್ಲದ ವ್ಯಕ್ತಿ ನಿನ್ನ ಜೊತೆ ಯಾಕೆ ಮಾತಾಡ್ದ? ಅವನು ಹೇಗಿದ್ದ? ಕಾರಿನ ನಂಬರ್ ಏನು?"

"ನನ್ನಿಂದ ಅವನಿಗೆ ಕೆಲಸ ಆಗಬೇಕಿತ್ತು. ನನ್ನ ಬಗ್ಗೆ ತಿಳಿದುಕೊಂಡು ಬಂದಿದ್ದ. ನನಗೆ ಎರಡು ಸಾವಿರ ರೂಪಾಯಿ ಕೊಟ್ಟು ಗುರುವಾರ ನೀನು ಡ್ರೈವಿಂಗ್ ಡ್ಯೂಟಿಗೆ ಹೋಗಬಾರದು. ಇವತ್ತು ರಾತ್ರಿ ಫೋನ್ ಮಾಡಿ ಜ್ವರ ಬಂದಿದೆ ಅಂತ ಹೇಳಬೇಕು. ಇಷ್ಟೇ ಸಾರ್ ಹೇಳಿದ್ರು. ಒಂದು ದಿವಸ ರಜಾ ಹಾಕಿ ಮನೆಯಲ್ಲಿ ಇರಲು ಇಷ್ಟೊಂದು ಹಣ ಕೊಟ್ಟದ್ದರಿಂದ ತುಂಬಾ ಖುಷಿ ಆಗಿತ್ತು. ಹಾಗಾಗಿ ನಾನು ಉಳಿದ ವಿಚಾರಗಳ ಬಗ್ಗೆ ಗಮನ ನೀಡಲಿಲ್ಲ."

"ಆ ವ್ಯಕ್ತಿ ಹೇಗಿದ್ದ?"

"ಶ್ರೀಮಂತನ ರೀತಿ ಕಾಣುತ್ತಿದ್ದ. ತನ್ನ ಗುರುತು ಸಿಗಬಾರದು ಅಂತ ಗೆಟಪ್ ಅನ್ನು ಬದಲಿಸಿಕೊಂಡಿದ್ದ."

ಇನ್ನು ಇವನಿಂದ ಕೇಳುವ ವಿಷಯ ಏನೂ ಇಲ್ಲ ಎಂದುಕೊಂಡು, ಅವನಿಂದ ಈ ಹೇಳಿಕೆ ಬರೆದು ರುಜು ಮಾಡಿಸಿಕೊಂಡ ನಂತರ ಎಚ್ಚರಿಕೆ ನೀಡಿ ಕಳಿಸಲಾಯಿತು.

ರೂಪಕಲಾಳ ಫ್ರೆಂಡ್ಸ್ ಮತ್ತು ಹತ್ತಿರದ ಸಂಬಂಧಿಕರನ್ನು ವಿಚಾರಣೆ ಮಾಡಿದಾಗ ಮಾಹಿತಿ ದೊರೆಯಿತು.

ಅವಳು ಸ್ವಭಾವತ ಅಹಂಕಾರಿಯಾಗಿದ್ದಳು. ಹಣ, ಕೀರ್ತಿ ಮತ್ತು ಸೌಂದರ್ಯದ ಕಾರಣದಿಂದ ಮದೋನ್ಮತ್ತಳಾಗಿದ್ದಳು ಮತ್ತು ಕೆಲವು ಸಲ ಬೇರೆಯವರಿಗೆ ಅವಮಾನ ಆಗುವ ರೀತಿಯಲ್ಲಿ ಮಾತಾಡುತ್ತಿದ್ದಳು. ಅಂತಹ ಕೆಲವು ಘಟನೆಗಳ ಬಗ್ಗೆ ಮಾಹಿತಿ ನೀಡಿದ್ದರು.

ಹಣಕ್ಕಾಗಿ ಕಿಡ್ನಾಪ್ ಮಾಡಿದ್ದಾರ? ಸೇಡು ತೀರಿಸಿಕೊಳ್ಳಲು ಕಿಡ್ನಾಪ್ ಮಾಡಿ ರೇಪ್ ಮಾಡಿ ಮರ್ಡರ್ ಮಾಡಿರಬಹುದೆ ಎಂಬ ಅನುಮಾನ ಕಾಡಲಾರಂಭಿಸಿತು.

ಎರಡು ದಿನಗಳಾಯಿತು. ಅಧಿಕಾರಿ ಅಚ್ಯುತರಾವ್ ಅವರಿಗೆ ಇವಳ ಬಗ್ಗೆ ಸುಳಿವು ಸಿಗಲಿಲ್ಲ. ಪೊಲೀಸ್ ಕಂಟ್ರೋಲ್ ರೂಮ್‌ಗೆ ಫೋಟೋ ಮತ್ತು ಮಾಹಿತಿ ಕಳಿಸಲಾಗಿದೆ ಎಂಬುದು ಮುಖ್ಯ.

●●●

ಬಂಗಲೆಯ ಕೊಠಡಿ! ರಾತ್ರಿ ಒಂಭತ್ತು ಗಂಟೆ. ಆ ರೂಮಿನಲ್ಲಿ ಅಳುತ್ತಿರುವ ಧ್ವನಿ ಕೇಳಿ ಬರುತ್ತಿದೆ. ಎದುರಿಗೆ ಇರುವ ಕನ್ನಡಿಯಲ್ಲಿ ಅವಳ ಪ್ರತಿರೂಪ ಕಾಣುತ್ತಿದೆ. ತಲೆ ಬೋಳಾಗಿದೆ. ಮುಖ, ಕತ್ತಿನ ಭಾಗ, ತೋಳುಗಳಲ್ಲಿ ಅಲ್ಪಸ್ವಲ್ಪ ಕಲೆ ಉಳಿದಿದೆ. ಬಣ್ಣಗಳ ಕಲೆ! ಹಸಿರು-ನೀಲಿ-ಕೆಂಪು-ಹಳದಿ.

ಅವಳು ವ್ಯಾನಿಟಿ ಬ್ಯಾಗ್‌ನಿಂದ ಸಿಡಿ ತೆಗೆದು ಸಿಸ್ಟಮ್‌ಗೆ ಹಾಕಿ ಪ್ಲೇ ಮಾಡಿದಳು. ಆ ದೃಶ್ಯ ಬರುತ್ತಿದೆ. ಅವಳು ತೂರಾಡುತ್ತಿದ್ದಾಳೆ. ಕುಡಿತದ ಅಮಲೇರಿದೆ. ಅವಳು ವಿಲಕ್ಷಣ ರೀತಿಯಲ್ಲಿ ಕುಣಿಯುತ್ತಿದ್ದಾಳೆ. ಅವಳು ಆಗ ಹೇಗಿದ್ದಾಳೆ. ದೇಹ ಬೆತ್ತಲಾಗಿದೆ. ದೇಹದ ತುಂಬಾ ನಾಲ್ಕು ಬಣ್ಣಗಳ ಪಟ್ಟೆ ಬಳಿಯಲಾಗಿದೆ. ತಲೆ ಬೋಳಾಗಿದೆ. ಅವಳು ಕುಣಿಯುತ್ತಲೇ ಇದ್ದಾಳೆ. ಹತ್ತು ನಿಮಿಷಗಳ ನಂತರ ದೃಶ್ಯ ಅಂತ್ಯಗೊಂಡಿತು.

"ರೂಮಿನ ಬಾಗಿಲನ್ನು ಬಡಿಯುತ್ತಿರುವ ಶಬ್ದ ಕೇಳಿ ಅವಳು ರೇಗಿದಳು.

"ಯಾರೂ ಒಳಗೆ ಬರ್‍ಬೇಡಿ."

"ನಾನು ಬಾಗಿಲು ತೆಗೆಯೋಲ್ಲ."

ಅವಳು ಕಿರುಚುವ ರೀತಿ ಹೇಳಿದಳು.

ತಂದೆ-ತಾಯಿ ಗಾಬರಿಯಿಂದ "ನಮಗೆ ಭಯ ಆಗ್ತಿದೆ. ನೀನು ಕೆಟ್ಟ ಆಲೋಚನೆ ಮಾಡಿ ದುಡುಕಬೇಡ."

ಅವಳು ಪುನಹ ರೇಗಿದಳು.

"ನಾನು ಸಾಯೋಲ್ಲ. ಎರಡು ದಿವಸ ನನ್ನನ್ನು ಯಾರೂ ಮಾತಾಡಿಸ್ಬೇಡಿ."

ಅವಳು ಖ್ಯಾತ ಸೀರಿಯಲ್ ನಟಿ ರೂಪಕಲಾ ಎಂಬ ಚೆಲುವೆ...!

●●●

ನಗರದ ಬಂಗಲೆಯೊಂದರ ಏಕಾಂತ ಕೊಠಡಿಯಲ್ಲಿ ಅವನಿದ್ದಾನೆ. ಬೆಡ್‌ರೂಮ್ ಬೇರೆ. ಏಕಾಂತ ಕೊಠಡಿ ಬೇರೆ. ಬೆಡ್‌ರೂಮಲ್ಲಿ ಮಲಗೋದು ಅಥವಾ ಲಘು ವಿಶ್ರಾಂತಿಗಾಗಿ ಉಪಯೋಗಿಸಿಕೊಳ್ಳುತ್ತಾರೆ. ಆದರೆ ಈ ವ್ಯಕ್ತಿ ಏಕಾಂತ ಕೊಠಡಿಯನ್ನು ಪ್ರತ್ಯೇಕವಾದ ಜಾಗದಲ್ಲಿ ಕಟ್ಟಿಸಿಕೊಂಡಿದ್ದಾನೆ.

ಹಗಲಲ್ಲಿ ಆಗಲಿ, ರಾತ್ರಿಯಲ್ಲೇ ಆಗಲಿ ಪರಮಾಪ್ತ ಸಂಬಂಧಿಕರಿಗೂ ಪ್ರವೇಶ ಇಲ್ಲ. ಅವನು ಇಲ್ಲದಿರುವಾಗ ಆ ಕೊಠಡಿ ಆಟೋ ಲಾಕ್ ಆಗಿರುತ್ತದೆ.

ಹೋಮ್ ಸ್ಕ್ರೀನ್ ಪರದೆಯ ಮೇಲೆ ದೃಶ್ಯ ಮೂಡಿ ಬರುತ್ತಿದೆ. ಅವನು ರೆಪ್ಪೆಯಾಡಿಸದೆ ನೋಡುತ್ತಿದ್ದಾನೆ ಮತ್ತು ನಗುತ್ತಿದ್ದಾನೆ. ಅದು ನಿಶ್ಯಬ್ದ ನಗು.

ಮುಖದ ಭಾವ ಹೇಗಿದೆ?

ಪೈಶಾಚಿಕ ಆನಂದವಿದೆ.

ಆ ಪರದೆಯಲ್ಲಿ ವಿಲಕ್ಷಣ ಎನಿಸುವ ಮತ್ತು ಒಂದು ರೀತಿ ಮನೋ ಮುಜುಗರ ಉಂಟು ಮಾಡುವಂತ ದೃಶ್ಯ ಬರುತ್ತಿದೆ. ಬೆತ್ತಲೆಯಾಗಿರುವ ಯುವತಿ ಕುಡಿತದ ಅಮಲಿನಲ್ಲಿ ತೂರಾಡುತ್ತಾ ಹೆಜ್ಜೆ ಹಾಕುತ್ತಿದ್ದಾಳೆ.

ಅವಳ ತಲೆ ಬೋಳಾಗಿದೆ. ದೇಹದ ಹಲವಾರು ಕಡೆ ಕೆಂಪು, ಹಸಿರು, ಹಳದಿ ಮತ್ತು ನೀಲಿ ಬಣ್ಣದ ಪಟ್ಟೆಗಳು ಕಂಡು ಬರುತ್ತಿದೆ.

ಅವನು ವಿಚಿತ್ರವಾಗಿ ಆಡುತ್ತಿದ್ದಾನೆ. ಗಹಿಗಹಿ ನಗುತ್ತಿದ್ದಾನೆ. ಆ ದೃಶ್ಯ ನೋಡುತ್ತಾ ಅವನೂ ಸಹ ಕೆಟ್ಟ ರೀತಿಯಲ್ಲಿ ಕುಣಿಯಲಾರಂಭಿಸಿದನು.

ಅವನು ದೇವಕಾಂತರಾವ್! ಇದು ಜನ್ಮನಾಮಧೇಯ. ಅವನು ಪ್ರಸಿದ್ಧನಾಗಿರೋದು ರೈಮಂಡ್ ರೇವಂತ್ ಎಂಬ ಹೆಸರಿನಿಂದ.

●●●

ಎರಡು ದಿನಗಳಾಯಿತು.

ರೂಪಕಲಾಳ ಭಾವೋದ್ವೇಗ ಕಡಿಮೆಯಾಗಿದೆ. ಅವಳ ರೂಮಿಗೆ ತಂದೆ-ತಾಯಿ ಮತ್ತು ಅಂಕಲ್ ಮಾತ್ರ ಹೋಗುತ್ತಾರೆ. ಅವಳನ್ನು ಸಂತೈಸಿದ್ದಾರೆ. ಅವಳ ತಲೆಗೆ ಸರಿ ಹೋಗುವಂತ ಕೃತಕವಾದ ಜಡೆ, ವಿಶೇಷವಾದ ಟೋಪನ್ ಅನ್ನು ಬೇರೆ ರಾಜ್ಯದಿಂದ ತರಿಸಿದ್ದಾರೆ.

ಪ್ರಾರಂಭದಲ್ಲಿ ಕಿರಿಕಿರಿ ಎನಿಸಿತು. ಒಂದು ರೀತಿಯಲ್ಲಿ ಮುಜುಗರ ಆಯಿತು. ಕ್ರಮೇಣ ಅದಕ್ಕೆ ಹೊಂದಿಕೊಂಡಳು. ಅವಳ ತಲೆ ಬೋಳಾಗಿದೆ ಎಂದು ಯಾರಿಗೂ ಅನಿಸುತ್ತಿರಲಿಲ್ಲ. ಆದರೂ ಅವಳು ಶೂಟಿಂಗ್‌ಗೆ ಒಂದು ವಾರ ಹೋಗಲಿಲ್ಲ. ಆ ಘಟನೆಯನ್ನು ಮರೆತು ಅವಳು ಸಹಜ ಸ್ಥಿತಿಗೆ ಬಂದ ನಂತರ ಹೋಗಲಾರಂಭಿಸಿದಳು.

ಪೊಲೀಸರಿಗೆ ವಿಷಯ ತಿಳಿಸಿ ಕಂಪ್ಲೇಂಟ್ ವಾಪಸ್ ಪಡೆದರು. ಪೊಲೀಸರು ಇವಳನ್ನು ಬಾಯಿ ಬಿಡಿಸಲು ಹಲವಾರು ಪ್ರಶ್ನೆಗಳನ್ನು ಬೇರೆ ಬೇರೆ ರೀತಿ ಕೇಳಿದರು. ಅವಳು ಹಾರಿಕೆಯ ಉತ್ತರ ನೀಡಿದಳೇ ವಿನಹ ನಿಜ ಹೇಳಲಿಲ್ಲ.

ರಾತ್ರಿ ಒಂಭತ್ತು ಗಂಟೆ. ಫೋನ್ ಕಾಲ್ ಬಂದಿತು. ಮಿಸ್ಟರ್ ಎಕ್ಸ್‌ವೈಝೆಡ್ ಎಂಬ ಹೆಸರು ಬಂದಿದೆ.

ಅವಳು ಚಡಪಡಿಸಿದಳು. ಕೆಲವು ಕ್ಷಣಗಳ ನಂತರ ಅಟೆಂಡ್ ಮಾಡಿದಳು.

"ಪೊಲೀಸರು ಬಂದಿದ್ದರಂತೆ."

ಅವಳು ಮೆಲ್ಲಗೆ "ಹೌದು."

"ನನ್ನ ಬಗ್ಗೆ ಏನಾದ್ರೂ ಹೇಳಿದ್ಯ?"

"ಇಲ್ಲ... ಹೇಳಿಲ್ಲ."

"ಬಾಯಿ ಬಿಟ್ಟರೆ ವೀಡಿಯೋ ದೃಶ್ಯಗಳು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತೆ. ಈ ದೃಶ್ಯಗಳಲ್ಲಿ ನನ್ನ ಬಗ್ಗೆ ಯಾವ ಸುಳಿವು ಸಿಗೋಲ್ಲ. ನಿನ್ನ ಗೌರವ, ಮರ್ಯಾದೆಗೆ ಕಳಂಕ ಬರುತ್ತೆ. ನಿನ್ನ ಪ್ರಖ್ಯಾತಿಗೆ ಅಪಖ್ಯಾತಿ ಬರುತ್ತೆ."

☞14

13 ☜

ಅವಳಿಂದ ಪ್ರತಿಕ್ರಿಯೆ ಇಲ್ಲ.''

''ಇನ್ನು ನನ್ನನ್ನು ಮರೆತುಬಿಡು.''

ಫೋನ್ ಲಿಂಕ್ ಕಟ್ ಆಗಿದೆ.''

ಅವಳು ಗೊಣಗಿಕೊಂಡಳು.

ರೈಮಂತ್ ರೇವಂತ್...!

ಶ್ರೀಮಂತ ಮತ್ತು ಪ್ರಭಾವಶಾಲಿ ನಟ, ವಿಲನ್... ಪ್ರಾರಂಭದಲ್ಲಿ ಧಾರಾವಾಹಿಗಳಲ್ಲಿ ಮತ್ತು ನಂತರ ಸಿನಿಮಾಗಳಲ್ಲಿ ಅಭಿನಯಿಸಿ ಹೆಸರು ಮಾಡಿದ್ದಾನೆ.

ಕೋಟಿಗಳ ಆಸ್ತಿ ಇರುವ ಇವನು ಹಲವಾರು ಸಿನಿಮಾಗಳಿಗೆ ಫೈನಾನ್ಸ್ ಮಾಡಿದ್ದಾನೆ.

ವಿಶೇಷತೆ ಏನು?

ವಿಲಕ್ಷಣವಾದ ಭಯಂಕರ ಎನಿಸುವ ಬಾಹ್ಯರೂಪವೇ ವಿಶೇಷತೆ!

ಅವನು ಸಿನಿಮಾಗಳಲ್ಲಿ ಮೇಕಪ್ ಮಾಡಿಕೊಳ್ಳುವ ಅಗತ್ಯ ಕಂಡು ಬರೋಲ್ಲ. ಸಹಜವಾಗಿಯೇ ವಿಲನ್ ರೀತಿಯಲ್ಲಿ ಕಂಡು ಬರುತ್ತಾನೆ.

ಸಹನಟಿಯರು, ಹೀರೋಯಿನ್‌ಗಳು ಇವನನ್ನು ಹತ್ತಿರದಿಂದ ನೋಡುವಾಗ ಮತ್ತು ಅಭಿನಯಿಸುವಾಗ ಮುಜುಗರ ಪಡುತ್ತಾರೆ ಮತ್ತು ಅಂಜಿಕೊಂಡು ಹಿಂದೆ ಸರಿಯುತ್ತಾರೆ.

ಇವಳು ಅಂದರೆ ರೂಪಕಲಾ ಏನು ಇವನ ಜೊತೆ ಅಭಿನಯಿಸಿರಲಿಲ್ಲ. ಇತ್ತೀಚೆಗೆ ಅವಳು ದೊಡ್ಡ ಬ್ಯಾನರ್‌ನ ಸಿನಿಮಾಕ್ಕೆ ನಾಯಕಿಯಾಗಿ ಸೆಲೆಕ್ಟ್ ಆಗಿದ್ದಳು.

ಪ್ರೊಡ್ಯೂಸರ್ ರೈಮಂಡ್ ರೇವಂತ್!

ಇವಳು ಅಭಿನಯಿಸುತ್ತಿರುವ 'ಸೌಭಾಗ್ಯವತಿ' ಟಿ.ವಿ. ಸೀರಿಯಲ್‌ಗೆ ಫೈನಾನ್ಸ್ ಮಾಡಿದ್ದನು. ಆಗಾಗ ಶೂಟಿಂಗ್‌ಗೆ ಬರುತ್ತಿದ್ದನು. ಇವನು ಬಂದ ಕೂಡಲೇ ಎಲ್ಲರೂ ತಮ್ಮ ಕೆಲಸ ನಿಲ್ಲಿಸಿ ಗೌರವ ಕೊಡುತ್ತಿದ್ದರು.

ಅಂತಹ ಪ್ರಭಾವಶಾಲಿ ಶ್ರೀಮಂತ ಮತ್ತು ನಟ ಭಯಂಕರ ಸಾಮಾನ್ಯ ನಟಿಗೆ ಯಾಕೆ ಟಾರ್ಚರ್ ಮಾಡಿದ್ದಾನೆ!

●●●

ಟಿ.ವಿ. ಚಾನಲ್‌ಗಳ ಪ್ರೋಗ್ರಾಂಗಳಲ್ಲಿ ಆ್ಯಂಕರ್ ಆಗಿ ಕೆಲಸ ಮಾಡುತ್ತಾಳೆ. ಅವಳು ತನ್ನ ಸೌಂದರ್ಯ ಮತ್ತು ನಗು, ಆಕರ್ಷಕ ಶೈಲಿಯ ಹಾವಭಾವಗಳು ಮತ್ತು ಮಾತಾಡುವ ಶೈಲಿಯಿಂದ ಪ್ರಸಿದ್ಧಳಾಗಿದ್ದಾಳೆ.

ಪ್ರೋಗ್ರಾಂ ಶೂಟಿಂಗ್ ಮುಗಿಸಿಕೊಂಡು ಕಾರಲ್ಲಿ ಮನೆಗೆ ಬರುತ್ತಿರುವಾಗ ಫೋನ್ ಕಾಲ್ ಬಂದಿತು. ಡ್ರೈವರ್ ಇದ್ದಾನೆ. ಅನ್‌ನೋನ್ ನಂಬರ್‌ನಿಂದ ಫೋನ್‌ಕಾಲ್ ಆಗಿದ್ದರಿಂದ ಅಟೆಂಡ್ ಮಾಡಲಿಲ್ಲ.

ಮೆಸೇಜ್ ಬಂದಿತು.

ಮಂದಾರ... ನನ್ನ ಪ್ರಶ್ನೆಗೆ ನೀನು ಉತ್ತರಿಸಲಿಲ್ಲ.

ಅವಳು ಸ್ವಲ್ಪ ಹೊತ್ತಿನ ನಂತರ ಮೆಸೇಜ್ ಮಾಡಿದಳು. ಇವಳ ಪರಿಣಾಮ ಎರಡು ದಿನಗಳ ನಂತರ ಇವಳ ಬದುಕಲ್ಲಿ ಆಟ ಆಡಿತು.

●●●

ಆ್ಯಂಕರ್ ಆಗಿದ್ದ ಮಂದಾರಳಿಗೆ ಒಂದು ವಾರ ಶೂಟಿಂಗ್ ಇರಲಿಲ್ಲ. ಹಾಗಾಗಿ ಅವಳು ತನ್ನವರ ಜೊತೆ, ಮೂರು ದಿನಗಳ ಟೂರ್ ಪ್ರೋಗ್ರಾಂ ಫಿಕ್ಸ್ ಮಾಡಿದ್ದಾಳೆ.

ಮೊದಲ ದಿನ ಸಂಜೆ, ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ ನಂತರ ಲಾಡ್ಜ್ ಕಡೆ ಹೊರಟರು.

ರಾತ್ರಿ ಏಳೂವರೆ ಆಗಿದೆ. ಹೋಟೆಲ್‌ನ ಎಡ-ಬಲಗಳಲ್ಲಿರುವ ಗಾರ್ಡನ್‌ನ ನಡುವೆ ಹೆಜ್ಜೆ ಹಾಕುತ್ತಿದ್ದಾರೆ. ಐದು ನಿಮಿಷಗಳಾಯಿತು. ಎಲ್ಲರೂ ಹೋಟೆಲ್‌ಗೆ ಬಂದರು. ರೂಮಿಗೆ ಬಂದ ಮೇಲೆ ಅವರಿಗೆ ಗೊತ್ತಾಯಿತು. ಮಂದಾರ ಬಂದಿರಲಿಲ್ಲ...!

ತಂದೆ-ತಾಯಿ ಮತ್ತು ಉಳಿದ ಸಂಬಂಧಿಕರು ಗಾಬರಿಯಾಗಿದ್ದಾರೆ. ಎಲ್ಲರೂ ಹೊರಗೆ ಬಂದು ಹೋಟೆಲ್‌ನ ಒಳಗೆ ಮತ್ತು ಹೊರಗೆ ಹುಡುಕುತ್ತಿದ್ದಾರೆ.

ಅರ್ಧ ಗಂಟೆ ಕಳೆಯಿತು. ಮಂದಾರ ಪತ್ತೆ ಆಗಲಿಲ್ಲ! ಅವಳಿಗೆ ಫೋನ್ ಮಾಡಿದರು. ಮೊಬೈಲ್ ಸ್ವಿಚ್ ಆಫ್ ಆಗಿದೆ ಎಂಬ ಉತ್ತರ ಬಂದಿತು.

ಈಗೇನು ಮಾಡೋದು?

ಹೋಟೆಲ್ ಗಾರ್ಡನ್‌ನಲ್ಲಿ ಸ್ವಲ್ಪ ದೂರ ಇವರ ಜೊತೆ ಬಂದಿದ್ದವಳು ದಿಢೀರ್ ಅಂತ ಕಣ್ಮರೆ ಆಗಿದ್ದಾಳೆ. ಹೋಟೆಲ್‌ನ ಮ್ಯಾನೇಜರ್ ಜೊತೆ ಮಾತಾಡಿದರು.

ಎಲ್ಲಾ ಕಡೆ ಸಿ.ಸಿ. ಕ್ಯಾಮರಗಳನ್ನು ಅಳವಡಿಸಿದ್ದರಿಂದ ಸುಲಭವಾಯಿತು. ಟಿ.ವಿ. ಪರದೆ ರೀತಿ ಇರುವ ಸಿಸ್ಟಮ್‌ನಲ್ಲಿ ದೃಶ್ಯ ಕಂಡು ಬರುತ್ತಿದೆ.

ಗುರುತು ಸಿಗದಂತೆ ದೇಹದ ಎಂಭತ್ತು ಭಾಗವನ್ನು ಕವರ್ ಮಾಡಿಕೊಂಡು, ತುಂಬಾ ವಿಭಿನ್ನ ರೀತಿಯಲ್ಲಿ ಗೆಟಪ್ ಬದಲಿಸಿಕೊಂಡಿರುವ ವ್ಯಕ್ತಿ, ಮಂದಾರಳನ್ನು ತಬ್ಬಿ ಹಿಡಿದು ಬಾಯಿ ಮುಚ್ಚಿದ್ದಾನೆ ಮತ್ತು ಗಿಡಗಳ ನಡುವೆ ಎಳೆದುಕೊಂಡು ಹೋಗಿ ಪ್ರಜ್ಞೆ ತಪ್ಪಿಸಿದ್ದಾನೆ.

ನಂತರದ ದೃಶ್ಯ ಕಾಣಲಿಲ್ಲ. ಗಾರ್ಡನ್ ಮತ್ತು ಹೋಟೆಲ್‌ನ ಕಾಂಪೌಂಡ್ ಆವರಣದ ದೃಶ್ಯ ಕಾಣುತ್ತಿದೆ.

ಮಂದಾರಳನ್ನು ಅಪಹರಿಸಲಾಗಿದೆ.

●●●

ಪೊಲೀಸರಿಗೆ ಕಂಪ್ಲೆಂಟ್ ಕೊಡಬೇಡಿ ಮತ್ತು ಈ ಘಟನೆಯ ಬಗ್ಗೆ ಯಾರಿಗೂ ಹೇಳಬೇಡಿ. ಹೋಟೆಲ್‌ನವರಿಗೆ ಮತ್ತು ನಮ್ಮ ಜೊತೆ ಟೂರ್‌ಗೆ ಬಂದಿದ್ದ ಸಂಬಂಧಿಕರಿಗೆಲ್ಲಾ ಗಂಭೀರವಾದ ಎಚ್ಚರಿಕೆ ನೀಡಿದರು.

ಮಂದಾರಳ ಮೊಬೈಲ್‌ನಿಂದ ಅವಳ ತಂದೆ ಮೆಸೇಜ್ ಬಂದಿದೆ. ಎಲ್ಲರೂ ಆತಂಕಗೊಂಡಿದ್ದಾರೆ. ಮಗಳ ಮೇಲೆ ಅತ್ಯಾಚಾರ ಮಾಡಬಹುದೆ ಅಥವಾ ಹಣಕ್ಕಾಗಿ ಡಿಮ್ಯಾಂಡ್ ಮಾಡಬಹುದೆ?

ಎರಡು ದಿನಗಳು ಕಳೆ ಭಯ, ಆತಂಕ ಉದ್ವಿಗ್ನತೆಯಲ್ಲಿ ಕಳೆದಿದ್ದಾರೆ. ಟೂರ್ ಪ್ರೋಗ್ರಾಂ ಮೊಟಕು ಮಾಡಿ ಊರಿಗೆ ಬಂದಿದ್ದಾರೆ.

●●●

ರಾತ್ರಿ ಹತ್ತು ಗಂಟೆ. ಮಂದಾರಳಿಗೆ ಎಚ್ಚರವಾಗಿದೆ. ವಿಪರೀತ ಕುಡಿತದ ಅಮಲಿನ ಪ್ರಭಾವದಿಂದ ತಲೆ ಒಳಗೆ ಒಂದು ರೀತಿ 'ಧೀಂ... ಧೀಂ' ಎನ್ನುವ ರೀತಿ ಮಿಡಿಯುತ್ತಿದೆ. ಅವಳು ಕಷ್ಟದಿಂದ ಎದ್ದು ಕುಳಿತಳು. ಎದುರಿಗೆ ನಿಂತಿರುವ ವ್ಯಕ್ತಿಗಳನ್ನು ಗುರುತಿಸಿದಳು. ತಂದೆ-ತಾಯಿ ತಮ್ಮ ನಿಂತಿದ್ದಾರೆ.

ತಂದೆ, ತಾಯಿ ಮತ್ತು ಅಂಕಲ್ ಅವಳಿಗೆ ಅಗತ್ಯವಾದ ಉಪಚಾರ ಮಾಡಿ, ಆಹಾರದ ವ್ಯವಸ್ಥೆ ಮಾಡಿ, ಎಲ್ಲರೂ ಹೊರಗೆ ಬಂದರು.

ಅವಳು ಮಂಚದಿಂದ ಇಳಿದು ಬಾತ್‌ರೂಮಿನ ಕಡೆ ಹೊರಟಳು. ಆಕಸ್ಮಿಕವಾಗಿ ಕನ್ನಡಿಯಲ್ಲಿ ಆ ದೃಶ್ಯ ಕಂಡು ಬಂದಿತು. ಅವಳು ಕಿಟಾರನೆ ಕಿರುಚಿದಳು. ತಲೆಯಲ್ಲಿ ಚಕ್ರ ತಿರುಗುತ್ತಿರುವಂತೆ ಅನುಭವ ಆಯಿತು. ತೇಲುಗಣ್ಣು ಮಾಡಿದಳು. ನಿಂತಲ್ಲೇ ಕುಸಿಯುತ್ತಿದ್ದಾಳೆ. ಪ್ರಜ್ಞಾಶೂನ್ಯಳಾಗಿದ್ದಾಳೆ.

ಅವಳ ತಲೆ ಬೋಳಾಗಿದೆ. ದೇಹದ ಹಲವಾರು ಕಡೆಗಳಲ್ಲಿ ಕೆಂಪು, ನೀಲಿ, ಹಸಿರು, ಹಳದಿ ಬಣ್ಣದ ತಲೆಗಳಿವೆ.

●●●

ಎಲ್ಲರೂ ಗಾಬರಿ, ಭಯದಿಂದ ಅವಳ ರೂಮಿಗೆ ಬಂದಿದ್ದಾರೆ. ಅವಳು ತಲೆ ಚಚ್ಚಿಕೊಳ್ಳುತ್ತಾ, ನೆಲದ ಮೇಲೆ ಬಿದ್ದು ಉರುಳಾಡುತ್ತಿದ್ದಾಳೆ.

ರಾತ್ರಿ ಒಂದು ಗಂಟೆ ವೇಳೆಯಲ್ಲಿ ಕಾರಿನ ಹಾರನ್ ಶಬ್ದ ಕೇಳಿಸಿತ್ತು. ಮನೆಯವರು ಡೋರ್ ಓಪನ್ ಮಾಡಿ ಹೊರಗೆ ಬರುವುದರಲ್ಲಿ ಕಾರು ಹೊರಟು ಹೋಗಿತ್ತು.

ಮನೆ ಮುಂಭಾಗದ ಕಲ್ಲು ಹಾಸಿನ ಮೇಲೆ ಮಂದಾರಳ ಬೆತ್ತಲೆ ದೇಹ ಇದ್ದದ್ದನ್ನು ಕಂಡು ಗಾಬರಿ, ಭಯದಿಂದ ಒಳಗೆ ಕರೆದುಕೊಂಡು ಬಂದಿದ್ದರು.

ಅವಳ ಬಾಯಿಂದ ಮದ್ಯಪಾನದ ಕೆಟ್ಟ ವಾಸನೆ ಬರುತ್ತಿತ್ತು. ಬೆತ್ತಲೆ ದೇಹದ ತುಂಬಾ ಬಣ್ಣಗಳ ಪಟ್ಟೆ ಬಳಿದಿದ್ದರು. ಅವಳ ದೇಹದ ತುಂಬಾ ಅಂಟಿರುವ ಬಣ್ಣಗಳನ್ನು ಆಯಿಲ್ ಪಾಲೀಶ್ ಮಾಡಿ ಒರೆಸಿದ್ದರು. ನಂತರ ಬಿಸಿ ನೀರನ್ನು ಸ್ಪ್ರೇ ಮಾಡಿ ಚೆನ್ನಾಗಿ ಒರೆಸಿದ್ದರು ಮತ್ತು ಒಳಉಡುಪು ಮತ್ತು ನೈಟಿ ಹಾಕಿದ್ದರು.

ಅವಳೀಗ ತಡವಾಗಿ ಎಚ್ಚರವಾಗಿತ್ತು ಮತ್ತು ವಿಕೃತಗೊಂಡಿರುವ ತನ್ನ ರೂಪವನ್ನು ಕಂಡು ಭಾವ ಉನ್ಮಾದಕ್ಕೆ ಒಳಗಾಗಿ ಕಿರುಚಿಕೊಂಡಿದ್ದಳು.

ಅವಳು ರೂಮಿನಿಂದ ಒಂದು ವಾರ ಹೊರಗೆ ಬರಲಿಲ್ಲ. ಅವಳನ್ನು ಭೇಟಿ ಮಾಡಲು ಸಂಬಂಧಿಕರಿಗೆ ಆಗಲಿ, ಸಿನಿಮಾದವರಿಗೆ ಆಗಲಿ ಅವಕಾಶ ಕೊಡಲಿಲ್ಲ.

ಪೊಲೀಸರಿಗೆ ಕಂಪ್ಲೆಂಟ್ ಕೊಟ್ಟಿದ್ದರಿಂದ ಅವರಿಗೆ ತಿಳಿಸಲೇ ಬೇಕಾಯಿತು. ಪೊಲೀಸ್ ಅಧಿಕಾರಿ ಬಂದು ಅವಳನ್ನು ಭೇಟಿ ಮಾಡಿ ಮಾತಾಡಿದ್ದರು.

ಅವಳ ಹೇಳಿಕೆ ಏನು?

ನಾನು ನನ್ನವರ ಜೊತೆ ಪ್ರವಾಸಕ್ಕೆ ಹೋಗಿದ್ದಾಗ ಯಾಕೋ ಪ್ರಜ್ಞೆ ತಪ್ಪಿಸಿದ್ದರು. ಏಕಾಂತ ಗೃಹದಲ್ಲಿ ಏನೇನು ನಡೆಯಿತು ಅಂತ ನನಗೆ ಗೊತ್ತಿಲ್ಲ. ನಾನು ಆಗ ಕುಡಿತದ ಅಮಲಿನಲ್ಲಿದ್ದೆ. ಎರಡು ರಾತ್ರಿ ಒಂದು ಹಗಲು ನಾನು ಅಮಲಿನಲ್ಲಿದ್ದೆ.

''ಅತ್ಯಾಚಾರ ಮಾಡಿದ್ರಾ?''

''ಇಲ್ಲ... ಆ ರೀತಿ ಮಾಡಿಲ್ಲ. ನನ್ನ ಸೌಂದರ್ಯ ವಿಕೃತಗೊಳಿಸಿ, ನನ್ನಿಂದ ಹುಚ್ಚು ಆಟಗಳನ್ನು ಆಡಿಸಿದ್ದಾರೆ.''

''ಅವರು ಯಾರು ಎಂಬುದರ ಬಗ್ಗೆ ಸುಳಿವು ಏನಾದರೂ ಗೊತ್ತಾಗಿರುವುದೆ?''

''ಇಲ್ಲ... ಇಲ್ಲ ಸಾರ್.''

ಅವಳು ನಿಜಸಂಗತಿ ಹೇಳಿರಲಿಲ್ಲ ಮತ್ತು ತನಗೆ ಕಳಿಸಿದ್ದ ವೀಡಿಯೋ ಕ್ಲಿಪ್ ಬಗ್ಗೆ ಹೇಳಲಿಲ್ಲ. ಅಮಲಿನಲ್ಲಿ ಹುಚ್ಚು ಹುಚ್ಚಾಗಿ ಕುಣಿದಿದ್ದ ದೃಶ್ಯ ವೀಡಿಯೋ ಕವರೇಜ್ ಮಾಡಿದ್ದರು. ಈ ರಹಸ್ಯ ಶೇಷ ಪ್ರಶ್ನೆಯಾಗಿದೆ!

ಪೊಲೀಸರು ಅವಳ ತಂದೆ-ತಾಯಿ ಮತ್ತು ಹತ್ತಿರದ ಸಂಬಂಧಿಕರನ್ನು ವಿಚಾರಣೆ ಮಾಡಿದರು. ಈ ಮ್ಯಾಡ್ ಕ್ರಿಮಿನಲ್ ಅನ್ನು ಪತ್ತೆ ಮಾಡುವಂತ ಸುಳಿವು ಸಿಗಲಿಲ್ಲ.

●●●

ಬೆಡ್‌ರೂಮಿನಲ್ಲಿರುವ ಕನ್ನಡಿಯ ಮೇಲೆ ಕೆಂಪು ಬಣ್ಣದ ಬಟ್ಟೆ ಹಾಕಿ ಅದು ಜಾರದಂತೆ ಪಿನ್ ಮಾಡಿದ್ದಾರೆ. ಅವಳು ಎದ್ದು ತಿರುಗಾಡುವಾಗ ರೂಮಲ್ಲಿರುವ ಕನ್ನಡಿಯ ದೃಶ್ಯ ಕಾಣಬಾರದು. ವಿಕೃತಗೊಂಡಿರುವ ತನ್ನ ರೂಪ ಕಂಡು ಅವಳ ಭಾವ ಉನ್ಮಾದಕ್ಕೆ ಒಳಗಾಗುತ್ತಾಳೆ. ಅಂತಹ ಸ್ಥಿತಿಯಲ್ಲಿ ಅವಳನ್ನು ಕಂಟ್ರೋಲ್ ಮಾಡೋದು ಮನೆಯವರಿಗೆ ಕಷ್ಟ ಆಗುತ್ತದೆ.

●●●

ಬೆಳಗಿನ ಹತ್ತು ಗಂಟೆ. ಮಂದಾರ ತಿಂಡಿ ತಿಂದು ಟಿ.ವಿ. ಪ್ರೋಗಾರಂ ನೋಡುತ್ತಿದ್ದಾಳೆ. ಸದಾ ರೂಮಿನಲ್ಲಿ ಒಂಟಿಯಾಗಿದ್ದರೆ ಮನೋ ವ್ಯಗ್ರತೆ ಉಂಟಾಗುತ್ತದೆ ಎಂದು ಟಿ.ವಿ. ತಂದು ಅಲ್ಲಿ ಫಿಕ್ಸ್ ಮಾಡಿದ್ದಾರೆ. ಆಗಾಗ ತಂದೆ-ತಾಯಿ ಅಥವಾ ತಮ್ಮ ಬಂದು ಅವಳ ಜೊತೆ ಇರುತ್ತಾರೆ.

ಈಗ ಅಲ್ಲಿ ಯಾರೂ ಇರಲಿಲ್ಲ. ಫೋನ್ ಕಾಲ್ ಬಂದಿತು. ಲೈಟ್ ಬ್ಲಿಂಕ್ ಆಗುತ್ತಿದೆ. ರೈಮಂಡ್ ಕಾಲಿಂಗ್...!

ಅವಳು ಬೆಚ್ಚಿಬಿದ್ದಳು. ಆ ಕ್ಷಣಗಳಲ್ಲಿ ಅವಳ ಮುಖದಲ್ಲಿ ವ್ಯಗ್ರತೆ ಉಂಟಾಯಿತು. ಆದರೆ ಫೋನ್ ಕಾಲ್ ಅಟೆಂಡ್ ಮಾಡೋದು ಅವಳಿಗೆ ಅನಿವಾರ್ಯ ಆಗಿತ್ತು. ಇವಳು ಮನೆಗೆ ಬಂದ ಮೇಲೆ ಅವನು ಮೂರನೆಯ ಸಲ ಫೋನ್ ಮಾಡಿದ್ದಾನೆ. ಅವಳು ಮೊಬೈಲ್ ಎತ್ತಿಕೊಂಡಳು. ವಳ ಕೈ ನಡುಗುತ್ತಿದೆ. ಮುಖದಲ್ಲಿ ಬೆವರಾಡುತ್ತಿದೆ.

''ಹಲೋ... ಹಲೋ ಮಂದಾರ... ಬ್ಯುಟಿ ಕ್ವೀನ್ ಆಫ್ ಆಂಧ್ರ.''

ಅವಳ ಮುಖ ಕೆಂಪಾಯಿತು.

ಕೋಪದ ಜೊತೆ ಆಕ್ರೋಶ ಬೆರೆತಿದೆ.

ಆದರೆ ಪ್ರತಿಭಟಿಸಲಾರಳು.

''ಹಲೋ... ಹಲೋ... ಯಾಕೆ ಮಾತಾಡುತ್ತಿಲ್ಲ?''

''ವಿಷಯ ಹೇಳಿ.''

ಗೊಗ್ಗರು ಧ್ವನಿಯಲ್ಲಿ ಹೇಳಿದಳು.

''ಪೊಲೀಸರು ವಿಚಾರಣೆಗೆ ಬಂದಿದ್ದರಂತೆ.''

''ಹೌದು ಬಂದಿದ್ದರು.''

''ನನ್ನ ಬಗ್ಗೆ ನಿನಗೆ ಗೊತ್ತಿದೆ. ಪೊಲೀಸರಿಗೆ ಸುಳಿವು ಕೊಟ್ರಾ?''

ಅವಳು ಮೆಲ್ಲಗೆ ''ಇಲ್ಲ'' ಎಂದಳು.

ರೈಮಂಡ್ ಗಂಭೀರವಾಗಿ ''ಆ ರೀತಿ ಆಟ ಆಡಿದರೆ ನಿನ್ನ ಹುಚ್ಚು ಕುಣಿತ, ವಿಕೃತ ನರ್ತನ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತೆ.''

''ನನಗೆ ಗೊತ್ತಿದೆ.''

''ಬಾಯಿಗೆ ಬೀಗ ಹಾಕಿಕೊಂಡಿದ್ದರೆ ಯಾವುದೂ ಬಹಿರಂಗ ಆಗೋಲ್ಲ.''

''ಆಗಲಿ... ಆಗಲಿ...''

ಫೋನ್ ಲಿಂಕ್ ಕಟ್ ಆಗಿದೆ.

ಮಂದಾರಳಿಗೆ ಕಡು ಕೋಪ, ಆಕ್ರೋಶ ಅವನ ಮೇಲೆ ಉಂಟಾಗಿದೆ. ಅವಳು ಒಂದು ರೀತಿಯಲ್ಲಿ ತತ್ತರಿಸುತ್ತಿದ್ದಾಳೆ.

●●●

ಕಾರೊಂದು ವೇಗವಾಗಿ ಬರುತ್ತಿದೆ. ಅವಳು ಡ್ರೈವಿಂಗ್ ಮಾಡುತ್ತಿದ್ದಾಳೆ. ಅವಳು ಅಶ್ವಿನಿಗೌಡ! ಆಂಧ್ರ ರಾಜ್ಯದ ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದಿದ್ದಾಳೆ. ಸೌಂದರ್ಯವೇ ಅವಳ ವಿಶೇಷತೆ ಅಲ್ಲ. ಅವಳು ಕರಾಟೆ ಕಲಿತಿದ್ದಾಳೆ. ಅವಳು ಕ್ರೀಡಾಪಟು. ಅವಳು ಪ್ರೈವೇಟ್ ಕಂಪನಿಯಲ್ಲಿ ಕೆಲಸ ಮಾಡುತ್ತಾಳೆ. ಅವಳಿಗೆ ಮದುವೆ ಫಿಕ್ಸ್ ಆಗಿದೆ. ಮೂರು ತಿಂಗಳಿನ ನಂತರ ಮದುವೆಯ ಶುಭಕಾರ್ಯ ನಡೆಯಲಿದೆ.

ಆಫೀಸ್‌ನಿಂದ ಹೊರಟು ಹತ್ತು ನಿಮಿಷಗಳಾಗಿದೆ. ಏಕೋ ಏನೋ ತಲೆ ತಿರುಗಿದಂತೆ ಆಗಿದ್ದರಿಂದ ಹೆದರಿದಳು. ಇಡೀ ಶರೀರ ಹಗುರವಾಗಿದೆ. ಗಾಳಿಯಲ್ಲಿ ತೇಲಾಡುತ್ತಿರುವ ಅನುಭವ ಆಗುತ್ತಿದೆ. ಅವಳಿಗೆ ವಿಲ್ ಪವರ್ ಇದೆ. ಹಾಗಾಗಿ ತುಂಬಾ ಕಷ್ಟದಿಂದ ಕಂಟ್ರೋಲ್ ಮಾಡಿಕೊಂಡಳು.

ಆಗ ಅಲ್ಲಿಗೆ ಬಂದ ಕಾರೊಂದರಿಂದ ಒಬ್ಬ ಇಳಿದನು. ಅಶ್ವಿನಿಯನ್ನು ತಬ್ಬಿ ಹಿಡಿದುಕೊಂಡು ಪ್ರಜ್ಞೆ, ತಪ್ಪಿಸಲು ಪ್ರಯತ್ನ ಮಾಡಿದನು. ಅವಳು ಪ್ರತಿಭಟಿಸುತ್ತಿದ್ದಾಳೆ. ಆ ಕಿಡ್ನಾಪರ್ ತುಂಬಾ ಕಷ್ಟದಿಂದ ಆ ಬಂಗಲೆಗೆ ಕರೆದುಕೊಂಡು ಬಂದನು. ಏಕಾಂತ ಗೃಹ. ಅವಳು ಪ್ರಜ್ಞೆ ಕಳೆದುಕೊಂಡಿರಲಿಲ್ಲ. ಆಫೀಸ್‌ನಿಂದ ಹೊರಡುವ ಮೊದಲು ಬಿಸಿ ಬಾದಾಮಿ ಹಾಲು-ಸ್ವೀಟ್-ಕಾರ ಕೊಟ್ಟಿದ್ದರು. ಎಲ್ಲರಂತೆ ಇವಳೂ ತಿಂದಿದ್ದಳು. ಆದರೆ ಇವಳಿಗೆ ಕೊಟ್ಟಿದ್ದ ಬಾದಾಮಿ ಹಾಲಿನಲ್ಲಿ ಕಡಿಮೆ ಪ್ರಮಾಣದಲ್ಲಿ ಮತ್ತಿನ ಪುಡಿ ಬೆರೆಸಲಾಯಿತು.

ಅವಳು ತುಂಬಾ ಕಷ್ಟದಿಂದ ನಿಂತಿದ್ದಾಳೆ. ಆಗ ಅಲ್ಲಿಗೆ ಬಂದನು. ಸಿನಿಮಾಗಳಲ್ಲಿ ವಿಲನ್ ಪಾತ್ರ ಮಾಡುತ್ತಿದ್ದ, ಪ್ರಭಾವಶಾಲಿ ಶ್ರೀಮಂತ ರೈಮಂಡ್ ರೇವಂತ್...!

ಅಶ್ವಿನಿಗೌಡ ಅವನ ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದಾಳೆ. ಅವಳನ್ನು ಏಕಾಂತದಲ್ಲಿ ಭೇಟಿ ಮಾಡಿ ತನ್ನಾಸೆ ಹೇಳಿಕೊಂಡಿದ್ದನು.

ನೀನು ಅಪರೂಪದ ಸೌಂದರ್ಯವತಿ. ನನ್ನನ್ನು ಮದುವೆ ಆಗುತ್ತೀಯ? ಕೋಟಿಗಳ ಆಸ್ತಿಗೆ ಯಜಮಾನಿ ಆಗುತ್ತೀಯ. ನಾನೇ ಸಿನಿಮಾಗಳಲ್ಲಿ ಪ್ರೊಡ್ಯೂಸ್ ಮಾಡಿ ನಿನ್ನನ್ನು ಹೀರೋಯಿನ್ ಮಾಡ್ತೀನಿ ಎಂದು ಆಸೆ ತೋರಿಸಿ ಆಕರ್ಷಿಸುವ ಪ್ರಯತ್ನ ಮಾಡಿದ್ದನು.

ಅವಳು ತಿರಸ್ಕರಿಸಿದ್ದಳು. ಹಲವಾರು ಸಲ ಒತ್ತಾಯ ಮಾಡಿದ್ದರಿಂದ ಬೇಸತ್ತು ಹೋಗಿದ್ದ ಅಶ್ವಿನಿ ಅವನ ಬಾಹ್ಯರೂಪದ ಬಗ್ಗೆ ಅವಮಾನ ಆಗುವ ರೀತಿ ಮಾತಾಡಿದ್ದಳು. ನೀನು ಸಾವಿರ ಕೋಟಿ ಶ್ರೀಮಂತನಾದರೂ ಸಹ ನಿನ್ನಂತ ಕುರೂಪಿಯನ್ನು ಮದುವೆ ಆಗಲಾರೆ ಎಂದಿದ್ದಳು. ನಾಳೆಯಿಂದ ನಾನು ಕೆಲಸಕ್ಕೆ ಬರೋಲ್ಲ ಎಂದಿದ್ದಳು.

ಈಗ ಅವನ ಎದುರಿಗೆ ಇದ್ದಾಳೆ! ರೈಮಂಡ್ ರೇವಂತ್ ಇವಳಿಗೆ ವಿಸ್ಕಿ ಕುಡಿಸಲು ಪ್ರಯತ್ನ ಮಾಡಿದನು. ತನ್ನೆಲ್ಲಾ ವಿಲ್ ಪವರ್ ಅನ್ನು ಒಗ್ಗೂಡಿಸಿಕೊಂಡು ಬಲವಾಗಿ ಜಾಡಿಸಿದ್ದಳು. ಈ ರಾಕ್ಷಸ ಕೆರಳಿ ಅವಳ ಮೇಲೆ ಆಕ್ರಮಣ ಮಾಡಿದ್ದನು.

ಅಶ್ವಿನಿ ಕರಾಟೆಪಟು! ಅಂತಹ ಸ್ಥಿತಿಯಲ್ಲಿ ಸಹ ಅವನ ಜೊತೆ ಹೋರಾಡಿ ತಪ್ಪಿಸಿಕೊಂಡು ಹೋಗಿ ಪೊಲೀಸರಿಗೆ ಕಂಪ್ಲೆಂಟ್ ಕೊಟ್ಟಿದ್ದಳು. ಪೊಲೀಸರು ಬಂಧಿಸಿದ್ದಾರೆ. ತನಿಖೆ ನಡೆಯುತ್ತಿದೆ.

ಮಂದಾರ, ಅಶ್ವಿನಿ, ಮುಂತಾದ ನಾಲ್ಕು ಮಂದಿ ಚೆಲುವೆಯರನ್ನು ಮದುವೆ ಆಗಲು ಒತ್ತಾಯ ಮಾಡಿದ್ದನು. ಅವರು ತಿರಸ್ಕರಿಸಿ ಅವಮಾನ ಮಾಡಿದ್ದರಿಂದ, ಅವರ ಮೇಲೆ ಸೇಡು ತೀರಿಸಿಕೊಳ್ಳಲು ವಿಲಕ್ಷಣ ಆಟ ಆಡಿದ್ದನು. ಇವನ ಬಂಧನದ ಸುದ್ದಿ ತಿಳಿದು ಮಂದಾರ ಸಹ ಎಲ್ಲಾ ರಹಸ್ಯ ಹೇಳಿದ್ದಳು. ☯

# ತೆಲುಗು ಪ್ರೇಕ್ಷಕರಿಂದಲೇ ಬ್ಯಾಡ್ ಟಾಕ್ ಬಂದಾಗ ಡಿಪ್ರೆಷನ್‌ಗೆ ಹೋಗಿದ್ದೆ: ರಾಜಮೌಳಿ



ತೆಲುಗಿನ ಖ್ಯಾತ ನಿರ್ದೇಶಕ ರಾಜಮೌಳಿ ಸೂಪರ್ ಹಿಟ್ ಸಿನಿಮಾಗಳ ಸರದಾರ. 100% ಸಕ್ಸಸ್ ರೇಟ್ ಹೊಂದಿರುವ ಫಿಲ್ಮ್ ಮೇಕರ್ಸ್. ಒಂದಕ್ಕಿಂತ ಒಂದು ವಿಭಿನ್ನ ಸಿನಿಮಾಗಳನ್ನು ಮಾಡಿ ಗೆದ್ದ ಜಾದೂಗಾರ. ದೊಡ್ಡ ದೊಡ್ಡ ಕನಸುಗಳನ್ನು ಕಂಡು ಅದನ್ನು ಸಾಕಾರಗೊಳಿಸಿ ಹಾಲಿವುಡ್ ಮಂದಿ ಕೂಡ ಮೆಚ್ಚುವಂತಹ ಚಿತ್ರಗಳನ್ನು ಜಕ್ಕಣ್ಣ ಕಟ್ಟಿಕೊಟ್ಟಿದ್ದಾರೆ.

ಎಸ್.ಎಸ್. ರಾಜಮೌಳಿ ಸಿನಿಮಾ ಅಂದರೆ ಇಡೀ ಭಾರತೀಯ ಚಿತ್ರರಂಗವೇ ತಿರುಗಿ ನೋಡುತ್ತದೆ. ಬ್ಲಾಕ್‌ಬಸ್ಟರ್ 'RRR' ಬಳಿಕ ಮಹೇಶ್ ಬಾಬು ಕಾಂಬಿನೇಷನ್‌ನಲ್ಲಿ ಜಕ್ಕಣ್ಣ ಸಿನಿಮಾ ಮಾಡುತ್ತಿದ್ದಾರೆ. ಮುಂದಿನ ತಿಂಗಳು ಸಿನಿಮಾ ಶುರುವಾಗಲಿದೆ. ಈ ಭಾರಿ ಪ್ಯಾನ್ ವರ್ಲ್ಡ್ ಮಟ್ಟದಲ್ಲಿ ಸಿನಿಮಾ ತೆರೆಗೆ ತರುವ ಪ್ರಯತ್ನ ನಡೀತಿದೆ.

ಕರ್ನಾಟಕ ಮೂಲದ ರಾಜಮೌಳಿ ಪ್ರತಿಭೆ ಬಗ್ಗೆ ದೂಸ್ರಾ ಮಾತಿಲ್ಲ, ಆದರೆ ಆ ದಿನ ತಮ್ಮ ಚಿತ್ರಕ್ಕೆ ಪ್ರೇಕ್ಷಕರ ರೆಸ್ಪಾನ್ಸ್ ನೋಡಿ ಅಕ್ಷರಶಃ ಡಿಪ್ರೆಶನ್‌ಗೆ ಹೋಗುವಂತಾಗಿತ್ತು ಎಂದು ಜಕ್ಕಣ್ಣ ಶಾಕಿಂಗ್ ಸಂಗತಿ ಬಿಚ್ಚಿಟ್ಟಿದ್ದಾರೆ. ಕಳೆದ ವರ್ಷ ಸಂದರ್ಶನವೊಂದರಲ್ಲಿ ಮೌಳಿ ಮಾತನಾಡಿದ್ದ ವೀಡಿಯೋ ಈಗ ವೈರಲ್ ಆಗುತ್ತಿದೆ. ‘ಬಾಹುಬಲಿ-1’ ರಿಲೀಸ್ ದಿನ ನನಗೆ ಅಂತಹ ಅನುಭವ ಆಗಿತ್ತು ಎಂದು ಹೇಳಿದ್ದಾರೆ.

ಭಾರತೀಯ ಚಿತ್ರರಂಗದಲ್ಲಿ ಹೊಸ ದಾಖಲೆ ಬರೆದ ಸಿನಿಮಾ ಬಾಹುಬಲಿ ಸರಣಿ. ಪ್ಯಾನ್ ಇಂಡಿಯಾ ಎನ್ನುವ ಕಾನ್ಸೆಪ್ಟ್ ಹುಟ್ಟುಹಾಕಿ ಸೌತ್ ಸಿನಿ ದುನಿಯಾ ದಿಕ್ಕು ಬದಲಿಸಿದವರು ಜಕ್ಕಣ್ಣ. ಆದರೆ ಅದೇ ಚಿತ್ರಕ್ಕೆ ಮೊದಲ ದಿನ ತೆಲುಗು ಪ್ರೇಕ್ಷಕರ ಪ್ರತಿಕ್ರಿಯೆ ಕಂಡು ಮೌಳಿ ಶಾಕ್ ಆಗಿದ್ದರು. ಕಾರಣ ಚಿತ್ರಕ್ಕೆ ಆಂಧ್ರ, ತೆಲಂಗಾಣದಲ್ಲಿ ಮಿಶ್ರಪ್ರತಿಕ್ರಿಯೆ ಸಿಕ್ಕಿತ್ತು. ಬಳಿಕ ಸಿನಿಮಾ ನಿಧಾನವಾಗಿ ಗೆದ್ದು ಬೀಗಿತು.

ಪ್ರಭಾಸ್ ನಟನೆಯ ‘ಬಾಹುಬಲಿ-1’ ಸಿನಿಮಾ 2015ರ ಜುಲೈ 10ರಂದು ತೆರೆಗೆ ಬಂದಿತ್ತು. ರಾಜಮೌಳಿ ಕಟ್ಟಿಕೊಟ್ಟ ಮಾಹಿಷ್ಮತಿ ಪ್ರಪಂಚ ಕಂಡು ಪ್ರೇಕ್ಷಕರು ಹುಬ್ಬೇರಿಸಿದ್ದರು. ಹಾಲಿವುಡ್ ಚಿತ್ರಗಳಲ್ಲಿ ಇಂತಹದ್ದು ಬಹಳ ನೋಡಿದ್ದರೂ ನಮ್ಮ ಸಿನಿಮಾದಲ್ಲಿ ಅದು ಅದ್ಭುತ ಪ್ರಯತ್ನವೇ ಆಗಿತ್ತು. ಇನ್ನು ಪ್ರಭಾಸ್, ರಾಣಾ, ಅನುಷ್ಕಾ ಶೆಟ್ಟಿ, ರಮ್ಯಾಕೃಷ್ಣ ಅಭಿನಯವಂತೂ ಚಿತ್ರಕ್ಕೆ ಜೀವಾಳವಾಗಿತ್ತು. ಅವತ್ತಿನ ಕಾಲಕ್ಕೆ ಅಂದಾಜು 180 ಕೋಟಿ ರೂ. ಬಜೆಟ್‌ನಲ್ಲಿ ಸಿನಿಮಾ ತೆರೆಗೆ ಬಂದಿತ್ತು.

‘ಬಾಹುಬಲಿ-1’ ಸಿನಿಮಾ ಅಂದಾಜು 600 ಕೋಟಿ ರೂ. ಗ್ರಾಸ್ ಕಲೆಕ್ಷನ್ ಮಾಡಿ ದಾಖಲೆ ಬರೆದಿತ್ತು. ದೇಶ ವಿದೇಶಗಳಲ್ಲಿ ಸಿನಿಮಾ ತೆರೆಗಪ್ಪಳಿಸಿ ಸದ್ದು ಮಾಡಿತ್ತು. ದೇಶಾದ್ಯಂತ ಚಿತ್ರಕ್ಕೆ ಅದ್ಭುತ ರೆಸ್ಪಾನ್ಸ್ ಸಿಕ್ಕಿತ್ತು. ಆದರೆ ಆಂಧ್ರದಲ್ಲಿ ಮೊದಲ ಒಂದ ವಾರ ನೀರಸ ಪ್ರತಿಕ್ರಿಯೆ ಸಿಕ್ಕಿತ್ತು. ಪ್ರಭಾಸ್ ಸಿನಿಮಾ ಮೇಲೆ ಭಾರೀ ನಿರೀಕ್ಷೆ ಇಟ್ಟುಕೊಂಡು ಚಿತ್ರಮಂದಿರಕ್ಕೆ ಹೋದವರು ನಿರಾಸೆಗೊಂಡಿದ್ದರು. ಆದರೆ ಬಳಿಕ ಫ್ಯಾಮಿಲಿ ಆಡಿಯೆನ್ಸ್ ಬಂದು ಸಿನಿಮಾ ಹೊತ್ತು ಮೆರೆಸಿದರು.

ನಿಮ್ಮ 22 ವರ್ಷಗಳ ಸಿನಿ ಬದುಕಿನಲ್ಲಿ ಬಹಳ ಕುಗ್ಗಿದ್ದು ಡಿಪ್ರೆಷನ್‌ಗೆ ಹೋದಂತ ಅನುಭವ ಆಗಿದ್ದು ಯಾವಾಗ ಎನ್ನುವ ಪ್ರಶ್ನೆಗೆ ‘ಬಾಹುಬಲಿ-1’ ರಿಲೀಸ್ ದಿನ ಎಂದು ರಾಜಮೌಳಿ ಹೇಳಿದ್ದಾರೆ. ಅದು ಫಸ್ಟ್ ಪ್ಯಾನ್ ಇಂಡಿಯಾ ಸಿನಿಮಾ ಆಗಿತ್ತು. ನಾವು ದೇಶ ವಿದೇಶಗಳಲ್ಲಿ ಸಿನಿಮಾ ರಿಲೀಸ್ ಮಾಡಿದ್ದೆವು. ಎಲ್ಲಾ ಕಡೆ ನಮಗೆ ಪಾಸಿಟಿವ್ ಟಾಕ್ ಬಂದಿತ್ತು. ಆದರೆ ಹೆಚ್ಚು ಹಣ ಬರಬೇಕಿದ್ದ ಆಂಧ್ರ, ತೆಲಂಗಾಣದಲ್ಲೇ ಬ್ಯಾಡ್ ಟಾಕ್ ಬಂದಿತ್ತು ಎಂದು ಮೌಳಿ ನೆನಪಿಸಿಕೊಂಡಿದ್ದಾರೆ.

ಮೊದಲ ದಿನ ‘ಬಾಹುಬಲಿ-1’ ಸಿನಿಮಾ ನೋಡಿದ ತೆಲುಗು ಪ್ರೇಕ್ಷಕರು ಇದು ಡಿಸಾಸ್ಟರ್ ಸಿನಿಮಾ ಎಂದುಬಿಟ್ಟಿದ್ದರು. ನಿರ್ಮಾಪಕರು ಸಾಕಷ್ಟು ಹಣ ಹಾಕಿದ್ದರು. ನನ್ನನ್ನು 3 ವರ್ಷ ನಂಬಿದ್ದ ನಿರ್ಮಾಪಕ ಕುಸಿದು ಹೋಗಿದ್ದರು. ಮತ್ತೆ ಮೇಲೆ ಏಳುವ ಸಾಧ್ಯವಿಲ್ಲ ಎನ್ನುವಂತೆ ಆಗಿತ್ತು. ಅದು ನನ್ನ ಡಿಪ್ರೆಷನ್ ಮೊಮೆಂಟ್ ಎಂದು ಮೌಳಿ ವಿವರಿಸಿದ್ದರು.



# ನೀನು ವರ್ಜಿ? ನೇರ ಪ್ರಶ್ನೆಗೆ ಸೋನು ಶ್ರೀನಿವಾಸ್ ಗೌಡ ಪ್ರತಿಕ್ರಿಯೆ

ರೀಲ್ಸ್ ರಾಣಿ ಸೋನು ಶ್ರೀನಿವಾಸ್ ಗೌಡ ಚಿತ್ರ ವಿಚಿತ್ರ ಕಾರಣಕ್ಕೆ ಸುದ್ದಿ ಆಗುತ್ತಿರುತ್ತಾರೆ. ಸೋಶಿಯಲ್ ಮೀಡಿಯಾದಲ್ಲಿ ಸಖತ್ ಆಕ್ಟೀವ್ ಆಗಿರುವ ಬೆಡಗಿ ಆಗಾಗ್ಗೆ ರೀಲ್ಸ್, ವ್ಲಾಗ್ ವೀಡಿಯೋ ಮಾಡಿ ಪೋಸ್ಟ್ ಮಾಡುತ್ತಿದ್ದಾರೆ. ಆಕೆಯ ಬಗ್ಗೆ ನೆಗೆಟಿವ್ ಕಾಮೆಂಟ್ಸ್ ಜಾಸ್ತಿ ಬರುತ್ತದೆ. ಅದಕ್ಕೆಲ್ಲಾ ತಲೆಕೆಡಿಸಿಕೊಳ್ಳದೇ ತಾನಾಯ್ತು ತಮ್ಮ ಕೆಲಸ ಆಯ್ತು ಎಂದು ಇರುತ್ತಾರೆ.



ಬಿಗ್‌ಬಾಸ್ ಓಟಿಟಿ ಶೋಗಳು ಸೋನು ಹೋಗಿ ಬಂದಿದ್ದಾರೆ. ಇನ್ನು ಕೆಲ ದಿನಗಳ ಹಿಂದೆ ಬಾಲಕಿಯೊಬ್ಬಳನ್ನು ದತ್ತು ತೆಗೆದುಕೊಂಡ ವಿಚಾರಕ್ಕೆ ದೂರು ದಾಖಲಾಗಿತ್ತು. ಪ್ರಕರಣ ಸಂಬಂಧ ಬಂಧನವಾಗಿ ಸೆರೆವಾಸ ಸಹ ಅನುಭವಿಸುವಂತಾಯಿತು. ಕೊನೆಗೆ ಜಾಮೀನು ಪಡೆದು ಸೋನು ಹೊರ ಬಂದಿದ್ದರು.

ಸದ್ಯ ಯೂಟ್ಯೂಬ್‌ನಲ್ಲಿ ಲೈವ್ ಮಾಡಿ ಅಭಿಮಾನಿಗಳ ಪ್ರಶ್ನೆಗಳಿಗೆ ಸೋನು ಉತ್ತರಿಸಿದ್ದಾರೆ. ಆ ವೀಡಿಯೋವನ್ನು ಯೂಟ್ಯೂಬ್‌ನಲ್ಲಿ ಹಂಚಿಕೊಂಡಿದ್ದಾರೆ. ಈ ವೇಳೆ ಚಿತ್ರ ವಿಚಿತ್ರ ಪ್ರಶ್ನೆಗಳು ಎದುರಾಗಿದೆ. ಅದರಲ್ಲಿ ಕೆಲವನ್ನು ಓದಿ ಉತ್ತರ ಕೊಟ್ಟಿದ್ದಾರೆ. ಕೆಲವು ನೆಗೆಟಿವ್ ಪ್ರಶ್ನೆಗಳ ಬಗ್ಗೆ ಖಾರವಾಗಿಯೇ ಪ್ರತಿಕ್ರಿಯಿಸಿದ್ದಾರೆ.

ಅಭಿಮಾನಿಯೊಬ್ಬರು ನಿಮಗೆ ಯೂಟ್ಯೂಬ್‌ನಿಂದ ಎಷ್ಟು ಆದಾಯ ಬರುತ್ತದೆ ಎಂದು ಕೇಳಿದ್ದಾರೆ. ಇದಕ್ಕೆ ಉತ್ತರಿಸಿರುವ ಸೋನು ನಾನು ಸುಳ್ಳು ಹೇಳಲ್ಲ, ನಾನು ಮೊದಲು ಚಾನಲ್ ಓಪನ್ ಮಾಡಿದಾಗ ಮೊದಲ 2 ತಿಂಗಳಿಗೆ 70 ಸಾವಿರ ಬಂದಿತ್ತು. ಮಾಲ್ಡೀವ್ಸ್‌ಗೆ ಹೋದಾಗ ಜಾಸ್ತಿ ವೀಡಿಯೋ ಮಾಡಿದ್ದೆ, ಆಗ 2 ಲಕ್ಷ 80 ಸಾವಿರ ಆದಾಯ ಬಂದಿತ್ತು. ಅದೇ ಹೆಚ್ಚು, ಈಗ ನಿಯಮಿತವಾಗಿ ವೀಡಿಯೋ ಹಾಕಿದರೆ 1 ಲಕ್ಷ ರೂ. ವರೆಗೆ ಬರುತ್ತದೆ ಎಂದಿದ್ದಾರೆ.

ನಿಮ್ಮ ಮದುವೆ ಯಾವಾಗ ಎನ್ನುವ ಪ್ರಶ್ನೆಗೆ ಸಾಕಷ್ಟು ಜನ ಇದೇ ಪ್ರಶ್ನೆ ಕೇಳುತ್ತಿದ್ದಾರೆ. ಖಂಡಿತ ಆದಷ್ಟು ಬೇಗ ನಾನು ಮದುವೆ ಆಗುತ್ತೇನೆ. ಹುಡುಗ ಯಾರು ಎನ್ನುವ ಬಗ್ಗೆಯೂ ವೀಡಿಯೋ ಮಾಡಿ ಹೇಳುತ್ತೇನೆ. ಹುಡುಗನ ಫೋಟೊ ಕೂಡ ರಿವೀಲ್ ಮಾಡ್ತೀನಿ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಸೋನು ಶ್ರೀನಿವಾಸ್ ಗೌಡ ದಪ್ಪ ಆಗಿದ್ದಾರೆ. ಅದಕ್ಕೆ ಕಾರಣ ಏನು ಎಂದು ಅಭಿಮಾನಿಯೊಬ್ಬರು ಕೇಳಿದ್ದಾರೆ. ಕೆಲ ದಿನಗಳಿಂದ ಡಯಟ್ ಬಿಟ್ಟಿದ್ದೀನಿ. ಅಷ್ಟಾಗಿ ವರ್ಕ್‌ಔಟ್ ಸಹ ಮಾಡುತ್ತಿಲ್ಲ, ಅದಕ್ಕೆ ದಪ್ಪ ಆಗಿದ್ದೀನಿ. ಮತ್ತೆ ಡಯಟ್ ಶುರು ಮಾಡಬೇಕು. ನನ್ನ **Lower body** ದಪ್ಪ ಮಾಡ್ಕೊಳ್ಳಿ ಎಂದು ಕೆಲವರು ಹೇಳುತ್ತಾರೆ. ನಾನು ವರ್ಕೌಟ್ ಮಾಡಿ ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ, ಕಾರಣ ಅದು **heredity** ಪ್ರಾಬ್ಲಂ ಅಂತ ಗೊತ್ತಾಯ್ತು ಎಂದು ತಿಳಿಸಿದ್ದಾರೆ.

ನೆಗೆಟಿವ್ ಕಾಮೆಂಟ್ಸ್‌ನ ಯಾವ ರೀತಿ ಸ್ವೀಕರಿಸುತ್ತೀರಾ? ಎನ್ನುವ ಪ್ರಶ್ನೆಗೆ ಅದಕ್ಕೆಲ್ಲಾ ತಲೆಕೆಡಿಸಿಕೊಳ್ಳಲ್ಲ, ನಾವು ಯಾರಿಗೂ ಪಾಸಿಟಿವ್ ಮಾತಾಡಿ ಎನ್ನುವುದಕ್ಕೆ ಸಾಧ್ಯವಿಲ್ಲ. ಜೀವನದಲ್ಲಿ ಸಿಹಿ ಕಹಿ ಎರಡೂ ಇರಬೇಕು. ತುಂಬಾ ಕೆಟ್ಟ ಕಾಮೆಂಟ್ ಎನಿಸಿದಾಗ ಪಿನ್ ಮಾಡ್ತೀನಿ ಅಥವಾ ಡಿಲೀಟ್ ಮಾಡ್ತೀನಿ ಎಂದು ಉತ್ತರಿಸಿದ್ದಾರೆ.

ಕೊನೆಗೆ ನೆಟ್ಟಿಗರೊಬ್ಬರು ನೀನು? ಎಂದು ಕೆಟ್ಟ ಪ್ರಶ್ನೆ ಕೇಳಿದ್ದಾರೆ. ಅದನ್ನು ಕೂಡ ಸೋನು ಓದಿ ತಿಳಿಸಿದ್ದಾರೆ. ಇವರಿಗೆಲ್ಲಾ ಮಾನ ಮರ್ಯಾದೆ ಇಲ್ವಾ? ನಿಮಗೆ ದೊಡ್ಡ ನಮಸ್ಕಾರ. ನೀವು ಹೇಗೆ ಅಂದುಕೊಂಡರೆ ಹಾಗೆ? ತಲೆ ಕೆಡಿಸಿಕೊಳ್ಳಲ್ಲ, ಇಂತಹ ಪ್ರಶ್ನೆಗಳನ್ನು ಓದುವಂತಿಲ್ಲ, ಆದರೂ ನೀವು ಕೇಳಿದ್ದೀರಲ್ಲಾ ಎಂದು ಹೇಳ್ದೆ ಅಷ್ಟೇ ಎಂದು ಸೋನು ಹೇಳಿಕೊಂಡಿದ್ದಾರೆ. ಸದ್ಯ ಸೋನು ವೀಡಿಯೋ ಸಖತ್ ವೈರಲ್ ಆಗುತ್ತಿದೆ. ಅಭಿಮಾನಿಗಳು ಇದಕ್ಕೂ ತರಹೇವಾರಿ ಕಾಮೆಂಟ್ಸ್ ಮಾಡುತ್ತಿದ್ದಾರೆ.

# ಲಚ್ಚಿಗೆ ಅತ್ಯುತ್ತಮ ಚಿತ್ರ ಪ್ರಶಸ್ತಿ

ನಟ, ನಿರ್ಮಾಪಕ ಕೃಷ್ಣೇಗೌಡ ಅವರ ನಿರ್ಮಾಣದ ನಾನು ಕುಸುಮ ಮತ್ತು ಪಿಂಕಿ ಎಲ್ಲಿ ಚಿತ್ರಗಳು ಈಗಾಗಲೇ ಹಲವಾರು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿವೆ. ಇದೀಗ ಕೃಷ್ಣೇಗೌಡ ಅವರ ನಿರ್ಮಾಣದ ಮತ್ತೊಂದು ಚಿತ್ರವೂ ಆ ಸಾಲಿಗೆ ಸೇರಿದೆ, ನಿರ್ಮಾಣದ ಜತೆಗೆ ಕೃಷ್ಣೇಗೌಡ ಅವರೇ ನಿರ್ದೇಶನ ಮಾಡಿರುವ ಲಚ್ಚಿ ಎಂಬ ಚಿತ್ರವೂ ಸಹ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಭಾಜನವಾಗಿದೆ. ಈ ತಿಂಗಳ ಆರಂಭದಲ್ಲಿ ನಡೆದ 30ನೇ ಕೋಲ್ಕತ್ತಾ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ದೇಶ-ವಿದೇಶಗಳಿಂದ ಆಗಮಿಸಿದ್ದ ಸುಮಾರು 300ಕ್ಕೂ ಹೆಚ್ಚು ಸಿನೆಮಾಗಳು ವಿವಿಧ ವಿಭಾಗಗಳ ಸ್ಪರ್ಧೆಯಲ್ಲಿ ಪ್ರದರ್ಶನಗೊಂಡಿದ್ದವು. ಈ ಚಿತ್ರೋತ್ಸವದ ಭಾರತೀಯ ಭಾಷಾ ಚಿತ್ರಗಳ ವಿಭಾಗದಲ್ಲಿ ಕೃಷ್ಣೇಗೌಡ ಅವರ ನಿರ್ಮಾಣ ಹಾಗೂ ನಿರ್ದೇಶನದ ಲಚ್ಚಿ ಸಿನಿಮಾ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಗೆದ್ದುಕೊಂಡಿದೆ.



ಭಾರತದ ವಿವಿಧ ಭಾಷೆಗಳ ಸುಮಾರು 80ಕ್ಕೂ ಹೆಚ್ಚು ಚಲನಚಿತ್ರಗಳು ಈ ವಿಭಾಗದಲ್ಲಿ ಸ್ಪರ್ಧೆಯಲ್ಲಿದ್ದವು. ಅಂತಿಮವಾಗಿ ಕೃಷ್ಣೇಗೌಡ ಅವರ ನಿರ್ಮಾಣದ ಲಚ್ಚಿ ಚಲನಚಿತ್ರವು ಭಾರತೀಯ ಭಾಷಾ ಚಲನಚಿತ್ರಗಳ ವಿಭಾಗದಲ್ಲಿ ಮೊದಲ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಈ ಮೂಲಕ ಒಂದೂವರೆ ದಶಕದ ಬಳಿಕ ಕನ್ನಡದ ಚಿತ್ರವೊಂದಕ್ಕೆ ಕೋಲ್ಕತ್ತಾ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮೊದಲ ಅತ್ಯುತ್ತಮ ಚಿತ್ರ ಪ್ರಶಸ್ತಿ ಸಿಕ್ಕಂತಾಗಿದೆ. ಸಪ್ತಗಿರಿ ಕ್ರಿಯೇಷನ್ಸ್ ಲಾಂಛನದಲ್ಲಿ ಕೃಷ್ಣೇಗೌಡ ಅವರೇ ಚಿತ್ರಕಥೆ ಬರೆದು ನಿರ್ಮಿಸಿ, ನಿರ್ದೇಶಿಸಿರುವ ‘ಲಚ್ಚಿ’ ಚಿತ್ರವು ಮಾಜಿ ಸಚಿವೆ ಮತ್ತು ಹಿರಿಯ ಲೇಖಕಿ ಡಾ. ಬಿ.ಟಿ. ಲಲಿತಾ ನಾಯಕ್ ಅವರು ರಚಿಸಿದ ಗತಿ ಎಂಬ ಕಾದಂಬರಿಯನ್ನು ಆಧರಿಸಿ ನಿರ್ಮಾಣವಾಗಿದೆ. ತನ್ನ ಹೆಣ್ಣು ಮಗುವನ್ನು ಉಳಿಸಿಕೊಳ್ಳಲು ಹೋರಾಟ ನಡೆಸುವ ತಾಯಿಯೊಬ್ಬಳ ಹೋರಾಟದ ಕಥೆಯನ್ನು ಲಚ್ಚಿ ಚಿತ್ರದ ಮೂಲಕ ನಿರ್ದೇಶಕರು ತೆರೆಯ ಮೇಲೆ ತೆರೆದಿಟ್ಟಿದ್ದಾರೆ. ಲಚ್ಚಿ ಚಿತ್ರದ ತಾರಾಗಣದಲ್ಲಿ ಗ್ರೀಷ್ಮಾ ಶ್ರೀಧರ್, ತೇಜಸ್ವಿನಿಗೌಡ, ನಾರಾಯಣ ಸ್ವಾಮಿ, ಕಾವೇರಿ ಶ್ರೀಧರ್, ಮಹಾದೇವ ಹಡಪದ ಹಾಗೂ ಕೃಷ್ಣೇಗೌಡ ಸೇರಿದಂತೆ ಹಲವಾರು ಕಲಾವಿದರುಗಳು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಇನ್ನು ಈ ಚಿತ್ರಕ್ಕೆ ಅರ್ಜುನ್ ರಾಜ್ ಅವರ ಛಾಯಾಗ್ರಹಣ, ನಾಗೇಶ್ ಎನ್. ಅವರ ಸಂಕಲನವಿದೆ.

# ‘ಯುಐ’ ರಿಸಲ್ಟ್ ಏನು? ಪಾಸಾ-ಫೇಲಾ?




ರಿಯಲ್ ಸ್ಟಾರ್ ಡೈರೆಕ್ಷನ್ ಕ್ಯಾಪ್ ತೊಟ್ಟಿದ್ದಾರೆ ಅನ್ನೋ ಚಿಕ್ಕದೊಂದು ಸುಳಿವು ಸಿಕ್ಕರೂ ಸಾಕು ಸಿನಿಮಾ ಮಂದಿ ಅಲರ್ಟ್ ಆಗಿಬಿಡ್ತಾರೆ. ಇನ್ನು ಅವರ ಅಭಿಮಾನಿಗಳನ್ನು ಕೇಳಬೇಕಾ? ಇದೂವರೆಗೂ ಉಪ್ಪಿ ನಿರ್ದೇಶಿಸಿದ ಸಿನಿಮಾಗಳು ಆ ಮಟ್ಟಿಗೆ ಸದ್ದು ಮಾಡಿವೆ. ಹಾಗೇ ‘ಯುಐ’ ಕೂಡ ಇರುತ್ತೆ ಅಂತ ಥಿಯೇಟರ್‌ಗೆ ಹೋದವರಲ್ಲಿ ಕೆಲವರಿಗೆ ಕೊಂಚ ಮಟ್ಟಿಗೆ ನಿರಾಸೆ ಆಗಿದ್ದು ನಿಜ.

ಸಾಮಾನ್ಯ ಯಾವುದೇ ಸಿನಿಮಾ ನೋಡಿದರೂ ಸೂಪರ್, 100 ಡೇಸ್ ಅಂತ ಹೇಳಿಕೊಂಡು ಬರುತ್ತಿದ್ದ ಪ್ರೇಕ್ಷಕರು ತಲೆಕೆಡಿಸಿಕೊಂಡು ಬಂದಿದ್ದಾರೆ. ಇದೇ ಮೊದಲ ಬಾರಿಗೆ ಥಿಯೇಟರ್‌ನಿಂದ ಹೊರಬಂದು ಕೆಲವರು ಸಿನಿಮಾ ಅರ್ಥ ಆಗಿಲ್ಲ, ಫೋಕಸ್ ಸಿಕ್ಕಿಲ್ಲ, ಅಂತ ಹೇಳಿಕೊಂಡು ಹೊರಬಂದಿದ್ದರು. ಹೀಗಾಗಿ ಸಿನಿಮಾಗೆ ಮಿಶ್ರ ಪ್ರತಿಕ್ರಿಯೆ ಅಂತ ನಿರ್ಧರಿಸಿದ್ದರು.

ಆದರೆ, ಮೊದಲ ಮೂರು ದಿನ ಬಾಕ್ಸಾಫೀಸ್‌ನಲ್ಲಿ ರೆಸ್ಪಾನ್ಸ್ ಬೇರೆಯದ್ದೇ ಇತ್ತು. ಮೊದಲ ಮೂರು ದಿನಗಳ ಸರಾಸರಿ ಬಾಕ್ಸಾಫೀಸ್ 6 ಕೋಟಿ ರೂಪಾಯಿ ಇತ್ತು. ಇದು ಸ್ಯಾಂಡಲ್‌ವುಡ್ ಮಟ್ಟಿಗೆ ಒಳ್ಳೆಯ ಕಲೆಕ್ಷನ್ ಅಂತ ಟ್ರೇಡ್ ಎಕ್ಸ್‌ಪರ್ಟ್‌ಗಳೇ ಸರ್ಟಿಫಿಕೇಟ್ ಕೊಟ್ಟು ಬಿಟ್ಟಿದ್ದಾರೆ. ಆದರೆ, ಅಸಲಿ ಪರೀಕ್ಷೆ ಅಂಥ ಇದ್ದಿದ್ದು ನಾಲ್ಕನೇ ದಿನ. ಯಾಕಂದ್ರೆ ಸೋಮವಾರದ ಪರೀಕ್ಷೆಯಲ್ಲಿ ಸಿನಿಮಾ ಗೆದ್ದರೇ ಇನ್ನೊಂದು ವಾರ ತಲೆ ಭರ್ಜರಿ ಕಲೆಕ್ಷನ್ ಆಗುತ್ತೆ ಅಂತ ಲೆಕ್ಕ ಹಾಕಬಹುದು.

ರಿಯಲ್ ಸ್ಟಾರ್ ಸಿನಿಮಾ ಪ್ರೇಕ್ಷಕರಿಗೆ ಮೊದಲ ದಿನವೇ ಕಿಕ್ ಕೊಟ್ಟಿದ್ದರೆ, ಸೋಮವಾರ ಲೆಕ್ಕಕ್ಕೆ ಇರುತ್ತಿರಲಿಲ್ಲ, ಮೊದಲ ದಿನವೇ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದರಿಂದ ಮೊದಲ ಸೋಮವಾರದ ಮೇಲೆ ಎಲ್ಲರ ಕಣ್ಣು ಇತ್ತು. ನಿರೀಕ್ಷೆಯಂತೆ ನಾಲ್ಕನೇ ದಿನ ಕಲೆಕ್ಷನ್ ಡ್ರಾಪ್ ಆಗಿದೆ. ಶೇ. 50ರಷ್ಟು ಕಲೆಕ್ಷನ್ ಡ್ರಾಪ್ ಆಗಿದೆ ಎಂದು sacnilk.com ವರದಿ ಮಾಡಿದೆ. ಅಂದರೆ, 4ನೇ ದಿನ ಈ ಸಿನಿಮಾ 2.35 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ ಎಂದು ವರದಿ ಮಾಡಿದೆ.

‘ಯುಐ’ ಮೊದಲ ಮೂರು ದಿನಗಳಲ್ಲಿ ಭರ್ಜರಿ ಕಲೆಕ್ಷನ್ ಆಗಿತ್ತು. ಆದರೆ, ನಾಲ್ಕನೇ ದಿನ ಕಲೆಕ್ಷನ್ ಡ್ರಾಪ್ ಆಗಿದ್ದರಿಂದ ಕಲೆಕ್ಷನ್ ನಿರೀಕ್ಷೆ ಮಾಡಿದಷ್ಟು ರೀಚ್ ಆಗಲಿಲ್ಲ, ಇದು ಎಲ್ಲಾ ಸೂಪರ್ ಸ್ಟಾರ್ ಸಿನಿಮಾ ಆಗುತ್ತೆ. ಈ ಹೀಗಾಗಿ ಸೋಮವಾರದ ಕಲೆಕ್ಷನ್‌ಗೆ ಟ್ರೇಡ್ ಎಕ್ಸ್‌ಪರ್ಟ್‌ಗಳಿಗೆ ತೃಪ್ತಿ ಕೊಟ್ಟಿದೆ. sacnilk ವರದಿ ಪ್ರಕಾರ ನಾಲ್ಕು ದಿನಗಳ ಕಲೆಕ್ಷನ್ ಹೀಗಿದೆ.

ಎರಡನೇ ದಿನ 5.60 ಕೋಟಿ ರೂ. ಮೂರನೇ ದಿನ 5.95 ಕೋಟಿ ರೂ. ನಾಲ್ಕುನೇ ದಿನ 2.35 ಕೋಟಿ ರೂ. ಒಟ್ಟು 20.85 ಕೋಟಿ ರೂ.

‘ಯುಐ’ಗೆ ಇಯರ್ ಎಂಡ್ ಲಾಭ ಪಡೆದುಕೊಳ್ಳುವ ಅವಕಾಶವಿತ್ತು. ಜನರು ಜಾಲಿ ಮೂಡ್‌ನಲ್ಲಿ ಇದ್ದು, ಸಿನಿಮಾ ನೋಡುವುದಕ್ಕೆ ಥಿಯೇಟರ್‌ಗೆ ನುಗ್ಗುತ್ತಿದ್ದರು. ಎ, ಉಪೇಂದ್ರ ರೀತಿ ಬಿಡುಗಡೆ ಬಳಿಕ ‘ಯುಐ’ ಸಿನಿಮಾನೂ ಕ್ರೇಜ್ ಹುಟ್ಟಾಕಿದ್ದರೆ, ಸಂಪೂರ್ಣವಾಗಿ ಲಾಭವನ್ನು ಪಡೆಯಬಹುದಿತ್ತು. ಕ್ರಿಸ್‌ಮಸ್, ಇಯರ್ ಎಂಡ್ ಲಾಭ ಪಡೆದುಕೊಳ್ಳುವುದಕ್ಕೆ ಇನ್ನೂ ಅವಕಾಶವಿದೆ. ಇದೇ ರೀತಿ ಇನ್ನೊಂದು ವಾರ ಕಲೆಕ್ಷನ್ ಆದರೆ, ನಿರ್ಮಾಪಕರು ಲಾಭದಲ್ಲಿ ಇರುತ್ತಾರೆ.

ಕ್ರಿಸ್‌ಮಸ್‌ಗೆ ‘ಮ್ಯಾಕ್ಸ್’ ರಿಲೀಸ್ ಆಗುತ್ತಿರೋದು ಖಂಡಿತವಾಗಿಯೂ ‘ಯುಐ’ ಎಫೆಕ್ಟ್ ಆಗಬಹುದು. ಒಂದು ವೇಳೆ ‘ಮ್ಯಾಕ್ಸ್’ ಪ್ರೇಕ್ಷಕರಿಗೆ ಇಷ್ಟ ಆದರೆ, ಎಲ್ಲರ ಗಮನ ಆ ಕಡೆಗೆ ಹೋಗಬಹುದು. ಇದು ‘ಯುಐ’ಗೆ ಹಿನ್ನಡೆಯಾಗುವ ಸಾಧ್ಯತೆಯಿದೆ. ಏನಕ್ಕೂ ಡಿಸೆಂಬರ್ 25ಕ್ಕೆ ಇದೆಲ್ಲದಕ್ಕೂ ಒಂದು ಕ್ಲಾರಿಟಿ ಅಂತೂ ಸಿಗಲಿದೆ. ಸದ್ಯ ‘ಯುಐ’ 25 ಕೋಟಿ ಕ್ಲಬ್ ಸೇರುವ ಸನಿಹದಲ್ಲಿ ಇದೆ. ಈ ವಾರದ ಕೊನೆಯಲ್ಲಿ ಆರಾಮಾಗಿ 25 ಕೋಟಿ ರೂ. ಕಲೆಕ್ಷನ್ ಮಾಡುವುದರಲ್ಲಿ ಅನುಮಾನವಿಲ್ಲ.

## ಥ್ರಿಲ್ಲರ್ ‘ಎಫ್‌ಐಆರ್ 6ಟು6’ ಚಿತ್ರ ಸಂಪೂರ್ಣವಾಗಿ ರಾತ್ರಿಯಲ್ಲೇ ಚಿತ್ರೀಕರಣ

2024ರಲ್ಲಿ ಕೇಸ್ ಆಫ್ ಕೊಂಡಾಣ ಮತ್ತು ಗ್ರೇ ಗೇಮ್ಸ್‌ನಂತಹ ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದ ನಟ ವಿಜಯ ರಾಘವೇಂದ್ರ ಇದೀಗ ಎಫ್‌ಐಆರ್ 6ಟು6 ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮುಂದಿನ ವರ್ಷ ಜನವರಿಯಲ್ಲಿ ಚಿತ್ರ ಬಿಡುಗಡೆಯಾಗಲಿದ್ದು, ಚಿತ್ರದ ಆಡಿಯೋ ಮತ್ತು ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಪಟ್ಟಾಭಿಷೇಕ ಖ್ಯಾತಿಯ ಭಾಗ್ಯ ರಮೇಶ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಕೆ.ವಿ. ರಮಣರಾಜ್ ನಿರ್ದೇಶನದ ಎಫ್‌ಐಆರ್ 6ಟು 6ಕ್ಕೆ ಒಂಗಿ ಅವರ ಛಾಯಾಗ್ರಹಣವಿದೆ. ಚಿತ್ರಕ್ಕೆ ಸತೀಶ್ ಬಾಬು ಮತ್ತು ಎಂ.ಎಸ್. ತ್ಯಾಗರಾಜ್ ಅವರ ಸಂಗೀತ ಸಂಯೋಜನೆಯಿದೆ.

ಇದೊಂದು ಆ್ಯಕ್ಷನ್, ಥ್ರಿಲ್ಲರ್ ಸಿನಿಮಾ ಆಗಿದ್ದು, ಇಡೀ ಚಿತ್ರವನ್ನು ನಾವು ರಾತ್ರಿ ವೇಳೆಯಲ್ಲಿಯೇ ಚಿತ್ರೀಕರಿಸಿದ್ದೇವೆ. ಈ ಸಿನಿಮಾಗಾಗಿ ಹಲವಾರು ರಾತ್ರಿಗಳನ್ನು ಮೀಸಲಿಟ್ಟಿದ್ದೇವೆ. ಸಾಕಷ್ಟು ರಾತ್ರಿ ನಿದ್ದೆ ಬಿಟ್ಟು ಕಷ್ಟಪಟ್ಟು, ಇಷ್ಟಪಟ್ಟು ಸಿನಿಮಾ ಮಾಡಿದ್ದೇವೆ. ನಿರ್ದೇಶಕರು ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದಾರೆ. ಇದೊಂದು ಆ್ಯಕ್ಷನ್ ಚಿತ್ರವಾಗಿದ್ದು, ಕೆಲವೊಮ್ಮೆ ನಾವು ಬೆಳಿಗ್ಗೆ 4 ಗಂಟೆವರೆಗೆ ಚಿತ್ರೀಕರಿಸಿದ್ದೇವೆ. ಥ್ರಿಲ್ಲರ್ ಸ್ಪೆಷಲಿಸ್ಟ್ ಮಂಜು ಅವರೊಂದಿಗಿನ ಸಾಹಸ ದೃಶ್ಯಗಳು ಉತ್ತಮವಾಗಿವೆ’ ಎನ್ನುತ್ತಾರೆ.

ನಿರ್ಮಾಪಕಿ ಭಾಗ್ಯ ರಮೇಶ್ ಮಾತನಾಡಿ, ‘ಈ ಹಿಂದೆ ನಾವು ಪಟ್ಟಾಭಿಷೇಕ ಚಿತ್ರವನ್ನು ಮಾಡಿದ್ದೇವೆ. ರಮಣರಾಜ್ ಅವರು ಈ ಕಥೆಯನ್ನು ನಮ್ಮ ಬಳಿಗೆ ತಂದಾಗ, ಅದು ತುಂಬಾ ಆಸಕ್ತಿದಾಯಕವಾಗಿದ್ದರಿಂದ ಈ ಚಿತ್ರವನ್ನು ಮಾಡಲು ನಿರ್ಧರಿಸಿದೆವು’ ಎಂದು ಹೇಳಿದರು. ಚಿತ್ರದಲ್ಲಿ ಸಿರಿ ರಾಜ್, ಸ್ವಾತಿ ಮತ್ತು ಯಶ ಶೆಟ್ಟಿ ಸೇರಿ



ಮೂವರು ನಾಯಕಿಯರು ಇದ್ದಾರೆ. ತಮ್ಮ ಪಾತ್ರದ ಬಗ್ಗೆ ಮಾತನಾಡುವ ಸಿರಿ ರಾಜ್, ’ನಾನು ಭಯದಿಂದ ಬದುಕುವ ಹುಡುಗಿಯಾಗಿ ನಟಿಸಿದ್ದೇನೆ ಮತ್ತು ಪಾತ್ರವನ್ನು ತುಂಬಾ ಚೆನ್ನಾಗಿ ಹೆಣೆಯಲಾಗಿದೆ’ ಎಂದು ಹೇಳುತ್ತಾರೆ.

ಈ ಹಿಂದೆ ತೆಲುಗು ನಿರ್ದೇಶಕ ಜೆ.ಡಿ. ಚಕ್ರವರ್ತಿ ಅವರೊಂದಿಗೆ ಬಿಡುಗಡೆಯಾಗದ ಚಿತ್ರವೊಂದರಲ್ಲಿ ಕೆಲಸ ಮಾಡಿದ್ದ ನಿರ್ದೇಶಕ ರಮಣರಾಜ್, ಎಫ್‌ಐಆರ್ 6ಟು6 ಮೂಲಕ ಎರಡನೇ ಬಾರಿಗೆ ನಿರ್ದೇಶನಕ್ಕಿಳಿದಿದ್ದಾರೆ. ‘ಈ ಚಿತ್ರದ ಪರಿಕಲ್ಪನೆಯು ನಾವು ಜೆ.ಡಿಯ. ಚಕ್ರವರ್ತಿ ಅವರೊಂದಿಗೆ ಕೆಲಸ ಮಾಡಿದಂತೆಯೇ ಇದೆ. ಇದು ಘಟನೆಯೊಂದರಲ್ಲಿ ಸಿಕ್ಕಿಬಿದ್ದ ಯುವಕ ಮತ್ತು ಆತ ಪರಿಸ್ಥಿತಿಯನ್ನು ಹೇಗೆ ಎದುರಿಸುತ್ತಾನೆ ಎಂಬುದರ ಕುರಿತಾಗಿದೆ. ಕಥೆಯು ಸಂಜೆಯಿಂದ ಮುಂಜಾನೆಯವರೆಗೆ ನಡೆಯುತ್ತದೆ. ವಿಜಯ್ ರಾಘವೇಂದ್ರ ಅವರೊಂದಿಗೆ ಕೆಲಸ ಮಾಡಿದ್ದು ಉತ್ತಮ ಅನುಭವ. 35 ದಿನ ಇಡೀ ಚಿತ್ರವನ್ನು ರಾತ್ರಿ ವೇಳೆಯಲ್ಲಿಯೇ ಚಿತ್ರೀಕರಿಸಿದ್ದೇವೆ ಮತ್ತು ಚಿತ್ರವು ನಿಜವಾಗಿಯೂ ಚೆನ್ನಾಗಿ ಮೂಡಿಬಂದಿದೆ’ ಎಂದು ಅವರು ಹೇಳಿದರು.

## ಭಾರಿ ನಿರೀಕ್ಷೆಯಲ್ಲಿ ನಟ ಸುಮುಖ




2019ರಲ್ಲಿ ತೆರೆಕಂಡ ಯಾನ ಚಿತ್ರದ ಮೂಲಕ ವೃತ್ತಿಜೀವನವನ್ನು ಪ್ರಾರಂಭಿಸಿದ ನಟ ಸುಮುಖ 2022ರಲ್ಲಿ ಫಿಸಿಕ್ಸ್ ಟೀಚರವ ಚಿತ್ರದಲ್ಲಿಯೂ ಕಾಣಿಸಿಕೊಂಡಿದ್ದರು. ಇದೀಗ ನಿರ್ದೇಶಕ ಯೋಗರಾಜ್ ಭಟ್ ಅವರ ಮನದ ಕಡಲು ಚಿತ್ರದಲ್ಲಿ ನಟಿಸಿದ್ದಾರೆ. ಚಿತ್ರದ ಬಗ್ಗೆ ತೀವ್ರ ನಿರೀಕ್ಷೆ ಇಟ್ಟುಕೊಂಡಿರುವ ಅವರು, ಇದೊಂದು ಹೊಸ ಆರಂಭ ಮತ್ತು ಕಮರ್ಷಿಯಲ್ ಆಗಿ ಗುರುತಿಸಿಕೊಳ್ಳಲು ಮಹತ್ವದ ಹೆಜ್ಜೆಯಾಗಿದೆ ಎನ್ನುತ್ತಾರೆ.

‘ನನ್ನ ಮೊದಲ ಎರಡು ಚಿತ್ರಗಳು ಪ್ರಯತ್ನವಾಗಿದ್ದವು. ಆರಂಭದಲ್ಲಿ ಕಮರ್ಷಿಯಲ್ ಆಗಿ ಗುರುತಿಸಿಕೊಳ್ಳಲು ನನಗೆ ಅವಕಾಶವಿರಲಿಲ್ಲ, ಆದರೆ, ಈ ಚಿತ್ರ ನನಗೆ ಆ ಅವಕಾಶವನ್ನು ನೀಡಿತು. ನಾನು ಆಡಿಷನ್ ನೀಡುವ ಮೂಲಕ ಆಯ್ಕೆಯಾದೆ. ಆದರೆ, ಇಂತಹ ದೊಡ್ಡ ಯೋಜನೆಯ ಭಾಗವಾಗುವೆ ಎಂದು ನಿರೀಕ್ಷಿಸಿರಲಿಲ್ಲ’ ಎಂದು ಹೇಳುತ್ತಾರೆ ಸುಮುಖ.

ಮನದ ಕಡಲು ಚಿತ್ರದ ಭಾಗವಾಗಿರುವುದೇ ನನಗೆ ಸಿಕ್ಕ ದೊಡ್ಡ ಅವಕಾಶ. ಅದರಲ್ಲೂ ಬ್ಲಾಕ್ ಬಸ್ಟರ್ ಸಿನಿಮಾ ಮುಂಗಾರು ಮಳೆಯ ನಿರ್ದೇಶಕರಾದ ಯೋಗರಾಜ್ ಭಟ್ ಮತ್ತು ಇ. ಕೃಷ್ಣಪ್ಪ ಅವರ ಜೊತೆಯಾಗಿರುವುದು ಮತ್ತೊಂದು ಗರಿಯಾಗಿದೆ. 18 ವರ್ಷಗಳ ನಂತರ ಇಬ್ಬರೂ ಮತ್ತೆ ಒಂದಾಗುತ್ತಿದ್ದು, ಈ ಚಿತ್ರದಲ್ಲಿ ನಟಿಸುತ್ತಿರುವ ಸುಮುಖ ಸಖತ್ ಥ್ರಿಲ್ ಆಗಿದ್ದಾರೆ. ‘ಯೋಗರಾಜ್ ಭಟ್ ಅವರಿಗೆ ಮೊದಲಿಗೆ ನನ್ನ ಧ್ವನಿ ಮುಖ್ಯವಾಗಿತ್ತು. ನಂತರ ಆಡಿಷನ್ ನೀಡಿದೆ ಮತ್ತು ಆಯ್ಕೆಯೂ ಆದೆ’ ಎಂದು ಅವರು ವಿವರಿಸುತ್ತಾರೆ.

ಚಿತ್ರದ ಚಿತ್ರೀಕರಣ ಈಗಾಗಲೇ ಮುಗಿದಿದ್ದು, ಡಬ್ಬಿಂಗ್ ಕಾರ್ಯಗಳು ನಡೆಯುತ್ತಿವೆ. ಚಿತ್ರದಲ್ಲಿ ಕೆಲಸ ಮಾಡಿದ ಅನುಭವ ಹಂಚಿಕೊಳ್ಳುವ ಸುಮುಖ, ‘ನನ್ನ ವೃತ್ತಿಜೀವನ ಆರಂಭಿಸಿ ಐದು ವರ್ಷ ಕಳೆದ ಬಳಿಕ ದೊಡ್ಡ ಅವಕಾಶ ಸಿಗುತ್ತದೆ ಎಂದು ನಾನು ಭಾವಿಸಿದ್ದೆ. ಆದರೆ, ಇಷ್ಟು ಬೇಗ ಇಂತಹ ಚಿತ್ರ ಸಿಕ್ಕಿದೆ. ಇದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಅಭೂತ ಪೂರ್ವ ಸೆಟ್ ಮತ್ತು ಅನುಭವಿಗಳೊಂದಿಗೆ ಕೆಲಸ ಮಾಡುವುದು ಅತ್ಯುತ್ತಮವಾಗಿತ್ತು. ನಿರ್ದೇಶಕರು ನನ್ನನ್ನು ನಡೆಸಿಕೊಂಡ ರೀತಿಯಿಂದ ನಾನು ಬಹಳಷ್ಟು ಕಲಿತಿದ್ದೇನೆ. ಇದು ಅದ್ಭುತವಾದ ಕಲಿಕೆಯ ಅನುಭವವಾಗಿದೆ’ ಎಂದರು.

ಮನದ ಕಡಲು ಚಿತ್ರವನ್ನು 2025ರ ಆರಂಭದಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ. ನಾಯಕಿಯಾಗಿ ಚಿತ್ರದಲ್ಲಿ ಅಂಜಲಿ ಅನೀಶ್ ಮತ್ತು ರಶಿಕಾ ಶೆಟ್ಟಿ ನಟಿಸಿದ್ದಾರೆ. ಚಿತ್ರಕ್ಕೆ ವಿ. ಹರಿಕೃಷ್ಣ ಅವರ ಸಂಗೀತ ಮತ್ತು ಸಂತೋಷ್ ರೈ ಪಾತಾಜೆ ಅವರ ಛಾಯಾಗ್ರಹಣವಿದೆ.

Vol. 40 No. 29 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com